# ದಿನಾಂಕ:28-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಶೇಷ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 01 (305) / 2012-13

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ವಸ್ತುಗಳ ಸಂಸ್ಕರಣೆ ಮತ್ತು ವಿಲೇವಾರಿಗೆ ಸಂಬಂಧಿಸಿದಂತೆ ಘನ ಉಚ್ಛ ನ್ಯಾಯಾಲಯವು ಮೂಲ ದಾವೆ ಸಂಖ್ಯೆ:24739-49/2012 ಮತ್ತು 30450/2012, ದಿನಾಂಕ:22-11-2012 ರಂದು ನೀಡಿರುವ ಆದೇಶದಂತೆ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ **(KCDC)** ರವರಿಗೆ, ಸುಮಾರು ಪ್ರತಿದಿನ 75 ರಿಂದ 100 ಟನ್ ಬೇರ್ಪಡಿಸಿದ ಹಸಿ ಕಸವನ್ನು ಸ್ವೀಕರಿಸುವ ಮತ್ತು ಇತರೆ ನಿಬಂಧನೆಗಳನ್ನು ಪಾಲನೆ ಮಾಡುವ ಬಗ್ಗೆ ಸೂಚಿಸಲಾಗಿರುತ್ತದೆ.

ಘನತ್ಯಾಜ್ಯ ನಿರ್ವಹಣೆಗೆ ಗೌರವಾನ್ವಿತ ಉಚ್ಛ ನ್ಯಾಯಾಲಯವು ಮೂಲ ದಾವೆ ಸಂಖ್ಯೆ: 24739-49/2012ರ ಮೊಕದ್ದಮೆ ದಿನಾಂಕ:22-11-2012ರಲ್ಲಿ ನೀಡಿರುವ ನಿರ್ದೇಶನದಂತೆ ಪಾಲಿಕೆಯ ದಕ್ಷಿಣ ವಲಯ ಮತ್ತು ಬೊಮ್ಮನಹಳ್ಳಿ ವಲಯಗಳಿಂದ ಪ್ರತಿದಿನ ಉತ್ಪತ್ತಿಯಾಗುವ ಸುಮಾರು 75 ರಿಂದ 100 ಮೆಟ್ರಿಕ್ ಟನ್ ಹಸಿ ತ್ಯಾಜ್ಯವನ್ನು **(KCDC)** ರವರಿಗೆ ಕ್ರಮ ಕೈಗೊಳ್ಳಲು ವಹಿಸಬಹುದಾಗಿದ್ದು, ಈ ಬಗ್ಗೆ ಕೆ.ಸಿ.ಡಿ.ಸಿ ಸಂಸ್ಥೆಯವರೊಂದಿಗೆ ಸಮಾಲೋಚಿಸಿ ಚರ್ಚೆ ಮಾಡಿದ್ದು, ಸದರಿಯವರು ಕೆಳಗೆ ಕಾಣಿಸಿರುವ ಅಂಶಗಳ ಕುರಿತ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅಭಿವೃದ್ಧಿಪಡಿಸಲು ಸುಮಾರು ರೂ.4.45 ಕೋಟಿಗಳ ಅಂದಾಜು ಮೊತ್ತದ ಪ್ರಸ್ತಾವನೆಯನ್ನು ಸಲ್ಲಿಸಿ, ಸದರಿ ಮೊತ್ತವನ್ನು ಬಿ.ಬಿ.ಎಂ.ಪಿ. ವತಿಯಿಂದ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಕೆ.ಸಿ.ಡಿ.ಸಿ.ಸಂಸ್ಥೆರವರು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಹಿನ್ನೆಲೆಯಲ್ಲಿ ಕೋರಿರುವ ಒಟ್ಟಾರೆ ರೂ.4.45 ಕೋಟಿಗಳ ಮೊತ್ತದ ಕೆಳಕಂಡ ಅಂಶಗಳ ತತ್ವಶ: **(Inprinciple)** ಪ್ರಸ್ತಾವನೆಗೆ ಅನುಮೋದನೆ ಕೋರಿದೆ.

1. ಕೆ.ಸಿ.ಡಿ.ಸಿ. ಅಭಿವೃದ್ಧಿ ನಿಗಮದವರು, ವಾರ್ಡ್ ನಂ.192ರ ಸಿಂಗಸಂದ್ರದಲ್ಲಿ ಬೇರ್ಪಡಸದ ಘನತ್ಯಾಜ್ಯವನ್ನು ಸ್ಥಳಾಂತರಿಸಲು ಮತ್ತು ಹೊಸ ಘನ ತ್ಯಾಜ್ಯವನ್ನು ಶೇಖರಿಸಲು ಅಂದಾಜು ರೂ.25.00 ಲಕ್ಷಗಳು.
2. ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ಎತ್ತರವಾದ ಕಟ್ಟಡಗಳಿರುವುದರ ನೋಟವನ್ನು ತಡೆಯಲು ಎಂ.ಎಸ್. ಶೀಟ್ ಬ್ಯಾರಿಕೇಡಿಂಗ್ ನಿರ್ಮಿಸುವ ಅಂದಾಜು ಮೊತ್ತ ರೂ.2.00 ಕೋಟಿ.
3. ಕಾಂಪೌಂಡ್ ಸುತ್ತಲೂ ಗಾಳಿ ಬೀಸುವಿಕೆಯನ್ನು ತಡೆಯಲು ಮರಗಳಾಗುವ ಸಸಿಗಳನ್ನು ನೆಡುವುದು (ಬಿ.ಬಿ.ಎಂ.ಪಿ. 30 ಎಕರೆ ಸೇರಿ) ಅಂದಾಜು ಮೊತ್ತ ರೂ.20.00 ಲಕ್ಷ.
4. ಹೆಚ್.ಎಸ್.ಆರ್. ಲೇಔಟ್ ಕಡೆಯಿಂದ ಹೊಸ ಘನತ್ಯಾಜ್ಯವನ್ನು ತರಲು ಅಪ್ರೋಚ್ ರಸ್ತೆ ನಿರ್ಮಿಸುವುದು ಕಾಂಕ್ರೀಟ್ ಯಾರ್ಡ್ (ಎರಡು ಎಕರೆ) ಸುತ್ತ ಎತ್ತರವಾದ ಛಾವಣಿ ನಿರ್ಮಿಸಲು, ವೈಜ್ಞಾನಿಕವಾಗಿ ಘನತ್ಯಾಜ್ಯ ಬೇರ್ಪಡಿಸುವಿಕೆಯ ವಾಸನೆ ಮತ್ತು ನೋಟವನ್ನು ತಡೆಯಲು ಅಂದಾಜು ಮೊತ್ತ ರೂ.2.00 ಕೋಟಿ.

..................2

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:29-11-2012 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:17-12-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:24-12-2012ರ ನಿರ್ಣಯವನ್ನು ಒಪ್ಪುತ್ತಾ, ಕಾಮಗಾರಿಯನ್ನು ಪಾಲಿಕೆಯ ಎಸ್.ಡಬ್ಲ್ಯೂ.ಡಿ. ಸಿ.ಇ-2 ರವರ ಅಧೀನದಲ್ಲಿ ನಿರ್ವಹಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 24-12-2012ರ ನಿರ್ಣಯವನ್ನು ಒಪ್ಪುತ್ತಾ, ಕಾಮಗಾರಿಯನ್ನು ಪಾಲಿಕೆಯ ಎಸ್.ಡಬ್ಲ್ಯೂ.ಡಿ. ಸಿ.ಇ-2 ರವರ ಅಧೀನದಲ್ಲಿ ನಿರ್ವಹಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:28-12-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಶೇಷ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 02 (324) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಂಡೂರು ಸರ್ವೆ ನಂ.155 ರ ಉತ್ತರ ಭಾಗದಲ್ಲಿ ಬಿಓಓಟಿ ಆಧಾರದಲ್ಲಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ದಿನಾಂಕ:31-08-2009 ರಂದು ಕರಾರನ್ನು ಮಾಡಿಕೊಳ್ಳಲಾಗಿತ್ತು.

ಕರಾರಿನಂತೆ ಸದರಿ ಸಂಸ್ಥೆಗೆ ಪಾಲಿಕೆಯಿಂದ 25 ಎಕರೆ ಪ್ರದೇಶವನ್ನು 20 ವರ್ಷಗಳ ಅವಧಿಗೆ ಗುತ್ತಿಗೆ **(Lease)** ಆಧಾರದ ಮೇಲೆ ಒದಗಿಸಬೇಕಾಗಿತ್ತು.

ಕರಾರಿನಂತೆ ಸದರಿ ಸಂಸ್ಥೆಯು ಒಪ್ಪಿಗೆ ಪತ್ರ **(Letter of acceptance)** ಪಡೆದ ದಿನಾಂಕದಿಂದ 450 ದಿನಗಳೊಳಗೆ (15 ತಿಂಗಳ ಕಾಲಾವಧಿ) ಘಟಕ ಸ್ಥಾಪನೆ ಪೂರ್ಣಗೊಳಿಸಿ ಕಾರ್ಯಾರಂಭ ಮಾಡಬೇಕಿತ್ತು.

ಘಟಕ ಸ್ಥಾಪನೆಗೆ ಅವಶ್ಯವಿರುವ 25 ಎಕರೆ ಪ್ರದೇಶವನ್ನು ಪಾಲಿಕೆಯಿಂದ ಹಸ್ತಾಂತರಿಸಿ, ದಿನಾಂಕ:17-05-2010 ರಂದು ಲೀಸ್ ಅನ್ನು ನೊಂದಾಯಿಸಲಾಗಿರುತ್ತದೆ.

ಸದರಿ ದಿನಾಂಕದಿಂದ ಈವರೆಗೆ, ಸುಮಾರು 60-70 ಮೀ. ಕಾಂಪೌಂಡ್ ನಿರ್ಮಾಣದ ಹೊರತು ಇತರೆ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳದೆ ಹಾಗೂ ಸ್ಥಳೀಯ ಗ್ರಾಮ ಪಂಚಾಯಿತಿಯಿಂದ ತೀರುವಳಿ ಪಡೆಯದೆ ಇದ್ದುದರಿಂದ ಸದರಿ ಸಂಸ್ಥೆಗೆ ಈ ಬಗ್ಗೆ ಹಲವಾರು ನೋಟೀಸ್‌ಗಳನ್ನು ನೀಡಿದರೂ ಸ್ಪಂದಿಸದ ಕಾರಣ ದಿನಾಂಕ: 16-02-2012 ರಲ್ಲಿ ಅಂತಿಮ ನೋಟೀಸ್ ಜಾರಿಗೊಳಿಸಿ, ಸದರಿ ಸಂಸ್ಥೆಯೊಂದಿಗೆ ಮಾಡಿಕೊಂಡಿದ್ದ ಕರಾರನ್ನು ರದ್ದುಗೊಳಿಸಲು ಪ್ರಸ್ತಾವನೆಯನ್ನು ಟಿಪ್ಪಣಿಯೊಂದಿಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಗೆ ಸಲ್ಲಿಸಲಾಗಿತ್ತು.

ದಿನಾಂಕ: 16-07-2012 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಸಭೆಯ ವಿಷಯದ ಸಂಖ್ಯೆ:ಸಾಆಸ್ಥಾಸ/21/12-13 ರಲ್ಲಿ ಕಡತವನ್ನು ಪುನರ್ ಪರಿಶೀಲಿಸಿ ಮರು ಮಂಡಿಸಲು ತೀರ್ಮಾನಿಸಿರುತ್ತದೆ.

ಏತನ್ಮಧ್ಯೆ ಸದರಿ ಸಂಸ್ಥೆಯ ಬೆಂಗಳೂರು ಪ್ರತಿನಿಧಿಯು ದಿನಾಂಕ:23-07-2012 ರಂದು ಮುಖ್ಯ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಮತ್ತು ಕಾರ್ಯಪಾಲಕ ಅಭಿಯಂತರರು-2, ಘನತ್ಯಾಜ್ಯ ನಿರ್ವಹಣೆ ರವರನ್ನು ಹಾಗೂ ದಿನಾಂಕ: 25-07-2012 ರಂದು ಹಿಂದಿನ ಆಯುಕ್ತರನ್ನು ಭೇಟಿ ಮಾಡಿ, ವಿದ್ಯುತ್ ಘಟಕ ಸ್ಥಾಪನೆಯ ಯೋಜನೆಯನ್ನು ಆದ್ಯತೆ ಮೇಲೆ ಹಿಂದಿನ ಕರಾರಿನ ಅಡಿಯಲ್ಲಿಯೇ ಕೈಗೊಳ್ಳುವುದಾಗಿ ಅದಕ್ಕೆ ಪೂರಕವಾಗಿ ಈಗಾಗಲೇ ಸ್ಥಳೀಯ ಗ್ರಾಮ ಪಂಚಾಯಿತಿಯಿಂದ ಅನುಮತಿ ಪತ್ರ ಸಹ ಪಡೆದಿರುವುದಾಗಿ ತಿಳಿಸಿ, ಉದ್ದೇಶಿತ ಕರಾರಿನ ರದ್ದನ್ನು ಕೈಬಿಟ್ಟು ಒಂದು ಅವಕಾಶ ನೀಡಬೇಕೆಂದು ಕೋರಿ, ಪೂರಕವಾಗಿ ಪರಿಷ್ಕೃತ ಕಾರ್ಯಕ್ರಮ ಪಟ್ಟಿಯನ್ನು ಅನುಮೋದನೆಗಾಗಿ ಸಲ್ಲಿಸಿದ್ದರು.

.................2

ಸದರಿ ಸಂಸ್ಥೆಯವರು ಈ ಹಿಂದೆ ಸಲ್ಲಿಸಿದ್ದ ಪರಿಷ್ಕೃತ ಕಾರ್ಯಕ್ರಮ ಪಟ್ಟಿಯು ಕೆಳಗಿನಂತಿರುತ್ತದೆ.

| Sl. No. | Execution of work | Duration |
|---|---|---|
| 1 | Project start & completion | |
| 2 | **Preliminary activities**<br>Site clearance, compound wall, statutory clearances, financial closer, venders selection | 90 days |
| 3 | **Procurement activities**<br>Order placement for equipments, construction materials E & I materials for execution | 180 days |
| 4 | **Civil work at site**<br>Construction of major and minor units | 180 days |
| 5 | Erection and implementation of major equipments and instruments | 30 days |
| 6 | Electrical, instrumentation and mechanical works | 30 days |
| 7 | Trial rum and commissioning | 30 days |
| | Total | 540 days |

- ಪರಿಷ್ಕೃತ ಕಾರ್ಯಕ್ರಮ ಪಟ್ಟಿಯಂತೆ ಘಟಕ ಸ್ಥಾಪನೆಯ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಬಹುದೆಂದು.
- ಪ್ರಥಮ ಹಂತದಲ್ಲಿ 15 (ಹದಿನೈದು) ಎಕರೆ ಪ್ರದೇಶದಲ್ಲಿ 600 ಮೆ.ಟನ್ ಘನತ್ಯಾಜ್ಯವನ್ನು ಪ್ರತಿದಿನ ಸಂಸ್ಕರಿಸುವ ಘಟಕವನ್ನು ಮೇಲೆ ವಿವರಿಸಿರುವ ಕಾರ್ಯಕ್ರಮ ಪಟ್ಟಿಯಂತೆ 540 ದಿನಗಳ (18 ತಿಂಗಳು) ಅವಧಿಯಲ್ಲಿ ಪೂರ್ಣಗೊಳಿಸುವುದಾಗಿ.
- ಉಳಿದ 400 ಮೆ.ಟನ್ ಘನತ್ಯಾಜ್ಯವನ್ನು ಸಂಸ್ಕರಿಸಿ ವಿದ್ಯುತ್ ಉತ್ಪಾದಿಸುವ ಘಟಕವನ್ನು (ವಿಸ್ತರಣೆ) ಮುಂದಿನ 540 ದಿನಗಳ (18 ತಿಂಗಳು) ಅವಧಿಯಲ್ಲಿ ಕೈಗೊಳ್ಳುವುದಾಗಿ.
- ಮಧ್ಯಂತರ ಕ್ರಮವಾಗಿ 120 ದಿನಗಳ (04 ತಿಂಗಳು) ಅವಧಿಯೊಳಗೆ (ಫೆಬ್ರವರಿ-2013) 300 ಮೆ. ಟನ್ ಘನತ್ಯಾಜ್ಯವನ್ನು ಸ್ವೀಕರಿಸಿ ಏರೋಬಿಕ್ ಸಂಸ್ಕರಣೆ ಮಾಡುವುದಾಗಿ.
- ಈ ಮಧ್ಯಂತರ ಕ್ರಮವಾಗಿ 120 ದಿನಗಳ (ನಾಲ್ಕು ತಿಂಗಳು) ನಂತರ ಪ್ರತಿದಿನ ಸ್ವೀಕರಿಸುವ 300 ಮೆ. ಟನ್ ಪ್ರಮಾಣಕ್ಕೆ, ಮೂಲ ಕರಾರಿನಂತೆ ಪ್ರತಿ ಟನ್‌ಗೆ ಪಾಲಿಕೆಗೆ ಪಾವತಿಸಲು ಒಪ್ಪಿರುವ ರೂ.27/- ಮೊಬಲಗನ್ನು ಅನ್ವಯಿಸಲಾಗುವುದಿಲ್ಲವೆಂದು.
- ಈಗಾಗಲೇ ನೀಡಿರುವ ರೂ.25.00 ಲಕ್ಷಗಳ ಬ್ಯಾಂಕ್ ಗ್ಯಾರೆಂಟಿ ಜೊತೆಗೆ ಕಾರ್ಪೋರೇಟ್ ಗ್ಯಾರಂಟಿಯನ್ನು ಸಹ ನೀಡಲು ಇಚ್ಚಿಸಿರುವುದಾಗಿ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ, ಪರಿಷ್ಕೃತ ಕಾರ್ಯಕ್ರಮ ಪಟ್ಟಿಗೆ ಅನುಮೋದನೆ ನೀಡಿ, ವೇಳಾಪಟ್ಟಿಯಂತೆ ದಿನಾಂಕ:24-08-2012 ರಿಂದ ದಿನಾಂಕ:28-02-2014 ರ 540 (18 ತಿಂಗಳು) ಅವಧಿಯೊಳಗೆ ಮೊದಲ ಹಂತದ 600 ಮೆ. ಟನ್ ಘನತ್ಯಾಜ್ಯ ಸ್ವೀಕರಿಸಿ ಸಂಸ್ಕರಿಸುವ ಘಟಕ ಸ್ಥಾಪನೆಗೆ ಅನುವಾಗುವಂತೆ ಅನುಮತಿ ನೀಡಲು ಕೋರಿದ್ದರು.

ಈ ಮಧ್ಯೆ, ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ದಾಖಲಾಗಿರುವ ಸಂಖ್ಯೆ: 30450/2012 ಗೆ ಸಂಬಂಧಿಸಿದಂತೆ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವ ಸಂದರ್ಭದಲ್ಲಿ ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು **Implead** ಆಗಿ, ಘಟಕ ಸ್ಥಾಪನೆಗೆ ಮತ್ತೊಂದು ಅವಕಾಶ ನೀಡಲು ಕೋರಿರುತ್ತಾರೆ.

.................3

ಪೂರಕವಾಗಿ ಈ ಹಿಂದೆ ದಿನಾಂಕ: 25-07-2012 ರಂದು ನೀಡಿದ್ದ ಪರಿಷ್ಕೃತ ಕಾರ್ಯಕ್ರಮ ಪಟ್ಟಿಯನ್ನು ಮತ್ತೆ ಪರಿಷ್ಕರಿಸಿ ಅನುಷ್ಠಾನ ಕಾರ್ಯಕ್ರಮದ ಅವಧಿಯನ್ನು ಈ ಹಿಂದೆ ನೀಡಿದ್ದ 540 ಮತ್ತು 540 ದಿನಗಳಿಗೆ ಬದಲಾಗಿ 453 ಮತ್ತು 450 ದಿನಗಳಿಗೆ ಕಡಿಮೆಗೊಳಿಸಿ ದಿನಾಂಕ:15-10-2012 ಮತ್ತು ದಿನಾಂಕ: 03-11-2012 ರ ಪತ್ರಗಳಲ್ಲಿ, ಈ ಕೆಳಕಂಡ ಅಂಶಗಳನ್ನು ವಿವರಿಸಿರುತ್ತಾರೆ.

**a) Manage the existing garbage lying on the land;**
**b) Revised Schedule of implementation Proposed;**

1. **To set up an aerobic treatment facility for treating 300 TPD of MSW within 04 months from the date of receipt of approval of revised schedule of implementation proposed hereby.**
2. **To treat 600 TPD of MSW facility through biomethanation in 15 acres of land in the first phase within 453 working days from date of receipt of approval of revised schedule of**
3. **Implementation proposed as follows:**

| Sl. No. | Execution of Work | Duration |
|---|---|---|
| 1 | <u>Preliminary Activities</u><br>Site clearance, compound wall, statutory clearance, financial closure, vendor selection | 90 working days |
| 2 | <u>Procurement Activities</u><br>Order Placement for equipments, construction materials, E & I materials for execution | 120 working days |
| 3 | <u>Civil work at site</u><br>Construction of major and minor units | 180 working days |
| 4 | Erection & Implementation | 60 working days |
| 5 | Electrical, Instrumentation & mechanical works | 30 working days |
| 6 | Trail run & commissioning | 33 working days |
| | Total | 453 days |

1. **To treat 400 TPD of MSW facility through biomethanation in 10 acres of land in the second phase within 450 working days from date of completion of the first phase; and**

2. **Continue to treat 300 TPD of MSW during the implementation period of the project.**

ಮೇಲಿನಂತೆ ವಿವರಿಸುತ್ತಾ, ಸದರಿ ಸಂಸ್ಥೆಯು ಈ ಕೆಳಗಿನಂತೆ ಪಾಲಿಕೆಯ ಅನುಮೋದನೆ ಕೋರಿರುತ್ತದೆ.

1. **Approval to the revised schedule of implementation proposed as per Annexure-1.**

2. **Directions to stop dumping further MSW on the land allocated to us with immediate effect.**

3. **BBMP's Commitment to supply MSW at the site as per the terms of the revised schedule implementation and in line with the concession Agreement for the concession period.**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರೊಂದಿಗೆ ಈಗಾಗಲೇ ಮಾಡಿಕೊಂಡಿರುವ ಕರಾರನ್ನು ಮುಂದುವರೆಸಿ, ಸದರಿ ಸಂಸ್ಥೆ ಸಲ್ಲಿಸಿರುವ ಪರಿಷ್ಕೃತ ಕಾರ್ಯಕ್ರಮ ಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ ಹಾಗೂ ಈ ಉದ್ದೇಶಕ್ಕಾಗಿ ಈಗಾಗಲೇ ಗುರುತಿಸಿರುವ ಜಾಗವನ್ನು ಹಸ್ತಾಂತರಿಸುವ ಬಗ್ಗೆ ಮತ್ತು ಘನತ್ಯಾಜ್ಯವನ್ನು (MSW) ಒದಗಿಸುವ ಬಗ್ಗೆ ಈ ಕೆಳಗಿನ ಅಂಶಗಳಿಗೆ ಅನುಮೋದನೆ ಕೋರಿದೆ;

1. ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ದಿನಾಂಕ:31-08-2009 ರಂದು ಪಾಲಿಕೆ ಮಾಡಿಕೊಂಡಿರುವ ಕರಾರನ್ನು ಮುಂದುವರೆಸಲು ಅನುಮೋದನೆ.
2. ಸದರಿ ಸಂಸ್ಥೆ ಸಲ್ಲಿಸಿರುವ ಮೊದಲನೆ ಹಂತದ 453 ದಿನಗಳ ಪರಿಷ್ಕೃತ ಕಾರ್ಯಕ್ರಮ ಪಟ್ಟಿಗೆ ಅನುಮೋದನೆ.
3. 600 (ಆರುನೂರು) ಮೆ.ಟನ್ ಸಂಸ್ಕರಣೆಯ ಮೊದಲನೇ ಹಂತದ ಘಟಕವನ್ನು, 453 ಕಾಲಾವಧಿಯೊಳಗೆ, ಸರ್ವೆ ನಂ.155 ರ ಮಂಡೂರು ಉತ್ತರದ 15 (ಹದಿನೈದು) ಎಕರೆ ಪ್ರದೇಶದಲ್ಲಿ ಪೂರ್ಣಗೊಳಿಸಲು ಅನುಮತಿ ನೀಡಲು ಅನುಮೋದನೆ.
4. ಮಧ್ಯಂತರ ಕ್ರಮವಾಗಿ 120 ದಿನಗಳ (04 ತಿಂಗಳು) ಅವಧಿಯೊಳಗೆ, ಪ್ರತಿದಿನ 300 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಪಾಲಿಕೆಯಿಂದ ಸ್ವೀಕರಿಸಿ ಸಂಸ್ಕರಿಸಲು ಸದರಿ ಸಂಸ್ಥೆಗೆ ಅನುಮತಿ ನೀಡಲು ಅನುಮೋದನೆ.
5. ಸರ್ವೆ ನಂ.155 ರ ಮಂಡೂರು ಉತ್ತರದ ಮೊದಲನೆ ಹಂತದ ಘಟಕ ಸ್ಥಾಪನೆಯ ನಂತರ, 10 ಎಕರೆ (ಹತ್ತು) ಪ್ರದೇಶದಲ್ಲಿ 400 ಮೆಟ್ರಿಕ್ ಟನ್ ಸಂಸ್ಕರಣೆ ಸಾಮರ್ಥ್ಯದ ಘಟಕ ವಿಸ್ತರಣೆಯನ್ನು ಮುಂದಿನ 450 ಅವಧಿಯೊಳಗೆ ಅನುಷ್ಠಾನಗೊಳಿಸಲು ಅನುಮೋದನೆ.
6. ಸದರಿ ಸಂಸ್ಥೆ ಈಗಾಗಲೇ ನೀಡಿರುವ ರೂ.25.00 ಲಕ್ಷಗಳ **Performance security** ಜೊತೆಗೆ, ಕಾರ್ಪೋರೇಟ್ ಸೆಕ್ಯೂರಿಟಿ ಒದಗಿಸಲು ಹಾಗೂ ಹೆಚ್ಚುವರಿ 1.00 ಕೋಟಿ ರೂ. ಗಳ **Performance security** ಅನ್ನು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಿಂದ ಪಡೆಯಲು ಅನುಮೋದನೆ.
7. ಸ್ಥಳೀಯರ ವಿರೋಧ / ಪ್ರತಿಭಟನೆಯಿಂದಾಗಿ ಘನತ್ಯಾಜ್ಯವನ್ನು ಸದರಿ ಸಂಸ್ಥೆ ಘಟಕಕ್ಕೆ ಪಾಲಿಕೆಯಿಂದ ಒದಗಿಸಲು ಸಾಧ್ಯವಾಗದಿದ್ದಲ್ಲಿ, ಸದರಿ ಸಂಸ್ಥೆಯೇ ಘನತ್ಯಾಜ್ಯವನ್ನು ಒದಗಿಸಿಕೊಳ್ಳಲು ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 22-11-2012ರ ಟಿಪ್ಪಣಿ ಹಾಗೂ ಮಾನ್ಯ ಆಯುಕ್ತರ ದಿನಾಂಕ:22-11-2012 ರ ಟಿಪ್ಪಣಿಯನ್ನು ಮಾರ್ಪಡಿಸುತ್ತಾ, ಕ್ರಮ ಸಂಖ್ಯೆ:6 ರಲ್ಲಿ ನಮೂದಿಸಿರುವ ಹೆಚ್ಚುವರಿ ರೂ. ಒಂದು ಕೋಟಿಗಳ **Performance security** ಬದಲಾಗಿ ರೂ.ಇಪ್ಪತ್ತೈದು ಲಕ್ಷಗಳ **Performance security** ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಪಡೆಯಲು ಹಾಗೂ ಕ್ರಮ ಸಂಖ್ಯೆ:7 ನ್ನು ಕೈಬಿಡುವುದೆಂದು ಮತ್ತು ಈ ಮಾರ್ಪಾಡುಗಳೊಂದಿಗೆ ಆಯುಕ್ತರ ಟಿಪ್ಪಣಿ ಒಪ್ಪುವುದೆಂದು ತೀರ್ಮಾನಿಸಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 24-12-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:24-12-2012ರ ನಿರ್ಣಯವನ್ನು ಒಪ್ಪುತ್ತಾ, ಈಗಾಗಲೇ ಸಂಗ್ರಹವಾಗಿರುವ ಘನತ್ಯಾಜ್ಯವನ್ನು ಸಹ ಸಂಸ್ಥೆಯವರೇ ಸಂಸ್ಕರಿಸಬೇಕೆಂಬ ಷರತ್ತನ್ನು ವಿಧಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ದೀರ್ಘವಾದ ಚರ್ಚೆಯ ನಂತರ ಆಯುಕ್ತರವರ ಟಿಪ್ಪಣಿಯಲ್ಲಿ ಕಂಡಿಕೆ-6 ರಲ್ಲಿ ವಿಧಿಸಿರುವ ಷರತ್ತನ್ನು ಮುಂದುವರೆಸುವುದು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:24-12-2012ರ ನಿರ್ಣಯವನ್ನು ಒಪ್ಪುತ್ತಾ, ಈಗಾಗಲೇ ಸಂಗ್ರಹವಾಗಿರುವ ಘನತ್ಯಾಜ್ಯವನ್ನು ಸಹ ಸಂಸ್ಥೆಯವರೇ ಸಂಸ್ಕರಿಸಬೇಕೆಂಬ ಷರತ್ತನ್ನು ವಿಧಿಸುವುದೆಂದು ಹಾಗೂ ಆಯುಕ್ತರವರ ಟಿಪ್ಪಣಿಯಲ್ಲಿ ಕಂಡಿಕೆ-6 ರಲ್ಲಿ ವಿಧಿಸಿರುವ ಷರತ್ತನ್ನು ಮುಂದುವರೆಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 01 (264) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಇಲಾಖೆಯಲ್ಲಿ ಸಂಚಿತ ವೇತನದ ಮೇಲೆ 7 ಮಂದಿ ಅರೆಕಾಲಿಕ ನೌಕರರುಗಳು (1 – ಪ್ರ.ದ.ಗು, 1 –ದ್ವಿ.ದ.ಗು, 1 – ಪ್ರಯೋಗ ಶಾಲಾ ಸಹಾಯಕರು, 4 – ನಾ.ದ.ನೌಕರರುಗಳು) ಈ ಕೆಳಕಂಡಂತೆ ಕಾರ್ಯನಿರ್ವಹಿಸುತ್ತಿರುತ್ತಾರೆ.

ಶ್ರೀ. ಪ್ರಕಾಶ್ ರವರನ್ನು ಆಯುಕ್ತರ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಬಿ12(3)ಪಿಆರ್/281/95-96, ದಿನಾಂಕ:13-10-1995 ಮತ್ತು 30-03-1996 ರಂತೆ ಅರೆಕಾಲಿಕ ಪ್ರಥಮ ದರ್ಜೆ ಗುಮಾಸ್ತರಾಗಿ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಗೆ ದಿನಾಂಕ:31-03-1996 ರವರೆಗೆ ಅಥವಾ ಈ ಹುದ್ದೆಗೆ ನೇರ ನೇಮಕಾತಿಯಿಂದ ನಿಯಮಾವಳಿಗಳ ಪ್ರಕಾರ ತುಂಬುವವರೆಗೆ ಮಾತ್ರ ಸಂಚಿತ ವೇತನದ ಮೇರೆಗೆ ರೂ.2,000/- ಗಳಂತೆ ಪಾಲಿಕೆಯ ಕಸ್ತೂರ ಬಾ ನಗರ ಪ್ರೌಢ ಶಾಲೆಯಲ್ಲಿ ಈ ಕೆಳಕಂಡ ಷರತ್ತುಗೊಳಪಡಿಸಿ, ನೇಮಕ ಮಾಡಿಕೊಳ್ಳಲಾಗಿರುತ್ತದೆ.

1. ಇವರ ನೇಮಕಾತಿ ದಿನಾಂಕ:31-03-1996 ರವರೆಗೆ ಮಾತ್ರ ಸೀಮಿತವಾಗಿದ್ದು, ನಂತರ ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ ಎಂದು ಪರಿಗಣಿಸಲಾಗಿದೆ.
2. ಸದರಿಯವರು ನೇಮಕಾತಿಯನ್ನು ಕ್ರಮಬದ್ಧಗೊಳಿಸಲು ಒತ್ತಾಯಿಸಬಾರದು.
3. ಇವರು ಕೆಲಸ ನಿರ್ವಹಿಸಿದ ಅವಧಿಗೆ ಯಾವುದೇ ಸೌಲಭ್ಯಕ್ಕೆ ಅಥವಾ ಸೇವಾ ಜೇಷ್ಠತೆಗೆ ಅರ್ಹರಾಗಿರುವುದಿಲ್ಲ.
4. ಸೇವಾ ಅವಧಿ ಮುಗಿದ ನಂತರ ನ್ಯಾಯಾಲಯದ ಮೊರೆ ಹೋಗಬಾರದೆಂಬ ಷರತ್ತಿಗೆ ಒಳಪಟ್ಟಿದೆ.

ಆಯುಕ್ತರ ಕಛೇರಿಯ ದಿನಾಂಕ:13-10-1995ರ ಜ್ಞಾಪನ ಪತ್ರದಂತೆ ಶ್ರೀಮತಿ. ಗೀತಾ ಹಾಗೂ ಟಿ.ರಮೇಶ್ ರವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಗೆ 1995-96 ಸಾಲಿನ ಶೈಕ್ಷಣಿಕ ವರ್ಷ ಮುಗಿಯುವವರೆಗೆ ಅಥವಾ ಈ ಹುದ್ದೆಗೆ ನೇರ ನೇಮಕಾತಿಯಿಂದ ನಿಯಮಾವಳಿಗಳ ಪ್ರಕಾರ ತುಂಬುವವರೆಗೆ ಮಾತ್ರ ಅರೆಕಾಲಿಕ ದ್ವಿತೀಯ ದರ್ಜೆ ಗುಮಾಸ್ತರಾಗಿ ತಿಂಗಳಿಗೆ ರೂ.1,500/- ರ ಸಂಚಿತ ವೇತನದ ಮೇರೆಗೆ ಹಾಗೂ ಪ್ರಯೋಗ ಶಾಲಾ ಸಹಾಯಕರಾಗಿ ಸಂಚಿತ ವೇತನ ರೂ.1,400/- ಮೇರೆಗೆ ಪ್ರೌಢಶಾಲಾ ವಿಜಯನಗರ ನಗರದಲ್ಲಿ ಕೆಲವು ಷರತ್ತುಗಳೊಂದಿಗೆ ನೇಮಕ ಮಾಡಲಾಗಿರುತ್ತದೆ.

ಮುಂದುವರೆದಂತೆ, ಶ್ರೀಮತಿ. ಗೀತಾ ಹಾಗೂ ಶ್ರೀ. ಟಿ.ರಮೇಶ್ ರವರನ್ನು ಆಯುಕ್ತರ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಬಿ12(3)ಪಿಆರ್/281/95-96, ದಿನಾಂಕ:17-10-1995 ಮತ್ತು 10-10-1995 ಹಾಗೂ 23-03-1996 ರಂತೆ ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಗೆ ದಿನಾಂಕ:31-03-1996 ರವರೆಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವ ಆದೇಶವನ್ನು ಮಾರ್ಪಾಡು ಮಾಡಿ ಮುಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೇರ ನೇಮಕಾತಿಯಿಂದ ನಿಯಮಾವಳಿ ಪ್ರಕಾರ ತುಂಬುವವರೆಗೆ ಈ ಕೆಳಕಂಡ ನೌಕರರನ್ನು ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸಲು ಮುಂದುವರೆಸಲಾಗಿರುತ್ತದೆ.

1. ಶ್ರೀಮತಿ. ಆರ್.ಗೀತಾ, ದ್ವಿ.ದ.ಗು. ರವರ ಸಂಚಿತ ವೇತನ ರೂ.1,500/-
2. ಶ್ರೀ. ಟಿ.ರಮೇಶ್, ಪ್ರಯೋಗ ಶಾಲಾ ಸಹಾಯಕರು ರವರ ಸಂಚಿತ ವೇತನ ರೂ.1,400/-
3. ಶ್ರೀ. ಎಸ್.ಬಿ.ಲಕ್ಷ್ಮೀನಾರಾಯಣ, ನಾ.ದ.ನೌ. ರವರ ಸಂಚಿತ ವೇತನ ರೂ.1,300/-.

..................2

ಆಯುಕ್ತರ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಬಿ12(3)ಪಿಆರ್/281/95-96, ದಿನಾಂಕ: 10-10-1995 ಮತ್ತು 30-03-1996 ರ ಆದೇಶದಂತೆ, ಈ ಕೆಳಕಂಡ ನೌಕರರನ್ನು ನಾಲ್ಕನೇ ದರ್ಜೆ ನೌಕರರಾಗಿ ದಿನಾಂಕ:31-03-1996 ರವರೆಗೆ ಅಥವಾ ಈ ಹುದ್ದೆಗೆ ನೇರ ನೇಮಕಾತಿಯಿಂದ ನಿಯಮಾವಳಿಗಳ ಪ್ರಕಾರ ತುಂಬುವವರೆಗೆ ಮಾತ್ರ ಅರೆಕಾಲಿಕ ಜವಾನರಾಗಿ ತಿಂಗಳಿಗೆ ರೂ.1,300/- ಸಂಚಿತ ವೇತನ ಮೇರೆಗೆ ಕೆಲವು ಷರತ್ತುಗಳೊಂದಿಗೆ ನೇಮಕ ಮಾಡಲಾಗಿರುತ್ತದೆ.

1. ಶ್ರೀಮತಿ. ಮಹಾದೇವಮ್ಮ, ನಾ.ದ.ನೌ
2. ಶ್ರೀ. ಜಿ.ಗಂಗಪ್ಪ, ನಾ.ದ.ನೌ
3. ಶ್ರೀಮತಿ. ಮಂಜುಳಾದೇವಿ, ನಾ.ದ.ನೌ
4. ಶ್ರೀ. ಎಸ್.ಬಿ.ಲಕ್ಷ್ಮೀನಾರಾಯಣ, ನಾ.ದ.ನೌ

ಅದೇ ರೀತಿ, ಆಯುಕ್ತರ ಕಛೇರಿಯ ದಿನಾಂಕ:30-03-1996ರ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ:ಬಿ12(3)ಪಿಆರ್/281/95-96ರಂತೆ ದಿನಾಂಕ:31-03-1996ರವರೆಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವ ಆದೇಶವನ್ನು ಮಾರ್ಪಾಡು ಮಾಡಿ ಮುಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೇರ ನೇಮಕಾತಿಯಿಂದ ನಿಯಮಾವಳಿ ಪ್ರಕಾರ ತುಂಬುವವರೆಗೆ ಈ ಕೆಳಕಂಡ ನೌಕರರನ್ನು ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸಲು ಮುಂದುವರೆಸಲಾಗಿರುತ್ತದೆ.

1. ಶ್ರೀ. ಪ್ರಕಾಶ, ಪ್ರ.ದ.ಗು ರವರ ಸಂಚಿತ ವೇತನ ರೂ.2,000/-
2. ಶ್ರೀಮತಿ. ಮಹಾದೇವಮ್ಮ, ನಾ.ದ.ನೌ ರವರ ಸಂಚಿತ ವೇತನ ರೂ.1,300/-
3. ಶ್ರೀ. ಜಿ.ಗಂಗಪ್ಪ, ನಾ.ದ.ನೌ ರವರ ಸಂಚಿತ ವೇತನ ರೂ.1,300/-
4. ಶ್ರೀಮತಿ. ಮಂಜುಳಾದೇವಿ, ನಾ.ದ.ನೌ ರವರ ಸಂಚಿತ ವೇತನ ರೂ.1,300/-

ಈ ಮಧ್ಯೆ, ಶ್ರೀ. ಪ್ರಕಾಶ್, ಅರೆಕಾಲಿಕ ಪ್ರಥಮ ದರ್ಜೆ ಗುಮಾಸ್ತರು ದಿನಾಂಕ:27-12-2005 ಮತ್ತು 16-01-2006 ರಂದು ಮನವಿ ಸಲ್ಲಿಸಿ ಕ್ರಮಬದ್ಧಗೊಳಿಸಲು ಕೋರಿರುವ ಮೇರೆಗೆ ಸರ್ಕಾರಕ್ಕೆ ಸ್ಪಷ್ಟೀಕರಣ ಕೋರಲಾಗಿ ಸರ್ಕಾರವು ಪತ್ರದ ಸಂಖ್ಯೆ:ನಅಇ/506/ಎಂಎನ್‌ವೈ/2001, ದಿನಾಂಕ:23-05-2002ರ ರೀತ್ಯಾ ಅರೆಕಾಲಿಕ ಸೇವೆಯನ್ನು ನಿಯಮಗಳ ಪ್ರಕಾರ ಸಕ್ರಮಗೊಳಿಸಲು ಬರುವುದಿಲ್ಲವೆಂದು ಆದೇಶಿಸಿರುವಂತೆ, ಆಯುಕ್ತರ ಕಛೇರಿಯಿಂದ ಸಂಖ್ಯೆ:ಬಿ12(3)ಪಿಆರ್/186/2000-01, ದಿನಾಂಕ:13/28-02-2006 ರಂತೆ ಹಿಂಬರಹವನ್ನು ಜಾರಿ ಮಾಡಲಾಗಿರುತ್ತದೆ.

ಶ್ರೀ. ಪ್ರಕಾಶ್, ಅರೆಕಾಲಿಕ ಪ್ರ.ದ.ಗು. ರವರು ಈ ಹಿಂಬರಹದ ವಿರುದ್ಧ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:9268/2006(ಎಸ್) ರಲ್ಲಿ ದಾವೆ ಹೂಡಿದ್ದು, ಸದರಿ ದಾವೆಗೆ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:30-06-2008 ರಂದು **"The Petition stands disposed of directing the respondent to reconsider the claim of the Petitioner for regularization having regard to the ratio laid down by the Apex Court in Umadevi's case. The resultant effect, the impugned order at Annexure-K stands quashed"** ಎಂದು ಆದೇಶ ಹೊರಡಿಸಲಾಗಿದೆ.

ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ಈ ಪ್ರಕರಣವನ್ನು ಮರುಪರಿಶೀಲಿಸಲಾಗಿ, ಶ್ರೀ. ಪ್ರಕಾಶ್, ಅರೆಕಾಲಿಕ ಪ್ರ.ದ.ಗು. ರವರಿಗೆ ದಿನಾಂಕ:17-02-2009 ರಂದು ನೋಟೀಸ್ ಜಾರಿ ಮಾಡಲಾಗಿದ್ದು, ಸದರಿಯವರು ದಿನಾಂಕ:09-03-2009 ರಂದು ಸಲ್ಲಿಸಿರುವ ಉತ್ತರದಲ್ಲಿ, ತನ್ನ ಹಾಗೆಯೇ ಸಂಚಿತ ವೇತನದಲ್ಲಿ ನೇಮಿಸಿಕೊಂಡಂತಹ ಶ್ರೀ. ಗೋವಿಂದರಾಜು ಮತ್ತು ಶ್ರೀ. ಸಿ.ರಮೇಶ್, ಅರೆಕಾಲಿಕ ಶಿಕ್ಷಕರನ್ನು ಖಾಯಂ ನೌಕರರೆಂದು ದಿನಾಂಕ:08-10-1998 ರಂದು ಆದೇಶ ಹೊರಡಿಸಿರುವಂತೆ ತಮ್ಮನ್ನೂ ಸಹ ಕ್ರಮಬದ್ಧಗೊಳಿಸಲು ಕೋರಿದ್ದರು.

ಇದೇ ರೀತಿಯ ಪ್ರಕರಣವೊಂದರಲ್ಲಿ, ಶ್ರೀ. ಗೋವಿಂದರಾಜು (ಹಾಲಿ ಮರಣ) ಮತ್ತು ಶ್ರೀ. ಸಿ.ರಮೇಶ್, ಅರೆಕಾಲಿಕ ಶಿಕ್ಷಕರುಗಳನ್ನು ಕ್ರಮಬದ್ಧಗೊಳಿಸುವ ಪ್ರಕರಣದಲ್ಲಿ ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯಿಸಿರುವ ಶ್ರೀಮತಿ. ಉಮಾದೇವಿ ಪ್ರಕರಣವು **(Case reported in (2006) 4 SCC 1)** ದಿನಗೂಲಿ ನೌಕರರಿಗೆ ಮಾತ್ರ ಅನ್ವಯವಾಗಲಿದ್ದು, ಶ್ರೀಮತಿ.ಉಮಾದೇವಿ ಪ್ರಕರಣದಲ್ಲಿ ನ್ಯಾಯಾಲಯವು ಅವಲೋಕಿಸಿರುವಂತೆ, ನಾಲ್ಕು ಷರತ್ತುಗಳನ್ನು ಪೂರೈಸಿದ ನೌಕರರನ್ನು ಒಂದು ಬಾರಿಯ ಕ್ರಮವಾಗಿ ಸಕ್ರಮಗೊಳಿಸಲು ಪರಿಗಣಿಸಬಹುದಾಗಿದೆ ಎಂಬುದಾಗಿ ನಿರ್ದೇಶನವಿರುವಂತೆ, ಸದರಿ ನಾಲ್ಕು ಷರತ್ತುಗಳನ್ನು ಮೇಲಿನ ಅರೆಕಾಲಿಕ ನೌಕರರು ಪೂರೈಸಿರುವರೆಂದು ಪರಿಗಣಿಸಿದಲ್ಲಿ, ಸದರಿಯವರುಗಳು ಅರೆಕಾಲಿಕ ಶಿಕ್ಷಕರುಗಳಾಗಿರುವುದರಿಂದ ಶ್ರೀಮತಿ. ಉಮಾದೇವಿ ಪ್ರಕರಣದಲ್ಲಿ ದಿನಗೂಲಿ ನೌಕರರಿಗೆ ಅನ್ವಯವಾಗುವಂತೆ ನೀಡಿರುವ ಆದೇಶಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲವೆಂದು ಹಾಗೂ ಶ್ರೀ. ಸಿ.ರಮೇಶ್ ಮತ್ತು ಶ್ರೀ. ಗೋವಿಂದರಾಜು (ಹಾಲಿ ಮರಣ ಹೊಂದಿರುತ್ತಾರೆ) ಅರೆಕಾಲಿಕ ಸಹ ಶಿಕ್ಷಕರನ್ನು ಅರೆಕಾಲಿಕ ಸಹ ಶಿಕ್ಷಕರಾಗಿಯೇ ಮುಂದುವರೆಸಿ ದಿನಾಂಕ:15-07-2009 ರಂದು ಆದೇಶ ಹೊರಡಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಅರೆಕಾಲಿಕ ಪ್ರಥಮ ದರ್ಜೆ ಗುಮಾಸ್ತರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ಪ್ರಕಾಶ್ ಬಿನ್ ಲಿಂಗಯ್ಯ ರವರು ಪೂರ್ಣಾವಧಿ ನೌಕರರಾಗಿರದೇ ಅರೆಕಾಲಿಕ ನೌಕರರಾಗಿದ್ದು, ದಿನಾಂಕ:01-01-1986ರ ನಂತರ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವವರನ್ನು ಕಛೇರಿ ಆದೇಶ ಸಂಖ್ಯೆ:ಬಿ12(3)ಪಿಆರ್/186/2000-01, ದಿನಾಂಕ:12-08-2009 ರಂತೆ ಸಕ್ರಮಗೊಳಿಸಲು ನಿಯಮಾವಳಿಯಲ್ಲಾಗಲಿ, ಸರ್ಕಾರದ ಆದೇಶಗಳಲ್ಲಾಗಲಿ ಅವಕಾಶವಿಲ್ಲದಿರುವುದರಿಂದ ಸದರಿಯವರನ್ನು ಮುಂದಿನ ಆದೇಶದವರೆವಿಗೂ ಅರೆಕಾಲಿಕ ಪ್ರಥಮ ದರ್ಜೆ ಗುಮಾಸ್ತರಾಗಿಯೇ ಮುಂದುವರೆಸಲಾಗಿದೆ.

ಸದರಿ 7 ಮಂದಿ ಅರೆಕಾಲಿಕ ನೌಕರರುಗಳ ಪೈಕಿ ಶ್ರೀಮತಿ. ಆರ್.ಗೀತಾ, ದ್ವಿ.ದ.ಗು ರವರು ದಿನಾಂಕ: 31-12-2010 ರಂತೆ ಮನವಿಯನ್ನು ಸಲ್ಲಿಸಿ, ಸದರಿಯವರ ಅನಾರೋಗ್ಯದ ಕಾರಣ ಶಾಲಾ ಕರ್ತವ್ಯದಿಂದ ಬಿಡುಗಡೆ ಮಾಡಲು ಕೋರಿರುವಂತೆ, ಕಛೇರಿ ಸಮ ಸಂಖ್ಯೆಯ ಆಂತರಿಕ ಕಛೇರಿ ಟಿಪ್ಪಣಿ ದಿನಾಂಕ:29-01-2011 ರಂತೆ ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡಲಾಗಿರುತ್ತದೆ. ಪ್ರಸ್ತುತ ಪಾಲಿಕೆಯಲ್ಲಿ 6 ಮಂದಿ ಅರೆಕಾಲಿಕ ನೌಕರರುಗಳ ವಿವರಗಳನ್ನು ಕಛೇರಿ ಆದೇಶ ಸಂಖ್ಯೆ:ಬಿ12(3)ಪಿಆರ್/186/2000-01, ದಿನಾಂಕ:12-08-2009 ರಂತೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಯವರಿಗೆ ಒದಗಿಸಲು ಕೋರಿರುವಂತೆ ಈ ಕೆಳಕಂಡಂತೆ ಮಾಹಿತಿಯನ್ನು ಒದಗಿಸಿರುತ್ತಾರೆ.

| ಕ್ರ ಸಂ. | ಅರೆಕಾಲಿಕ ನೌಕರರ ಹೆಸರು ಮತ್ತು ಪದನಾಮ | ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳ | ಸಂಚಿತ ವೇತನ | ಷರಾ |
|---|---|---|---|---|
| 1 | ಶ್ರೀ. ಪ್ರಕಾಶ, ಪ್ರ.ದ.ಗು | ಪಾಲಿಕೆಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆ | ರೂ.2,000/- | ಸದರಿಯವರು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಪಾಲಿಕೆ ಖಾಯಂ ನೌಕರರಾದ ಶ್ರೀಮತಿ.ಎಂ.ಕವಿತ, ಪ್ರ.ದ.ಸ. ರವರು ದಿನಾಂಕ:22-11-2010 ರಂದು ಜಂಟಿ ಆಯುಕ್ತರು (ಪಶ್ಚಿಮ) ರವರ ಆದೇಶ ಸಂಖ್ಯೆ:ಸ.ಕಂ.ಅ(ಶ್ರೀರಾಮ)/ಪಿಆರ್/542/10-11 ರಂತೆ ಕಾರ್ಯನಿರ್ವಹಿಸುತ್ತಿರುತ್ತಾರೆ ಹಾಗೂ ಶ್ರೀ. ಪ್ರಕಾಶ, ಅರೆಕಾಲಿಕ ಪ್ರ.ದ.ಗು ರವರು ಈ ಕಛೇರಿಯ ಆದೇಶ ಸಂಖ್ಯೆ: ಬಿ12(3)ಪಿಆರ್/186/2000-01, ದಿನಾಂಕ:23-12-2009 ರಂತೆ ಸಂಚಿತ ವೇತನದ ಮೇಲೆ ಪಾಲಿಕೆಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. |

.........................4

| | | | | |
|---|---|---|---|---|
| 2 | ಶ್ರೀ. ರಮೇಶ, ಪ್ರಯೋಗಶಾಲೆ ಸಹಾಯಕರು | ಪಾಲಿಕೆಯ ಪ್ರೌಢ ಶಾಲೆ ವಿದ್ಯಾರಣ್ಯನಗರ ಮಾಗಡಿ ರಸ್ತೆ | ರೂ.1,400/- | ಸದರಿ ಅರೆಕಾಲಿಕ ನೌಕರರನ್ನು ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದ ಸಂಖ್ಯೆ: ಬಿ12(3)ಪಿಆರ್/281/95-96, ದಿನಾಂಕ: 23-03-1996 ರಂತೆ ದಿನಾಂಕ:31-03-1996 ರವರೆಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವ ಆದೇಶವನ್ನು ಮಾರ್ಪಾಡು ಮಾಡಿ, ಪಾಲಿಕೆಯಲ್ಲಿ ನೇರ ನೇಮಕಾತಿಯಿಂದ ನಿಯಮಾವಳಿ ಪ್ರಕಾರ ತುಂಬುವವರೆಗೆ ಸಂಚಿತ ವೇತನದಲ್ಲಿ ಪಾಲಿಕೆ ಪ್ರೌಢ ಶಾಲೆ ವಿಜಯನಗರ ಕಾರ್ಯನಿರ್ವಹಿಸಲು ಮುಂದುವರೆಸಲಾಗಿರುತ್ತದೆ. ಇದರಂತೆ ಸದರಿಯವರು ಪಾಲಿಕೆ ಪ್ರೌಢ ಶಾಲೆ, ವಿಜಯನಗರ ಇಲ್ಲಿ ವೇತನ ಪಡೆದು ಪಾಲಿಕೆ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. |
| 3 | ಶ್ರೀ. ಲಕ್ಷ್ಮೀನಾರಾಯಣ ನಾ.ದ.ನೌ | ಪಾಲಿಕೆಯ ಪ್ರೌಢ ಶಾಲೆ, ವಿದ್ಯಾರಣ್ಯ ನಗರ, ಮಾಗಡಿ ರಸ್ತೆ | ರೂ.1,300/- | ಮುಖ್ಯೋಪಾಧ್ಯಾಯರು, ಪಾಲಿಕೆ ಪ್ರೌಢ ಶಾಲೆ ವಿಜಯನಗರ ರವರನ್ನು ದೂರವಾಣಿ ಮೂಲಕ ಸಂಪರ್ಕಿಸಲಾಗಿದಂತೆ, ಸದರಿಯವರ ಶಾಲೆಯಲ್ಲಿ ಜವಾನರ ಮಂಜೂರಾತಿ ಹುದ್ದೆ ಒಂದು ಇದ್ದು, ಸದರಿ ಹುದ್ದೆಯಲ್ಲಿ ಪಾಲಿಕೆ ಖಾಯಂ ನೌಕರರಾದ ಶ್ರೀ. ಎನ್.ರಮೇಶ ರವರು ವೇತನ ಪಡೆದು ಓ.ಓ.ಡಿ ಮೇಲೆ ಪಾಲಿಕೆಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ ಹಾಗೂ ಶ್ರೀ. ಲಕ್ಷ್ಮಿನಾರಾಯಣ, ಅರೆಕಾಲಿಕ ನಾ.ದ.ನೌ ರವರು ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದ ಸಂಖ್ಯೆ:ಬಿ12(3)ಪಿಆರ್/281/95-96, ದಿನಾಂಕ: 23-03-1996 ರಂತೆ ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ ಎಂದು ತಿಳಿಸಿರುತ್ತಾರೆ. |
| 4 | ಶ್ರೀಮತಿ. ಮಹಾದೇವಮ್ಮ ನಾ.ದ.ನೌ | ಆರೋಗ್ಯ ಕೇಂದ್ರ, ಗಂಗೊಂಡನಹಳ್ಳಿ | ರೂ.1,300/- | ಯಶವಂತಪುರ ಹೆರಿಗೆ ಆಸ್ಪತ್ರೆಯಲ್ಲಿ ಜವಾನರ ಮಂಜೂರಾತಿ ಹುದ್ದೆಗಳು 3 ಇದ್ದು, ಪಾಲಿಕೆ ಖಾಯಂ ನೌಕರರಾದ ಹೆಚ್.ಜೈರಾಮ್ ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಉಳಿದ 2 ಖಾಯಂ ಜವಾನರ ಹುದ್ದೆಗಳು ಖಾಲಿ ಇದ್ದ ಕಾರಣ ಹಾಲಿ ಖಾಲಿಯಿರುವ ಜವಾನರ ಹುದ್ದೆಗೆ ಅರೆಕಾಲಿಕ ಸದರಿ ನೌಕರರನ್ನು ಜವಾನರ ಹುದ್ದೆಗೆ ಸಂಚಿತ ವೇತನ 1300/- ಮೇರೆಗೆ ದಿ:30-03-1996 ರಂತೆ ನೇಮಕಾತಿ ಮಾಡಲಾಗಿದ್ದು ಕಾರ್ಯನಿರ್ವಹಿಸುತ್ತಿರುತ್ತಾರೆ. |
| 5 | ಶ್ರೀ ಜಿ. ಗಂಗಪ್ಪ, ನಾ.ದ.ನೌ | ಆರೋಗ್ಯ ಕೇಂದ್ರ, ಆಂಜನಪ್ಪ ಗಾರ್ಡನ್ ಮೈಸೂರು ರಸ್ತೆ. | ರೂ.1,300/- | |

| | | | | |
|---|---|---|---|---|
| 6 | ಶ್ರೀಮತಿ ಮಂಜುಳಾ ನಾ.ದ.ನೌ. | ಹೆರಿಗೆ ಆಸ್ಪತ್ರೆ, ಕೆ.ಪಿ.ಅಗ್ರಹಾರ | ರೂ.1,300/- | ಸದರಿ ಅರೆಕಾಲಿಕ ನೌಕರರನ್ನು ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದ ಸಂಖ್ಯೆ:ಬಿ12(3) ಪಿಆರ್/281/95-96, ದಿ:18-10-1995 ರಂತೆ ದಿನಾಂಕ:31-03-1996 ರವರೆಗೆ ಅಥವಾ ಸದರಿ ಹುದ್ದೆಯನ್ನು ನೇರ ನೇಮಕಾತಿಯಿಂದ ನಿಯಮಾವಳಿ ಪ್ರಕಾರ ತುಂಬುವವರೆಗೆ ಅರೆಕಾಲಿಕ ಜವಾನರಾಗಿ ಸಂಚಿತ ವೇತನ ರೂ.1300/-ರಂತೆ ಆರೋಗ್ಯ ಇಲಾಖೆಯ ಕೋದಂಡರಾಮಪುರ ಹೆರಿಗೆ ಆಸ್ಪತ್ರೆಗೆ ಖಾಲಿ ಇರುವ ಹುದ್ದೆಗೆ ನೇಮಿಸಿರುವಂತೆ ಸದರಿಯವರು ಕೋದಂಡರಾಮಪುರ ಹೆರಿಗೆ ಆಸ್ಪತ್ರೆಯಲ್ಲಿ ವೇತನ ಪಡೆದು ಮಾಗಡಿ ರಸ್ತೆ ಹೆರಿಗೆ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. |

ಸದರಿ ಅರೆಕಾಲಿಕ ನೌಕರರು ದಿನಾಂಕ:31-08-2010 ಮತ್ತು 21-10-2011 ರಂದು ಮನವಿಯನ್ನು ಸಲ್ಲಿಸಿ, 1995ರಿಂದ ಪಾಲಿಕೆಗೆ ಅರೆಕಾಲಿಕ ನೌಕರರಿಗೆ ಸಂಚಿತ ವೇತನದಲ್ಲಿ ಆರು ಜನ ನೌಕರರು ನೇಮಕಗೊಂಡು ತಿಂಗಳಿಗೆ 1300, 1400 ಹಾಗೂ 2000 ರೂ.ಗಳನ್ನು ಪಡೆದುಕೊಂಡು ಕೆಲಸದಲ್ಲಿ ಬಿಡುಗಡೆ ಇಲ್ಲದೆ ಕಾರ್ಯನಿರ್ವಹಿಸುತ್ತಾ ಬರುತ್ತಿದ್ದು, ಇಲ್ಲಿಗೆ 16 ವರ್ಷಗಳು ಕಳೆದರೂ ಕೆಲಸದಲ್ಲಿ ಯಾವುದೇ ಭದ್ರತೆಯಿಲ್ಲದೇ ಇದ್ದು ಕಡಿಮೆ ವೇತನದಲ್ಲಿ ನಮ್ಮನ್ನು ದುಡಿಸಿಕೊಳ್ಳುತ್ತಾ ಬರುತ್ತಿದ್ದು, ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿದ್ದು, ನೀಡುವ ವೇತನ ಏನೇನೂ ಸಾಕಾಗದೇ ಹೋಗಿರುವುದರಿಂದ ಜೀವನ ಸುಧಾರಿಸಲು ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡಲು ಕೋರಿರುತ್ತಾರೆ ಹಾಗೂ ಮನವಿಯೊಂದಿಗೆ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 49 ಎಸ್‌ಎಲ್‌ಸಿ 84, ಬೆಂಗಳೂರು ದಿನಾಂಕ: 31-12-1986 ಪ್ರತಿಯನ್ನು ಸಲ್ಲಿಸಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 49 ಎಸ್‌ಎಲ್‌ಸಿ 84, ಬೆಂಗಳೂರು ದಿನಾಂಕ:31-12-1986 ರಂತೆ, ನಿಯತಕಾಲಿಕ ವೇತನ ಶ್ರೇಣಿಯ ಕನಿಷ್ಟ ವೇತನಕ್ಕಿಂತ 10/- ರೂ. ಕಡಿಮೆಗೆ ಸಮಾನವಾದ ಸಂಚಿತ ವೇತನದ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕವಾಗಿದ್ದ ಸ್ಥಳೀಯ ಅಭ್ಯರ್ಥಿಗಳಿಗೆ ನಿಯತಕಾಲಿಕ ವೇತನವನ್ನು ಮಂಜೂರು ಮಾಡುವ ಬಗ್ಗೆ ಈ ಕೆಳಕಂಡ ಆದೇಶ ನೀಡಿದೆ.

1. ದಿನಾಂಕ:25-11-1977ರ ಆದೇಶದ ಪ್ರಕಾರ ಸಂಚಿತ ವೇತನದ ಆಧಾರದ ಮೇಲೆ ನೇಮಕವಾದ ಎಲ್ಲಾ ಸ್ಥಳೀಯ ಅಭ್ಯರ್ಥಿಗಳಿಗೆ ಅವರ ಹುದ್ದೆಗಳಿಗೆ ನಿಗದಿಪಡಿಸಿರುವ ವೇತನ ಶ್ರೇಣಿಯನ್ನು ದಿನಾಂಕ: 01-04-1986ರಿಂದ ಮಂಜೂರು ಮಾಡತಕ್ಕದ್ದು.
2. ಸಂಚಿತ ವೇತನದ ಆಧಾರದ ಮೇಲೆ ನೇಮಕವಾದ ದಿನದಂದು ಅವರು ನೇಮಕವಾದ ಹುದ್ದೆಗೆ ನಿಗಧಿಪಡಿಸಿರುವ ವೇತನ ಶ್ರೇಣಿಯ ವೇತನವನ್ನು ಮಂಜೂರು ಮಾಡಿದ್ದರೆ ಅವರು ಈ ವೇತನ ಶ್ರೇಣಿಯಲ್ಲಿ ಯಾವ ವೇತನವನ್ನು 1-04-1986ರಂದು ಪಡೆಯುತ್ತಿದ್ದರೋ ಅದೇ ವೇತನವನ್ನು ದಿನಾಂಕ:01-04-1986ರಂದು ನಿಗಧಿಪಡಿಸತಕ್ಕದ್ದು.
3. ಹೀಗೆ ನಿಗಧಿಪಡಿಸಿದ ವೇತನದ ಬಾಕಿಯನ್ನು ದಿನಾಂಕ:01-04-1986ಕ್ಕೆ ಮುಂಚೆ ಸ್ಥಳೀಯ ಅಭ್ಯರ್ಥಿಯಾಗಿ ಸಲ್ಲಿಸಿದ ಸೇವೆಗೆ ನಿಗಧಿಪಡಿಸಿದ ವೇತನ ಬಾಕಿಯನ್ನು ಅವರಿಗೆ ಪಾವತಿ ಮಾಡಕೂಡದು.

ಸದರಿ ಸರ್ಕಾರಿ ಆದೇಶ ಸಂಬಂಧಿಸಿದಂತೆ ಮುಖ್ಯ ಲೆಕ್ಕಪರಿಶೋಧಕರ ರವರು ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 49 ಎಸ್‌ಎಲ್‌ಸಿ 84, ಬೆಂಗಳೂರು ದಿನಾಂಕ:31-12-1986 ರಂತೆ, ನಿಯತಕಾಲಿಕ ವೇತನ ಶ್ರೇಣಿಯ ಕನಿಷ್ಟ ವೇತನಕ್ಕಿಂತ 10/- ರೂ. ಕಡಿಮೆಗೆ ಸಮಾನವಾದ ಸಂಚಿತ ವೇತನದ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕವಾಗಿದ್ದ ಸ್ಥಳೀಯ ಅಭ್ಯರ್ಥಿಗಳಿಗೆ ನಿಯತಕಾಲಿಕ ವೇತನವನ್ನು ಮಂಜೂರು ಮಾಡುವುದಕ್ಕೆ ಸಂಬಂಧಿಸಿರುತ್ತದೆ. ಈ ಪ್ರಕರಣವು ಅರೆಕಾಲಿಕ ನೌಕರರಿಗೆ ಸಂಬಂಧಿಸಿದ್ದು ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲು ಸೂಚಿಸಿರುತ್ತಾರೆ.

ಕಾನೂನು ಕೋಶದ ಮುಖ್ಯಸ್ಥರವರು ಸರ್ಕಾರಿ ಆದೇಶ ಸಂಖ್ಯೆ:ಡಿಪಿಎಆರ್49ಎಸ್‌ಎಲ್‌ಸಿ 84, ದಿನಾಂಕ:31-12-1986 ರಂತೆ, ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅರೆಕಾಲಿಕ ನೌಕರರಿಗೆ ನಿಯತಕಾಲಿಕ ವೇತನ ನೀಡುವಲ್ಲಿ ಅವಕಾಶಗಳು ಕಂಡುಬರುವುದಿಲ್ಲ. ಮುಖ್ಯ ಲೆಕ್ಕಪರಿಶೋಧಕರು ತಮ್ಮ ಅಭಿಪ್ರಾಯ ವರದಿಯಲ್ಲಿ ವಿವರಿಸಿರುವಂತೆ ನಿಯಮಾನುಸಾರ ಕನಿಷ್ಟ ವೇತನ ಕಾಯ್ದೆ ಅಡಿಯಲ್ಲಿ ನಿಗಧಿಪಡಿಸಿರುವ ವೇತನಗಳನ್ನು ಪಾವತಿಸುವಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸಮಂಜಸವೆಂದು ಅಭಿಪ್ರಾಯ ನೀಡಿರುತ್ತಾರೆ.

**ದಿನಗೂಲಿ ನೌಕರರುಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಡಿಪಿಎಆರ್, ಹೆಚ್‌ಯುಡಿ ಆದೇಶಗಳು ಈ ಕೆಳಕಂಡಂತೆ ಇರುತ್ತದೆ.**

1. **GOVERNMENT ORDER NO. HUD 31 MNE 01,BANGALORE,Dt:21-08-1995**

****

**Regularisation of Daily wages/Monthly rated/ time scale employees of all the TMCs/ CMCs/ Corporation and Boards coming under the Control of Housing & Urban Development.**

2. **GOVERNMENT ORDER NO.DPAR 12/SLC/97/BANGALORE, Dt:26-09-1998**

****

**Sub: Counting, for the purpose of pension, the service roundered prior to regularization the Daily Wage Employees whose Services have been regularized as per Government Order No. DPAR 2SLC 90, Dated 6.8.1990 read with the subsequent Orders/Instructions.**

3. **ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯದ ಸುತ್ತೋಲೆ ಸಂಖ್ಯೆ : ಸಿಆಸುಇ 1ಸೇಸ್ಥ 99, ಬೆಂಗಳೂರು, ದಿನಾಂಕ: 24ನೇ ಮಾರ್ಚ್ 1999.**

**************

ವಿಷಯ: ದಿನಾಂಕ:6ನೇ ಆಗಸ್ಟ್ 1990ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 2 ಸೇಸ್ಥ 90 ಹಾಗೂ ಸಂಬಂಧಿಸಿದ ತದನಂತರದ ಆದೇಶ ಸುತ್ತೋಲೆ ಸಂಖ್ಯೆ: ಅಧಿಕೃತ ಜ್ಞಾಪನಾ ಇತ್ಯಾದಿಗಳ ಅನ್ವಯ ಸಕ್ರಮಗೊಳಿಸಲಾದ ದಿನಗೂಲಿ ನೌಕರರಿಗೆ ವೇತನದ ಬಾಕಿಯನ್ನು ನೀಡುವ ಕುರಿತು.

ಸುಪ್ರೀಂ ಕೋರ್ಟಿನ ದಿನಾಂಕ:23ನೇ ಫೆಬ್ರವರಿ 1990ರ ತೀರ್ಪಿನ ಪ್ರಕಾರ ದಿನಾಂಕ: 1ನೇ ಜುಲೈ 1984ಕ್ಕಿಂತ ಮುಂದೆ ನೇಮಕವಾದ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸುವ ಕುರಿತು ಮೇಲೆ ಉಲ್ಲೇಖಿಸಿದ ದಿನಾಂಕ:6ನೇ ಆಗಸ್ಟ್ 1990ರ ಆದೇಶ ಹಾಗೂ ತದನಂತರದ ಆದೇಶ, ಅಧಿಕೃತ ಜ್ಞಾಪನ, ಸುತ್ತೋಲೆ ಇತ್ಯಾದಿಗಳಲ್ಲಿ ಸೂಕ್ತ ಸೂಚನೆಗಳನ್ನು ನೀಡಲಾಗಿದೆ. ಮೇಲೆ ಉಲ್ಲೇಖಿಸಿದ ದಿನಾಂಕ:4ನೇ ಡಿಸೆಂಬರ್ 1990ರ ಅಧಿಕೃತ ಜ್ಞಾಪನದ ಕಂಡಿಕೆ 5ನ್ನು ಈ ಕೆಳಗೆ ಉದ್ಧರಿಸಿದೆ.

.....................7

"Government hereby direct that necessary action should be taken to regularize the services of the daily rated employees who have completed 10 years of service as on 31st December 1989, immediately with effect from 1st January 1990"

ಆದರೆ ಹಲವು ಪ್ರಕರಣಗಳಲ್ಲಿ ಅರ್ಹ ದಿನಗೂಲಿ ನೌಕರರ ಸೇವೆಯನ್ನು ಅವರು ಹತ್ತು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ತಕ್ಷಣ ಸಕ್ರಮಗೊಳಿಸಿ, ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಿಗಳು ಸಕ್ರಮವಾಗಿ ಆದೇಶಗಳನ್ನು ಹೊರಡಿಸಿರುವುದಿಲ್ಲ. ಇದರ ಪರಿಣಾಮವಾಗಿ ಅವರು ಸಕ್ರಮಾತಿ ಹೊಂದಲು ಅರ್ಹತೆಯನ್ನು ಹೊಂದಿದ ದಿನಾಂಕ ಮತ್ತು ಅವರನ್ನು ಸಕ್ರಮಗೊಳಿಸಿ ಆದೇಶ ಹೊರಡಿಸಿದ ದಿನಾಂಕ ಈ ಎರಡೂ ಘಟನೆಗಳ ನಡುವೆ ಕಾಲದ ಅಂತರ (time-gap) ಆಗಿರುತ್ತದೆ. ಅವರು ಪಡೆಯಲು ಅರ್ಹರಿರುವ ವೇತನದ ಬಾಕಿಯನ್ನು ಸದರಿ ಅವಧಿಗಾಗಿ ವಿಳಂಬ ಮಾಡದೇ ನೀಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

4. <u>ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯದ ಆದೇಶ ಸಂಖ್ಯೆ:ಸಿಆಸುಇ/15/ಸೇಸಅ/2004, ಬೆಂಗಳೂರು ದಿನಾಂಕ: 08-07-2004</u>

*****

ವಿಷಯ: ದಿನಗೂಲಿ ಆಧಾರದ ಮೇಲೆ ಮಾಸಿಕ ವೇತನ ಸಿಬ್ಬಂದಿಯಾಗಿ ಸಲ್ಲಿಸಿರುವ ಸೇವೆಯನ್ನು ನಿವೃತ್ತಿ ವೇತನ ಸೌಲಭ್ಯ ಪರಿಗಣಿಸುವ ಕುರಿತು.

**5. <u>GOVERNMENT ORDER NO. DPEA 12/SLC/90/BANGALORE Dt. 26-09-1998</u>**

****

**Subject: Regularization of Casual/Daily Rated Employees-Orders thereon**

ಮೇಲ್ಕಂಡ ಸರ್ಕಾರಿ ಆದೇಶಗಳು ಹಾಗೂ ಸುತ್ತೋಲೆಗಳನ್ವಯ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ನೌಕರರುಗಳ ಸೇವೆಯನ್ನು ಸಕ್ರಮಗೊಳಿಸಲು ಹಾಗೂ ವೇತನ ಶ್ರೇಣಿ ನಿಗದಿಪಡಿಸಲು ಕಾನೂನು ಕೋಶದ ಮುಖ್ಯಸ್ಥರು ರವರ ಅಭಿಪ್ರಾಯ ಕೋರಲಾಗಿದ್ದು, ಕಾನೂನು ಕೋಶದ ಮುಖ್ಯಸ್ಥರು ರವರ ವರದಿ ಸಂಖ್ಯೆ:ಬಿಬಿಎಂಪಿ/ಎಲ್‌ಸಿ/ಆರ್‌ಆರ್/2181/2011-12 ದಿನಾಂಕ:11-01-2012ರಂತೆ ಈ ಕೆಳಕಂಡಂತೆ ವರದಿಯನ್ನು ನೀಡಿರುತ್ತಾರೆ.

ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ನೌಕರರನ್ನು ಖಾಯಂಗೊಳಿಸುವ ಬಗ್ಗೆ/ವಿಷಯದಲ್ಲಿ ಗುತ್ತಿಗೆ ಕುರಿತಂತೆ ಭಾರತ ಸರ್ವೋಚ್ಚ ನ್ಯಾಯಾಲಯದ ಆದೇಶಗಳಂತೆ ಹಾಗೂ ತೀರ್ಪಿನ/ಹಿನ್ನೆಲೆಯಲ್ಲಿ ಗುತ್ತಿಗೆ ನೌಕರರನ್ನು ಸಕ್ರಮಗೊಳಿಸುವಲ್ಲಿ ಪರಿಶೀಲಿಸಲಾಯಿತು. ಮುಂದುವರೆಸಂತೆ ದಿನಾಂಕ:24-03-2010ರಲ್ಲಿನ ಸರ್ಕಾರದ ಪತ್ರಗಳಂತೆ ವಿವರವಾಗಿ ಪರಿಶೀಲಿಸಲಾಯಿತು.

**Supreme Court of India.**
**Appeal (Civil) 3595-3612/1999**
**State of Karnataka and others.**
**v/s**
**Smt. Uma Devi and others .**

The operative portion of the order passed by Supreme Court of India in Civil Appeal No.3595-3612/1999 dated: 10-04-2006.

In cases relating to service in the commercial taxes department, the High Court has directed that those engaged on daily wages, be paid wages equal to the salary and allowances that are being paid to the regular employees of their cadre in government service, with effect from the dates from which they were respectively

appointed. The objection taken was to the direction for payment from the dates of engagement. We find that the high court had clearly gone wrong in directing that these employees be paid salary equal to the salary and allowances that are being paid to the regular employees of their cadre in government service, with effect from the dates from which they were respectively engaged or appointed. It was not open to the high court to impose such an obligation on the state when the very question before the high court in the case was whether these employees were entitled to have equal pay for equal work so called and were entitled to any other benefit. They had also been engaged in the teeth of directions not to do so. We are, therefore, of the view that, at best, the division bench of the high court should have directed that wages equal to the salary that are being paid to regular employees be paid to these daily wage employees with effect from the date of its judgment. Hence, that part of the direction of the division bench is modified and it is directed that these daily wage earners be paid wages equal to the salary at the lowest grade of employees of their cadre in the Commercial Taxes Department in government in government services, from the date of the judgment of the division bench of the high court. Since, they are only daily wage earners there would be no question of other allowances being paid to them. In view of our conclusion, that courts are not expected to issue direction for making such persons permanent in service we set aside that part of the direction of the high court directing the government to consider their cases for regularization. We also notice that the high court has not adverted to the aspect as to whether it was regularization or it was giving permanency that was being directed by the high court. In such a situation, the direction in that regard will stand deleted and the appeals filed by the state would stand allowed to that extend. If sanctioned posts are vacant (they are said to be vacant) the state will take immediate steps for filling those posts by an regular process of selection. But when regular recruitment is undertaken, the respondents in C.A.No.3595-3612 and those in the Commercial Taxes Department similarly situated, will be allowed to compete, waiving the age restriction impose for the recruitment and giving some weightage for their having been engaged for work in the Department for a significant period of time. That would be the extent of the exercise of power by this court article 142 of the constitution to do justice to them.

Coming to Civil Appeal No. 1861-2063 of 2011, in view of our conclusion on the questions referred to, no relief can be granted, that too to an indeterminate number of members of the association. These appointments or engagement were also in the teeth of directions of the Government not to make such appointments and it is impermissible to recognize such appointments made in the teeth of directions issued by the Government in that regard. We have also held that they are not legally entitled to any such relief. Granting of the relief claimed would mean paying a premium for defiance and insubordination by those concerned who engaged these persons against the interdict in that behalf. Thus, on the whole, the appellants in these appeals are found to be not entitled to any relief. These appeals have, therefore, to be dismissed.

ಪ್ರಸ್ತಾಪಿತ ವಿಷಯದಲ್ಲಿ ಸರ್ಕಾರದ ಆದೇಶಗಳು ಹಾಗೂ ಸುತ್ತೋಲೆಗಳ ಅನ್ವಯ (1) ಸದರಿ ಅಧಿಕಾರಿ/ನೌಕರರನ್ನು ಸಕ್ರಮಗೊಳಿಸುವಲ್ಲಿ ಹಾಗೂ (2) ವೇತನ ಶ್ರೇಣಿ ನಿಗಧಿಪಡಿಸುವ ಹಾಗೂ ಬಾಕಿ ಸೌಲಭ್ಯಗಳನ್ನು ನೀಡುವ ಕುರಿತಂತೆ ಕ್ರಮವಹಿಸುವುದು ಸಮಂಜಸವಲ್ಲವೆಂದು ಹಾಗೂ ಸರ್ವೋಚ್ಚ ನ್ಯಾಯಾಲಯದ ಆದೇಶ/ಮಾರ್ಗಸೂಚಿಗಳಂತೆ ಕ್ರಮವಹಿಸುವುದು ಅತ್ಯಂತ ಸೂಕ್ತ ಹಾಗೂ ಸಮಂಜಸವೆಂದು ಅಭಿಪ್ರಾಯ ನೀಡಿರುತ್ತಾರೆ.

ಈ ಮೇಲ್ಕಂಡ ವಿವರವಾದ ಅಂಶಗಳ ಹಿನ್ನೆಲೆಯಲ್ಲಿ, ಸದರಿ 6 ಮಂದಿ ಅರೆಕಾಲಿಕ ನೌಕರರು ಮನವಿ ಸಲ್ಲಿಸಿ, 1995ರಿಂದ ಪಾಲಿಕೆಯಲ್ಲಿ ಅರೆಕಾಲಿಕ ನೌಕರಿಗೆ ಮಾಹೆಯಾನ ರೂ. 1300, 1400 ಹಾಗೂ 2000 ಗಳ ಸಂಚಿತ ವೇತನವನ್ನು ಪಡೆದು 16 ವರ್ಷಗಳಿಂದ ಕೆಲಸದಲ್ಲಿ ಯಾವುದೇ ಭದ್ರತೆಯಿಲ್ಲದೇ ಕಡಿಮೆ ವೇತನದಲ್ಲಿ ಜೀವನ ನಿರ್ವಹಣೆ ಕಷ್ಟಕರವಾಗಿರುವುದರಿಂದ ನಿಯತಕಾಲಿಕ ವೇತನ ಪಾವತಿಸಲು ಕೋರಿರುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಆಡಳಿತ) ರವರ ದಿನಾಂಕ:23-06-2012ರ ಟಿಪ್ಪಣಿ ಹಾಗೂ ಪ್ರಸ್ತಾವನೆ ಕುರಿತಂತೆ ದೀರ್ಘವಾದ ಚರ್ಚೆಯ ನಂತರ ಆಯುಕ್ತರ ದಿನಾಂಕ:23-06-2012ರ ಟಿಪ್ಪಣಿಯ ರೀತ್ಯಾ ನಿಯತಕಾಲಿಕ ವೇತನ ಪಾವತಿಸಲು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:09-10-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಕನಿಷ್ಠ ವೇತನವನ್ನು ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಕನಿಷ್ಠ ವೇತನವನ್ನು ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 02 (296) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದಿಂದ ಎರವಲು ಸೇವೆಯ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಜಿ. ನಾಗಭೂಷಣ್ ಮತ್ತು ಇತರೆ ಅಭಿಯಂತರರುಗಳು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ರವರಿಗೆ ಮನವಿ ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವಂತೆ ಕೋರಿರುವ ಮೇರೆಗೆ ಸದರಿಯವರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ವಿಲೀನಗೊಳಿಸಲು ನಿಗಮದ ಅಭ್ಯಂತರವಿಲ್ಲವೆಂದು ಹಾಗೂ ಸದರಿಯವರುಗಳ ಮನವಿಯನ್ನು ಪರಿಗಣಿಸಲು ನಿಗಮದಿಂದ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು ರವರು ದಿನಾಂಕ:17-12-2007 ಮತ್ತು 11-02-2008ರ ರೀತ್ಯಾ ಪತ್ರವನ್ನು ಬರೆಯಲಾಗಿರುತ್ತದೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ದಿನಾಂಕ:11-04-2008ರ ಮತ್ತು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ದಿನಾಂಕ:22-07-2008ರ ಪತ್ರಗಳಲ್ಲಿ ಈ ಕೆಳಕಂಡ ಅಭಿಯಂತರರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಭಿಪ್ರಾಯ ವರದಿಯನ್ನು ಕಳುಹಿಸಿಕೊಡಲು ಕೋರಿರುತ್ತಾರೆ.

1. ಶ್ರೀ ಆರ್.ಟಿ. ಸುರೇಶ್‌ಬಾಬು. ಸಹಾಯಕ ಅಭಿಯಂತರರು
2. ಶ್ರೀ. ಜಿ. ನಾಗಭೂಷಣ್, ಸಹಾಯಕ ಅಭಿಯಂತರರು
3. ಶ್ರೀ. ಆರ್. ಬೆನಕೇಶ್, ಸಹಾಯಕ ಅಭಿಯಂತರರು
4. ಶ್ರೀ. ಹೆಚ್.ಎಂ. ತಿಮ್ಮಪ್ಪ, ಕಿರಿಯ ಅಭಿಯಂತರರು
5. ಶ್ರೀ. ಕೆ.ಜಿ ಸುಂದರೇಶ್. ಕಿರಿಯ ಅಭಿಯಂತರರು
6. ಶ್ರೀ. ಎಸ್.ಎಲ್. ಅಶ್ವಥ್. ಸಹಾಯಕ ಅಭಿಯಂತರರು
7. ಶ್ರೀ. ಎಸ್. ವಿಶ್ವನಾಥ್, ಸಹಾಯಕ ಅಭಿಯಂತರರು
8. ಶ್ರೀ. ಬಿ. ರಮೇಶ್, ಕಿರಿಯ ಅಭಿಯಂತರರು
9. ಶ್ರೀ ರವೀಂದ್ರನಾಥ್. ಸಹಾಯಕ ಅಭಿಯಂತರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಹಾಯಕ/ಕಿರಿಯ ಅಭಿಯಂತರರುಗಳ ಕೊರತೆ ಇದ್ದು, ಕರ್ನಾಟಕ ನಿರ್ಮಾಣ ನಿಗಮ ನಿಯಮಿತದ ಅಭಿಯಂತರರುಗಳನ್ನು ಪೋಲೀಸ್ ಹೌಸಿಂಗ್ ಕಾರ್ಪೋರೇಷನ್ ಹಾಗೂ ಇತರೆ ಇಲಾಖೆಗಳಲ್ಲಿ ವಿಲೀನಗೊಳಿಸಿರುವುದರಿಂದ ಹಾಗೂ ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕರ್ನಾಟಕ ನಿರ್ಮಾಣ ನಿಗಮ ನಿಯಮಿತದಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ವಿಲೀನಗೊಳಿಸಲು ಅವಕಾಶವಿಲ್ಲದೇ ಇರುವುದರಿಂದ, ಈ ಕೆಳಕಂಡ ಷರತ್ತುಗೊಳಪಡಿಸಿ, ಸಾರ್ವಜನಿಕ ಹಾಗೂ ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ನಿಯಮವನ್ನು ಸಡಿಲಿಸಿ, ಪಾಲಿಕೆಯ ನೇರ ನೇಮಕಾತಿ ಹುದ್ದೆಗಳಿಗೆ ಸದರಿಯವರುಗಳ ಸೇವೆಯನ್ನು ವಿಲೀನಗೊಳಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಮಾನ್ಯ ಆಡಳಿತಗಾರರು ದಿನಾಂಕ:25-10-2008 ರಲ್ಲಿ ಆದೇಶಿಸಿದ್ದು, ಇದರಂತೆ ಆಯುಕ್ತರ ಕಛೇರಿ ಪತ್ರ ಸಂಖ್ಯೆ : ಬಿ12(6)/ಪಿಆರ್/772/2008-09, ದಿ: 01-12-2008ರ ರೀತ್ಯಾ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. (ಶ್ರೀ.ಆರ್.ಟಿ. ಸುರೇಶ್ ಬಾಬು, ಸಹಾಯಕ ಅಭಿಯಂತರರು, ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲವಾದ್ದರಿಂದ ಅವರ ಹೆಸರನ್ನು ಕೈಬಿಡಲಾಗಿರುತ್ತದೆ)

.............................2

<u>ಷರತ್ತುಗಳು:</u>

1. ಸದರಿ ಅಭಿಯಂತರರುಗಳ ಸೇವಾ ಜೇಷ್ಠತೆಯನ್ನು ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ/ಕಿರಿಯ ಅಭಿಯಂತರರುಗಳ ಸೇವಾ ಜೇಷ್ಠತೆಗಿಂತ ಕಿರಿಯರನ್ನಾಗಿ ಪರಿಗಣಿಸುವುದು.
2. ಸೇವಾ ಹಿರಿತನ ಹಾಗೂ ಮುಂಬಡ್ತಿ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ದಾವೆಯನ್ನು ಹೂಡತಕ್ಕದ್ದಲ್ಲ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸರ್ಕಾರವು ದಿ: 01-06-2011 ರಂದು ಕರಡು ನಿಯಮಗಳನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಸದರಿ ಕರಡು ನಿಯಮಗಳಿಗೆ ನಿಗಧಿತ ಅವಧಿಯಲ್ಲಿ ಸ್ವೀಕರಿಸುವ ಆಕ್ಷೇಪಣೆ/ಸಲಹೆಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ : ನಅಇ 31 ಎಂಎನ್‌ವೈ 2008, ದಿನಾಂಕ : 04-06-2011ರಲ್ಲಿ ಕೋರಲಾಗಿರುತ್ತದೆ.

ಇದರಂತೆ, ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ 8 ಮಂದಿ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸ್ವೀಕರಿಸಲಾಗಿರುವ ಈ ಕೆಳಕಂಡವರುಗಳ ಆಕ್ಷೇಪಣೆಗಳನ್ನು ಸರ್ಕಾರಕ್ಕೆ ಆಯುಕ್ತರ ಕಛೇರಿಯ ದಿನಾಂಕ:22-07-2011ರ ಪತ್ರದಲ್ಲಿ ಕಳುಹಿಸಿಕೊಡಲಾಗಿರುತ್ತದೆ.

| ಕ್ರ ಸಂ | ಆಕ್ಷೇಪಣೆದಾರರ ಹೆಸರು | ವಿಳಾಸ |
|---|---|---|
| 1 | ಶ್ರೀ. ಎಂ ಉದಯಶಂಕರ್ | ವಿರೋಧ ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| 2 | ಅಧ್ಯಕ್ಷರು | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಹಾಗೂ ನೌಕರರ ಕೇಂದ್ರೀಯ ಸಂಘ (ನೋಂ) |
| 3 | ಶ್ರೀ ಸಿ.ಎಂ ಮಂಜುನಾಥ್ | ನಂ. 48, 15ನೇ ಮುಖ್ಯರಸ್ತೆ, 4ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು-96 |
| 4 | ಶ್ರೀ. ಎಂ.ಟಿ. ಬಾಲಾಜಿ ಮತ್ತು ಇತರೇ ಸಹಾಯಕ ಅಭಿಯಂತರರು | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ/ ಕಿರಿಯ ಅಭಿಯಂತರರುಗಳು |
| 5 | ಶ್ರೀ.ಎಸ್. ವೆಂಕಟರತ್ನಯ್ಯ | ನಂ. 48, 1ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಗೌಡನಹಳ್ಳಿ, ಬೆಂಗಳೂರು. |

ಸರ್ಕಾರವು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ 8 ಮಂದಿ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸ್ವೀಕರಿಸಲಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ, ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ : ಯುಡಿಡಿ 31 ಎಂಎನ್‌ವೈ 2008, ದಿನಾಂಕ : 31.10.2011ರ ಅಧಿಸೂಚನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿದ್ದು, ಸದರಿ ಅಧಿಸೂಚನೆಯು ಈ ಕೆಳಕಂಡಂತೆ ಇರುತ್ತದೆ.

**"Whereas, the draft of the Karnataka Municipal Corporations (Absorption of Assistant Engineers/Junior Engineers appointed on deputation basis in Bruhat Bangalore Mahanagara Palike (Special) Rules, 2011 which the Government of Karnataka proposes to make in exercise of the powers conferred by sub-section (1) of section 91 read with section 421 of the Karnataka Municipal Corporations Act. 1976 (Karnataka Act 14 of 1977) was published in Notification No. UDD 31 MNY 2008, dated 1st June 2011, in part IV-A of the Karnataka Gazette, Extra-ordinary, dated 2nd June 2011 inviting objections and suggestions from the persons likely to be affected thereby within fifteen days from the date of its publication in the Official Gazette.**

............................3

Whereas, the said Gazette was made available to the public on 2nd June 2011.

And whereas, the objections and suggestions were received in respect of the said draft rules have been examined by the Government.

Now therefore in exercise of the powers conferred by Section 421 of the Karnataka Municipal Corporations Act, 1976 (Karnataka Act 14 of 1977) the Government of Karnataka hereby makes the following rules, namely:

**RULES**

1. Title and commencement: (1) These rules may be called the Karnataka Municipal Corporations (Absorption of Assistant Engineers/Junior Engineers appointed on deputation basis in Bruhat Bangalore Mahanagara Palike (Special) Rules 2011.

   (2) They Shall come into force from the date of their publication in the Official Gazette.

2. Definitions: (1) In these rules, unless the context otherwise requires, "Deputation Assistant Engineers/Junior Engineers" means an Assistant Engineer or Junior Engineer as the case may be appointed in the Bruhat Bangalore Mahanagara Palike on deputation basis and has served for not less than three years in the Karnataka State construction Corporation limited.

   (2) Other works and expression used in these rules but not defined shall have the same meaning respectively assigned to them in the Karnataka Municipal Corporations Rules 1977.

3. Absorption of Deputation Assistant Engineer or Junior Engineer in the Bruhat Bangalore Mahanagara Palike-

   Notwithstanding anything contained in the Karnataka Municipal Corporations Rules, 1977 or any other rules made or deemed to have been made under the provisions of the Karnataka Municipal Corporations Act, 1976 (Karnataka Act 14 of 1977), governing the method of recruitment of the employees of the Bruhat Bangalore Mahanagara Palike every Deputation Assistant Engineer or Junior Engineer as Specified in Column (2) of the Schedule and continues as such in the Bruhat Bangalore Mahanagara Palike on the date of commencement of these rules, be absorbed in the corresponding category of post and scale of pay specified in Columns (4) and (5) respectively in the Bruhat Bangalore Mahanagara Palike Services. Provided that no such person shall be absorbed.

   (i) If he was disqualified for appointment under the Karnataka Municipal Corporations Rules, 1977 on the date of appointment as Assistant Engineer or Junior Engineer in the Karnataka State Construction Corporation Limited;

   (ii) If he does not possess the minimum academic qualification if any specified in the rules of recruitment applicable for the recruitment to the post in which he is absorbed.

(iii) In any post reserved for the persons belonging to the category of Schedule castes or Scheduled Tribes or other backward classes to which he was appointed as deputation Junior Engineer or Assistant Engineer as the case may be if he is found to be not belonging to such category, Otherwise such posts shall be treated as backlog to be filled by process of Special recruitment from among these classes.

4. **Pay, Pension Leave and Seniority of persons absorbed under these rules:** Notwithstanding anything contained in the Karnataka Municipal Corporations Rules, 1977.

(i) The initial basic pay of deputations Assistant Engineer or Junior Engineer as the case may be absorbed under these rules shall be fixed at the minimum of the pay scale applicable to the category of post to which he is absorbed under rule 3.

(ii) The services rendered by a person on deputation Assistant Engineer or Junior Engineer as the case may be prior to the date of absorption shall count for the purpose of leave pension, but not for pay and seniority and grant of selection time scale of pay under Karnataka Civil Services (Time Bound Advancement) Rules, 1983 or grant of selection time scale of pay under the Karnataka Civil Services (Automatic grant of special promotion to the senior scale of pay) Rules, 1991 and additional increment for having completed twenty years of service in the single cadre.

(iii) As regards pension and other retirement benefits, they shall be governed by the pension policy of the Bruhat Bangalore Mahanagara Palike.

**SCHEDULE**

**(NOTIFICATION NO.UDD 31 MNY 2008 DATED: 31-10-2011)**

**(See Rule-3)**

| Sl. No. | Name of the Deputation Engineers | Designation | Post in which absorbed | Scale of pay of the post in which absorbed (Rs) |
|---|---|---|---|---|
| 1. | Sri. G. Nagabhushana | Assistant Engineer | Assistant Engineer | 11400-21600 |
| 2 | Sri. R. Benakesha | Assistant Engineer | Assistant Engineer | 11400-21600 |
| 3 | Sri. S.L. Ashwath | Assistant Engineer | Assistant Engineer | 11400-21600 |
| 4 | Sri. S. Vishwanath | Assistant Engineer | Assistant Engineer | 11400-21600 |
| 5 | Sri. H. Ravindranath | Assistant Engineer | Assistant Engineer | 11400-21600 |
| 6 | Sri. H.M. Thimmappa | Junior Engineer | Junior Engineer | 8825-16000 |
| 7 | Sri. K.G. Sundaresh | Junior Engineer | Junior Engineer | 8825-16000 |
| 8 | Sri. B. Ramesh | Junior Engineer | Junior Engineer | 8825-16000 |

.........5

ಶ್ರೀ. ಜಿ. ನಾಗಭೂಷಣ್ ಮತ್ತು ಇತರೆ ಅಭಿಯಂತರರು ದಿನಾಂಕ:31-10-2011ರ ಸರ್ಕಾರದ ಅಧಿಸೂಚನೆಯೊಂದಿಗೆ ದಿನಾಂಕ:15-11-2011ರ ರೀತ್ಯಾ ಮನವಿ ಸಲ್ಲಿಸಿ, ಕರ್ನಾಟಕ ರಾಜ್ಯ ನಿರ್ಮಾಣ ನಿಗಮವನ್ನು ಸರ್ಕಾರದಿಂದ ಮುಚ್ಚಲು ಆದೇಶವಾಗಿರುವ ಹಿನ್ನೆಲೆಯಲ್ಲಿ ತಮ್ಮಗಳ ಸೇವೆಯನ್ನು ಪಾಲಿಕೆಯಲ್ಲಿ ಕ್ರಮಬದ್ಧಗೊಳಿಸಲು ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿರುವ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಯುಡಿಡಿ 31 ಎಂಎನ್‌ವೈ 2008 ದಿ:31-10-2011ನ್ನು ಪಾಲಿಕೆಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಆಯುಕ್ತರ ಕಛೇರಿ ಟಿಪ್ಪಣಿ ದಿನಾಂಕ:08-03-2012 ರಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ಸದರಿ ಟಿಪ್ಪಣಿಯನ್ನು ದಿನಾಂಕ:17-03-2012 ರಂದು ನಡೆದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ವಿಷಯ ಸಂಖ್ಯೆ:ಸಿಆಸುಸ್ಥಾನ/31/2011-12 ರಲ್ಲಿ ಒಪ್ಪಿರುತ್ತಾರೆ.

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿರುವ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಯುಡಿಡಿ 31 ಎಂಎನ್‌ವೈ 2008 ದಿ:31-10-2011ನ್ನು ಪಾಲಿಕೆಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-06-2012ರ ಟಿಪ್ಪಣಿ ಹಾಗೂ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಆಡಳಿತ) ರವರು ನೀಡಿದ ಅಭಿಪ್ರಾಯವನ್ನು ಒಪ್ಪಿ ಆಯುಕ್ತರವರ ದಿನಾಂಕ:26-06-2012ರ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ16-07-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:16-07-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 03 (297) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶದಂತೆ, 07 ನಗರ ಸಭೆಗಳು, 01 ಪುರಸಭೆ ಮತ್ತು 110 ಹಳ್ಳಿಗಳು ಸೇರ್ಪಡೆಗೊಂಡು ದಿನಾಂಕ:16-01-2007 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಯಾಗಿರುತ್ತದೆ. ಹಳೆ ಬೆಂಗಳೂರು ಮಹಾನಗರ ಪಾಲಿಕೆಯ 03 ವಲಯಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 05 ಹೊಸ ವಲಯಗಳು ಸೇರಿ ಒಟ್ಟು 08 ವಲಯಗಳು ಅಸ್ತಿತ್ವದಲ್ಲಿದ್ದು, ಇದರಂತೆ ಹಳೆಯ ಮೂರು ವಲಯಗಳಲ್ಲಿರುವ 100 ವಾರ್ಡ್‌ಗಳ ಜೊತೆಗೆ 98 ವಾರ್ಡ್‌ಗಳನ್ನು ಹೊಸದಾಗಿ ಸೇರಿಸಿ ಒಟ್ಟು 198 ವಾರ್ಡ್‌ಗಳನ್ನು ಸೃಜಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಹಾಯಕ ಕಂದಾಯ ಅಧಿಕಾರಿ ಹುದ್ದೆಗೆ ಮೌಲ್ಯಮಾಪಕರು/ವ್ಯವಸ್ಥಾಪಕರು/ಶೀಘ್ರಲಿಪಿಗಾರರ ವೃಂದದಿಂದ 5:5:1 ರಂತೆ ಮುಂಬಡ್ತಿಯನ್ನು ನೀಡಲಾಗುತ್ತಿದ್ದು, ಪ್ರಸ್ತುತ ಹಳೆಯ ಬೆಂಗಳೂರು ಮಹಾನಗರ ಪಾಲಿಕೆಗೆ 74 ಮೌಲ್ಯಮಾಪಕರ ಮಂಜೂರಾತಿ ಹುದ್ದೆಗಳಿದ್ದು, ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಯಾವುದೇ ಮೌಲ್ಯಮಾಪಕರ ಹುದ್ದೆಗಳನ್ನು ಮಂಜೂರಾತಿ ನೀಡಿರುವುದಿಲ್ಲ. ಹಳೆ ಬೆಂಗಳೂರು ಮಹಾನಗರ ಪಾಲಿಕೆಗೆ 78 ವ್ಯವಸ್ಥಾಪಕರ ಮಂಜೂರಾತಿ ಹುದ್ದೆಗಳಿದ್ದು, ಸರ್ಕಾರವು ದಿನಾಂಕ:09-03-2007ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 50 ವ್ಯವಸ್ಥಾಪಕರ ಹುದ್ದೆಗಳನ್ನು ಮಂಜೂರಾತಿ ನೀಡಿರುತ್ತದೆ. ಇದರಂತೆ, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 78+50=128 ವ್ಯವಸ್ಥಾಪಕರ ಮಂಜೂರಾತಿ ಹುದ್ದೆಗಳು ಇರುತ್ತವೆ. ಸಹಾಯಕ ಕಂದಾಯ ಅಧಿಕಾರಿ ಹುದ್ದೆಗೆ ಮೌಲ್ಯಮಾಪಕರು ಮತ್ತು ವ್ಯವಸ್ಥಾಪಕರು ವೃಂದಗಳಿಂದ ಸಮನಾಂತರವಾಗಿ 5:5:1 ರಂತೆ ಮುಂಬಡ್ತಿ ನೀಡಲು ಮೌಲ್ಯಮಾಪಕರ ಹುದ್ದೆಗಳ ಕೊರತೆ ಇರುತ್ತದೆ.

| ಕ್ರ. ಸಂ. | ಹುದ್ದೆ | ವೇತನ ಶ್ರೇಣಿ | ಒಂದು ತಿಂಗಳ ಒಟ್ಟು ವೇತನ |
|---|---|---|---|
| 1 | ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು | 7275-13350<br>ವೇತನ ರೂ.10,487 x 40 | 40 ಮಂದಿ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಒಂದು ತಿಂಗಳ ವೇತನ ರೂ.4,19,480-00 |
| 2 | ಮೌಲ್ಯಮಾಪಕರು | 10000-18150<br>ವೇತನ ರೂ.14,500 x 40 | 40 ಮಂದಿ ಮೌಲ್ಯಮಾಪಕರ ಒಂದು ತಿಂಗಳ ವೇತನ ರೂ.5,80,000-00 |
| | **ಒಂದು ತಿಂಗಳ ವೇತನದ ವ್ಯತ್ಯಾಸದ ಮೊತ್ತ** | | **ರೂ.1,60,520-00** |

40 ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಯ ವೇತನ ಶ್ರೇಣಿ ಮತ್ತು 40 ಮೌಲ್ಯಮಾಪಕರ ಹುದ್ದೆಯ ವೇತನ ಶ್ರೇಣಿಯಂತೆ ಒಂದು ತಿಂಗಳ ವೇತನದ ವ್ಯತ್ಯಾಸದ ಮೊತ್ತ ರೂ.1,60,520.00 ಮಾತ್ರ ಆಗಿರುತ್ತದೆ. ಪ್ರಸ್ತುತ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ಮೌಲ್ಯಮಾಪಕರ ಹುದ್ದೆಗೆ ಮುಂಬಡ್ತಿಯನ್ನು ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು, ಪ್ರಥಮ ದರ್ಜೆ ಗುಮಾಸ್ತರು ಮತ್ತು ಶೀಘ್ರಲಿಪಿಗಾರರ ವೃಂದದಿಂದ 7:5:1ರ ಅನುಪಾತದಲ್ಲಿ ಪರಿಗಣಿಸಲಾಗುತ್ತಿದೆ. ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು ಮತ್ತು ಶೀಘ್ರಲಿಪಿಗಾರರಿಗೆ ಮುಂದಿನ ಮುಂಬಡ್ತಿ ಹುದ್ದೆ ಮೌಲ್ಯಮಾಪಕರ

ಹುದ್ದೆಯಾಗಿರುತ್ತದೆ. ಪ್ರಥಮ ದರ್ಜೆ ಗುಮಾಸ್ತರ ವೃಂದದಿಂದ ಮೌಲ್ಯಮಾಪಕರ ಹುದ್ದೆಗೆ ಅಥವಾ ವ್ಯವಸ್ಥಾಪಕರ ಹುದ್ದೆಗೆ ಮುಂಬಡ್ತಿ ಹೊಂದಲು ಅವಕಾಶವಿರುತ್ತದೆ. ಇದರಂತೆ ಪ್ರಥಮ ದರ್ಜೆ ಗುಮಾಸ್ತರ ವೃಂದದ ನೌಕರರು ಮೌಲ್ಯಮಾಪಕರ ಹುದ್ದೆಗೆ ಮುಂಬಡ್ತಿ ಕೋರಿ ಐಚ್ಛಿಕತೆ ಸಲ್ಲಿಸಿರುವಂತಹ ನೌಕರರುಗಳಿಗೆ ಮೌಲ್ಯಮಾಪಕರ ಹುದ್ದೆಗೆ ಮುಂಬಡ್ತಿ ಪರಿಗಣಿಸಲು ಮೌಲ್ಯಮಾಪಕರ ಹುದ್ದೆಗಳು ಕೊರತೆ ಇರುತ್ತದೆ. ಆದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರವು ದಿನಾಂಕ:09-03-2007 ರಂದು ಮಂಜೂರಾತಿ ನೀಡಿರುವ 50 ವ್ಯವಸ್ಥಾಪಕರ ಹುದ್ದೆಗಳಿಗೆ ಪ್ರಥಮ ದರ್ಜೆ ಗುಮಾಸ್ತರ ವೃಂದದಿಂದ ಈಗಾಗಲೇ ಮುಂಬಡ್ತಿಯನ್ನು ನೀಡಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರವು ಮಂಜೂರಾತಿ ನೀಡಿರುವ 137 ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು ಹುದ್ದೆಗಳಲ್ಲಿ 40 ಹುದ್ದೆಗಳನ್ನು ಮೌಲ್ಯಮಾಪಕರ ಹುದ್ದೆಗಳನ್ನಾಗಿ ಪರಿವರ್ತಿಸಿ ಮಂಜೂರಾತಿ ನೀಡಬೇಕೆಂದು ಈ ಹಿಂದೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಈ ಸಂಬಂಧ ಸರ್ಕಾರವು ಸಂಖ್ಯೆ: ನಅಇ 141 ಎಂಎಲ್‌ಆರ್ 2006, ದಿನಾಂಕ:06-12-2008ರ ಪತ್ರದಲ್ಲಿ ಸರ್ಕಾರದ ಪತ್ರ ಸಂಖ್ಯೆ: ನಅಇ 139 ಎಂಎನ್‌ವೈ 2005, ದಿನಾಂಕ:29-05-2008 ಮತ್ತು 21-06-2008ರ ಪತ್ರಗಳಲ್ಲಿ ತಿಳಿಸಿರುವಂತೆ, ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ಮತ್ತು ಒಂದು ವೇಳೆ ಹುದ್ದೆಗಳನ್ನು ಸೃಜಿಸಬೇಕಾದಲ್ಲಿ ಸೂಕ್ತ ಸಕಾರಣಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಈ ಮೇರೆಗೆ, ಸರ್ಕಾರವು ಸಂಖ್ಯೆ: ಯುಡಿಡಿ 141 ಎಂಎಲ್‌ಆರ್ 2006, ದಿನಾಂಕ: 09-03-2007ರ ಆದೇಶದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಂಜೂರಾತಿ ನೀಡಿರುವ 137 ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಗಳಲ್ಲಿ 40 ಹುದ್ದೆಗಳನ್ನು ಮೌಲ್ಯಮಾಪಕರ ಹುದ್ದೆಗಳನ್ನಾಗಿ ಪರಿವರ್ತಿಸಿ ಮಂಜೂರಾತಿ ನೀಡಲು ಕೋರಿ ಸರ್ಕಾರಕ್ಕೆ ದಿನಾಂಕ:16-01-2009 ರಂದು ವಿವರಣೆಗಳುಳ್ಳ ಪತ್ರವನ್ನು ಬರೆಯಲಾಗಿರುತ್ತದೆ. ಆದರೆ, ಸರ್ಕಾರದಿಂದ ಯಾವುದೇ ಉತ್ತರ ಬಂದಿರುವುದಿಲ್ಲ.

ಪ್ರಸ್ತುತ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ವೃಂದದಿಂದ ಸೇವಾ ಹಿರಿತನದ ಮೇಲೆ ಮೌಲ್ಯಮಾಪಕರ ಮುಂಬಡ್ತಿ ಹುದ್ದೆಗೆ ಅರ್ಹರಾಗಿರುವ ಹೆಚ್ಚಿನ ನೌಕರರು ಸ್ಥಗಿತ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಹಿನ್ನಲೆಯಲ್ಲಿ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ವೃಂದದಿಂದ ಮೌಲ್ಯಮಾಪಕರ ಹುದ್ದೆಗೆ ಮುಂಬಡ್ತಿ ನೀಡಿದಲ್ಲಿ ಪಾಲಿಕೆಗೆ ಹೆಚ್ಚಿನ ಆರ್ಥಿಕ ಹೊರೆ ಆಗುವುದಿಲ್ಲ.

ಈ ಹಿನ್ನಲೆಯಲ್ಲಿ, ಸರ್ಕಾರದ ಆದೇಶದಂತೆ, 07 ನಗರ ಸಭೆಗಳು, 01 ಪುರಸಭೆ ಮತ್ತು 110 ಹಳ್ಳಿಗಳು ಸೇರ್ಪಡೆಗೊಂಡು ದಿನಾಂಕ:16-01-2007 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಗೊಂಡಿದ್ದು, 05 ಹೊಸ ವಲಯಗಳು ಮತ್ತು ಹಳೆಯ 03 ವಲಯಗಳು ಸೇರಿ 08 ವಲಯಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಸ್ತಿತ್ವದಲ್ಲಿದ್ದು ಹಾಗೂ ಹಳೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿರುವ 100 ವಾರ್ಡ್‌ಗಳ ಜೊತೆಗೆ 98 ವಾರ್ಡ್‌ಗಳನ್ನು ಸೇರಿಸಿ ಒಟ್ಟು 198 ವಾರ್ಡ್‌ಗಳನ್ನು ಸೃಜಿಸಲಾಗಿರುತ್ತದೆ. ಆದ್ದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 08 ವಲಯಗಳ ಕಂದಾಯ ಇಲಾಖೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಸಹಾಯಕ ಕಂದಾಯ ಅಧಿಕಾರಿ ಹುದ್ದೆಗಳಿಗೆ ಮುಂಬಡ್ತಿಯನ್ನು ಮೌಲ್ಯಮಾಪಕರ ವೃಂದದಿಂದ ಮತ್ತು ವ್ಯವಸ್ಥಾಪಕರ ವೃಂದದಿಂದ ಅರ್ಹ ನೌಕರರುಗಳಿಗೆ ಸಮವಾಗಿ ಮುಂಬಡ್ತಿ ಪರಿಗಣಿಸಲು ಮೌಲ್ಯಮಾಪಕರ ವೃಂದದಿಂದ 54 ಮೌಲ್ಯಮಾಪಕರ ಹುದ್ದೆಗಳು ಕೊರತೆಯಿರುತ್ತದೆ. ಆದ್ದರಿಂದ, ಸರ್ಕಾರವು ಸಂಖ್ಯೆ: ಯುಡಿಡಿ 141 ಎಂಎಲ್‌ಆರ್ 2006, ದಿನಾಂಕ: 09-03-2007ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಇಲಾಖೆಗೆ ಮಂಜೂರಾತಿ ನೀಡಿರುವ 137 ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರ ಹುದ್ದೆಗಳಲ್ಲಿ 40 ಹುದ್ದೆಗಳನ್ನು

..........................3

ಮೌಲ್ಯಮಾಪಕರ ಹುದ್ದೆಗಳನ್ನಾಗಿ ಪರಿವರ್ತಿಸಿ ಮಂಜೂರಾತಿ ನೀಡಲು ಸರ್ಕಾರವನ್ನು ಕೋರುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:09-11-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:09-11-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 09-11-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 04 (307) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಬಡ ಹಾಗೂ ಮಧ್ಯಮ ವರ್ಗದ ಆರ್ಥಿಕವಾಗಿ ಹಿಂದುಳಿದ ನಾಗರೀಕರು ವೈದ್ಯಕೀಯ ಚಿಕಿತ್ಸೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರ ವಿವೇಚನಾಧೀನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳು ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸುಮಾರು ಐದು (5) ಕೋಟಿಗಳಷ್ಟು ಹಣವನ್ನು ಹಾಗೂ ಸದಸ್ಯರ ವಿವೇಚನಾಧೀನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳು ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ.8 ಕೋಟಿಗಳಷ್ಟು ಆಯವ್ಯಯದಲ್ಲಿ ಮೀಸಲಿಡಲಾಗುತ್ತಿರುತ್ತದೆ.

ತತ್ಸಂಬಂಧ, ಪೂಜ್ಯ ಮಹಾಪೌರರ ವೈದ್ಯಕೀಯ ಪರಿಹಾರ ನಿಧಿಯಿಂದ ಹಾಗೂ ಪಾಲಿಕೆ ಸದಸ್ಯರ ವಿವೇಚನಾಧೀನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳ ಅಡಿಯಲ್ಲಿ ಧನ ಸಹಾಯ ಕೋರಿ ಸಾರ್ವಜನಿಕರು ಅರ್ಜಿ ಸಲ್ಲಿಸುತ್ತಿದ್ದು, ಸಾರ್ವಜನಿಕರಿಗೆ / ಆರ್ಥಿಕವಾಗಿ ಹಿಂದುಳಿದವರಿಗೆ ಹಾಗೂ ಫಲಾನುಭವಿಗಳಿಗೆ ವೈದ್ಯಕೀಯ ಸಹಾಯ ಶೀಘ್ರವಾಗಿ ತಲುಪಲು ಅನುಕೂಲವಾಗುವಂತೆ, ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಹಾಗೂ ತಿದ್ದುಪಡಿ ಆದೇಶಗಳನ್ನು ಜಾರಿಗೆ ತಂದು ವೈದ್ಯಕೀಯ ಧನ ಸಹಾಯವನ್ನು ಬಿಡುಗಡೆ ಮಾಡಲಾಗುತ್ತಿರುತ್ತದೆ.

ಆದರೆ, ಈ ರೀತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಮಂಜೂರು ಮಾಡುತ್ತಿರುವ ವೈದ್ಯಕೀಯ ಸಹಾಯ ಧನವು ದುರುಪಯೋಗವಾಗುತ್ತಿರುವುದಾಗಿ ಹಲವಾರು ಪತ್ರಿಕೆಗಳಲ್ಲಿ ಹಾಗೂ ಸಾರ್ವಜನಿಕರಿಂದ ದೂರುಗಳು ಬರುತ್ತಿರುತ್ತದೆ. ಈ ರೀತಿಯ ದುರುಪಯೋಗವನ್ನು ತಡೆಗಟ್ಟಲು ಹಾಗೂ ಸಾರ್ವಜನಿಕರಿಗೆ ಪಾಲಿಕೆಯ ವತಿಯಿಂದ ನೀಡುತ್ತಿರುವ ವೈದ್ಯಕೀಯ ಪರಿಹಾರ ಸಹಾಯ ಧನವು ಸಕಾಲದಲ್ಲಿ ಹಾಗೂ ಸೂಕ್ತ ರೀತಿಯಲ್ಲಿ ಸಹಾಯ ತಲುಪಲು ಕಟ್ಟುನಿಟ್ಟಾದ ಮಾರ್ಗಸೂಚಿಗಳನ್ನು ಅಳವಡಿಸುವುದು ಅವಶ್ಯಕವಿದೆ. ಈ ಹಿನ್ನಲೆಯಲ್ಲಿ, ಕೆಳಕಂಡ ಅಂಶಗಳನ್ನೊಳಗೊಂಡಂತೆ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಉದ್ದೇಶಿಸಿದೆ.

### ವೈದ್ಯಕೀಯ ಧನ ಸಹಾಯ ಮಂಜೂರು ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಗಳು

1. ಅರ್ಜಿದಾರರು ತಾವು ಖಾಯಿಲೆಯಿಂದ ಬಳಲುತ್ತಿರುವ ಬಗ್ಗೆ ಸಂಬಂಧಪಟ್ಟ ಆಸ್ಪತ್ರೆಯ ತಜ್ಞ ವೈದ್ಯರಿಂದ ದೃಢೀಕರಣ ಪತ್ರ ನೀಡಬೇಕು. ಈ ಪತ್ರದಲ್ಲಿ ಖಾಯಿಲೆಯ ಸ್ವರೂಪ, ಸದರಿ ಖಾಯಿಲೆಯ ಚಿಕಿತ್ಸೆಗೆ ವೆಚ್ಚವಾಗುವ ಅಂದಾಜು ಮೊತ್ತ ಇತ್ಯಾದಿ ವಿವರಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು. ಅರ್ಜಿದಾರರು ಸದರಿ ವೈದ್ಯಕೀಯ ದೃಢೀಕರಣ ಪ್ರಮಾಣ ಪತ್ರವನ್ನು ವೈದ್ಯರಿಂದ ಪಡೆದು, ಪಾಲಿಕೆಯು ನಿಗಧಿಪಡಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ ಭಾವಚಿತ್ರದೊಂದಿಗೆ ಸಲ್ಲಿಸಬೇಕು.
2. ಅರ್ಜಿದಾರರ ವಾಸದ ಬಗ್ಗೆ EPIC ಕಾರ್ಡ್ ಅಥವಾ Ration Card ವಿವರ ಪಡೆದಿರಬೇಕು.
3. ಧನ ಸಹಾಯವನ್ನು ಆಯಾ ಚಾಲ್ತಿ ಆರ್ಥಿಕ ವರ್ಷದ ಚಿಕಿತ್ಸೆಗೆ ಮಾತ್ರ (ಏಪ್ರಿಲ್ ಯಿಂದ ಮಾರ್ಚ್ ವರೆಗೆ) ನೀಡುವುದು. ಹಳೆಯ ವರ್ಷಗಳ ಬಿಲ್ಲುಗಳನ್ನು ಸಲ್ಲಿಸಿ, ವೈದ್ಯಕೀಯ ಧನ ಸಹಾಯವನ್ನು ಕೋರುವ ಪ್ರಕರಣವನ್ನು ತಿರಸ್ಕರಿಸುವುದು.
4. ಅರ್ಜಿದಾರರು ಸಹಾಯ ಧನ ಕೋರಿ ಸಲ್ಲಿಸುವ ಅರ್ಜಿಗಳನ್ನು ವಲಯ ಆರೋಗ್ಯ ಅಧಿಕಾರಿಗಳಿಗೆ ಕಳುಹಿಸಿ, ಸದರಿಯವರು ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮಗಳನ್ವಯ ಪರಿಶೀಲಿಸಿ ಅರ್ಹ ಮೊತ್ತದ ಬಗ್ಗೆ ವರದಿಯೊಂದಿಗೆ ಪಾವತಿಸಬೇಕಾದ ಮೊತ್ತವನ್ನು ನಮೂದಿಸಿ ಶಿಫಾರಸ್ಸು ಮಾಡಬೇಕು.

.........2

5. ಪೂಜ್ಯ ಮಹಾಪೌರರ ಹಾಗೂ ಪಾಲಿಕೆ ಸದಸ್ಯರ ವಿವೇಚನಾಧೀನಕ್ಕೆ ಒಳಪಟ್ಟ ಅನುದಾನವನ್ನು ಈ ಕೆಳಕಂಡ ವೈದ್ಯಕೀಯ ಚಿಕಿತ್ಸೆಗಳಿಗೆ ಮಾತ್ರ ಹಣವನ್ನು ಬಿಡುಗಡೆ ಮಾಡಲು ಹಾಗೂ ಈ ವೈದ್ಯಕೀಯ ಚಿಕಿತ್ಸೆಗೆ ತಗಲುವ ವೆಚ್ಚದ ಶೇ.50% ಅಥವಾ ಗರಿಷ್ಠ ರೂ.50,000/- ಗಳನ್ನು ಬಿಡುಗಡೆ ಮಾಡಬಹುದಾಗಿರುತ್ತದೆ.
   (ಎ) ಹೃದಯ ಸಂಬಂಧಿ ಖಾಯಿಲೆಗಳೂ
   (ಬಿ) ಕ್ಯಾನ್ಸರ್
   (ಸಿ) ಕಿಡ್ನಿ ವೈಫಲ್ಯ
   (ಡಿ) ಮೆದುಳಿಗೆ ಸಂಬಂಧಿಸಿದ ಖಾಯಿಲೆ (ಬ್ರೈನ್ ಟ್ಯೂಮರ್)
   (ಇ) ಇತರೆ ಪ್ರಮುಖ ಶಸ್ತ್ರಚಿಕಿತ್ಸೆಗೊಳಪಡುವ ಖಾಯಿಲೆಗಳು.
6. ವೈದ್ಯಕೀಯ ಅನುದಾನದ ಅಡಿಯಲ್ಲಿ ಮೇಲ್ಕಂಡ ಚಿಕಿತ್ಸೆಗಳನ್ನು ಹೊರತುಪಡಿಸಿ ಇನ್ನುಳಿದ ಯಾವುದೇ ಧನ ಸಹಾಯ ನೀಡುವ ಮುನ್ನ ಪೂಜ್ಯ ಮಹಾಪೌರರಿಗೆ ಮಾಹಿತಿಯೊಂದಿಗೆ ಕಡತ ಸಲ್ಲಿಸಿ, ಅವರ ಅನುಮೋದನೆ ಪಡೆಯುವುದು ಹಾಗೂ ಸದರಿ ಚಿಕಿತ್ಸೆಗಳಿಗೆ ಕನಿಷ್ಠ ರೂ.10,000/- ಗಳಿಂದ ಗರಿಷ್ಠ ರೂ.20,000/- ಗಳನ್ನು ಬಿಡುಗಡೆ ಮಾಡಬಹುದಾಗಿರುತ್ತದೆ. ಇದೇ ರೀತಿ ಸದಸ್ಯರ ವಿವೇಚನಾಧೀನಕ್ಕೆ ಒಳಪಟ್ಟ ಅನುದಾನ ನೀಡುವಾಗಲು ಸಹಾ ಇದನ್ನು ಅಳವಡಿಸಿಕೊಳ್ಳುವುದು.
7. ಅಪಘಾತ ಪ್ರಕರಣಗಳಲ್ಲಿ ಮತ್ತು ಇತರೆ ಗಂಭೀರ ಖಾಯಿಲೆ ಪ್ರಕರಣಗಳಲ್ಲಿ ಹೆಚ್ಚಿನ ಪರಿಹಾರವನ್ನು ನೀಡಲು ಲಭ್ಯವಿರುವ ಬಿಲ್ಲುಗಳ ಆಧಾರದ ಮೇಲೆ ಪೂಜ್ಯ ಮಹಾಪೌರರು / ಪಾಲಿಕೆ ಸದಸ್ಯರು ಕನಿಷ್ಠ ಹಾಗೂ ಗರಿಷ್ಠ ಮೊತ್ತವನ್ನು ನಿರ್ಧರಿಸಬಹುದಾಗಿದೆ.
8. ಅಪಘಾತ ಪ್ರಕರಣಗಳಲ್ಲಿ ಪೋಲಿಸ್ ವರದಿಯನ್ನು ಪಡೆದು ಅಪಘಾತದ ಗಂಭೀರತೆಯ ಬಗ್ಗೆ ಸಂಬಂಧಪಟ್ಟ ಪ್ರದೇಶದ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ರವರಿಂದ ವೈದ್ಯಕೀಯ ಮೊತ್ತ ನೀಡುವ ಬಗ್ಗೆ ಸೂಕ್ತ ಶಿಫಾರಸ್ಸು ಪಡೆದು ರೋಗಿಯ ಬ್ಯಾಂಕ್‌ನ ಖಾತೆಗೆ ಚೆಕ್ ಅನ್ನು ನೀಡಬಹುದಾಗಿದೆ.
9. ಪ್ರಸ್ತಾಪಿತ ವೈದ್ಯಕೀಯ ಅನುದಾನಗಳ ಅಡಿಯಲ್ಲಿ ಸಾಮಾನ್ಯ ಖಾಯಿಲೆಗಳಿಗೆ ಧನ ಸಹಾಯ ನೀಡುವ ಪ್ರಸ್ತಾವನೆಗಳನ್ನು ತಿರಸ್ಕರಿಸುವುದು. (ಜ್ವರ, ನೆಗಡಿ, ಕೆಮ್ಮು, ದಮ್ಮು, ಆಯುರ್ವೇದಿಕ್ ಮಸ್ಸಾಜ್ ಚಿಕಿತ್ಸೆ ಹಾಗೂ ಇನ್ನಿತರೆ ಸಾಮಾನ್ಯ ಖಾಯಿಲೆಗಳು).
10. ಆಸ್ಪತ್ರೆಗಳಲ್ಲಿ ಹಾಲಿ ಚಿಕಿತ್ಸೆ ಪಡೆಯುತ್ತಿರುವವರಿಗೆ ಅವರಿಂದ ಸೂಕ್ತ ದಾಖಲಾತಿಗಳನ್ನು ಪಡೆದು ನೇರವಾಗಿ ಆಸ್ಪತ್ರೆಯ ಹೆಸರಿಗೆ ಚೆಕ್ ಅನ್ನು ಪತ್ರ ಮುಖೇನ ಕಳುಹಿಸುವುದು. ಒಂದು ವೇಳೆ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಬಿಡುಗಡೆಯಾಗಿದ್ದಲ್ಲಿ, ಚಿಕಿತ್ಸೆಯನ್ನು ದೃಢಪಡಿಸಿಕೊಂಡ ಬಗ್ಗೆ ಹಾಗೂ ಬಿಡುಗಡೆಯಾದ ಬಗ್ಗೆ ಅಗತ್ಯ ದಾಖಲೆಗಳನ್ನು ಪಡೆದು, ವಲಯ ಆರೋಗ್ಯ ವೈದ್ಯಾಧಿಕಾರಿಗಳ ಹಾಗೂ ಮುಖ್ಯ ಆರೋಗ್ಯ ಅಧಿಕಾರಿಗಳ ವರದಿ ಆಧಾರದ ಮೇಲೆ ಮೂಲ ಬಿಲ್ಲುಗಳನ್ನು ಪಡೆದು ರೋಗಿಯ ಅಥವಾ ಚಿಕಿತ್ಸೆ ಪಡೆದ ವಾರಸುದಾರರ ಬ್ಯಾಂಕ್‌ನ ಖಾತೆಯ ಸಂಖ್ಯೆಯ ಹೆಸರಿಗೆ ಚೆಕ್ ಅನ್ನು ನೀಡಬಹುದಾಗಿದೆ.
11. ವೈದ್ಯಕೀಯ ನಿಧಿಯಿಂದ ಮುಂಗಡ ಧನ ಸಹಾಯ ಕೋರಿ ಮನವಿ ಸಲ್ಲಿಸುವ ಪ್ರಕರಣಗಳಿಗೆ ಮಂಜೂರಾತಿಯ ಅರ್ಧ ಮೊತ್ತವನ್ನು ಮುಂಗಡವಾಗಿ ಆಸ್ಪತ್ರೆಯ ಹೆಸರಿಗೆ ಚೆಕ್ ಅನ್ನು ನೀಡಿ, ನಂತರದಲ್ಲಿ ಆಸ್ಪತ್ರೆಯಿಂದ ನೀಡುವ ಮೂಲ ಬಿಲ್ಲುಗಳನ್ನು ಮತ್ತು ಡಿಸ್ಚಾರ್ಜ್ ವರದಿಯನ್ನು ಪಡೆದು ಉಳಿದ ಮೊತ್ತವನ್ನು ರೋಗಿಯು ಪಾವತಿಸಿದ್ದರೆ, ಆ ಹಣವನ್ನು ರೋಗಿಯ ಬ್ಯಾಂಕ್ ಖಾತೆಯ ಹೆಸರಿಗೆ ನೀಡುವುದು.
12. ವೈದ್ಯಕೀಯ ಪರಿಹಾರ ನಿಧಿಯಿಂದ ಸಹಾಯ ಧನ ಕೋರಿ ಮನವಿ ಸಲ್ಲಿಸುವ ಅರ್ಜಿದಾರರುಗಳು ಮೊದಲು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಪ್ರಾಶಸ್ತ್ಯ ನೀಡುವುದು, ಒಂದು ವೇಳೆ ಸರ್ಕಾರಿ ಸ್ವಾಮ್ಯದ ಆಸ್ಪತ್ರೆಗಳಿಲ್ಲದಿದ್ದಲ್ಲಿ ಮೇಲ್ಕಂಡ ಮಾರ್ಗಸೂಚಿಗಳನ್ವಯ ಕ್ರಮವಹಿಸುವುದು.

...........3

13. ಪ್ರಸ್ತುತ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಕಡು ಬಡವರು, ಆರ್ಥಿಕವಾಗಿ ಹಿಂದುಳಿದವರು ಹಾಗೂ ಅಲ್ಪ ಸಂಖ್ಯಾತ ವರ್ಗದವರಿಗೆ ಅನುಕೂಲವಾಗುವಂತೆ ಚಿಕಿತ್ಸೆಯನ್ನು ಪಡೆಯಲು ಹಲವಾರು ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಪಾಲಿಕೆಯ ವತಿಯಿಂದ ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು ನೀಡಲಾಗುತ್ತಿರುತ್ತದೆ. ಈ ಹಿನ್ನಲೆಯಲ್ಲಿ, ಪೂಜ್ಯ ಮಹಾಪೌರರ ವೈದ್ಯಕೀಯ ಧನ ಸಹಾಯ ಕೋರಿ ಅರ್ಜಿ ಸಲ್ಲಿಸುವ ಫಲಾನುಭವಿಗಳು ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು ಪಡೆದಿದ್ದಲ್ಲಿ ಅಂತಹವರ ಅರ್ಜಿಗಳನ್ನು ತಿರಸ್ಕರಿಸಬಹುದು. ಇಲ್ಲದಿದ್ದಲ್ಲಿ, ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು ನೀಡದಿರುವ ಬಗ್ಗೆ ವಲಯ ಆರೋಗ್ಯ ವೈದ್ಯಾಧಿಕಾರಿಗಳು ದೃಢೀಕರಿಸಿ, ಫಲಾನುಭವಿಗಳಿಗೆ ವೈದ್ಯಕೀಯ ಧನ ಸಹಾಯ ನೀಡಲು ಮೇಲ್ಕಂಡ ಮಾರ್ಗಸೂಚಿಗಳನ್ವಯ ಕ್ರಮವಹಿಸುವುದು.

14. ಅರ್ಜಿದಾರರು ಸಲ್ಲಿಸುವ ಮನವಿಯನ್ನು ಪೂಜ್ಯ ಮಹಾಪೌರರ ಕಛೇರಿಯಿಂದ ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳ ಕಛೇರಿಗೆ ರವಾನಿಸಿ, ಆಯಾ ವಲಯದ ಆರೋಗ್ಯ ವೈದ್ಯಾಧಿಕಾರಿಗಳು ಅರ್ಜಿದಾರರ ಖಾಯಿಲೆ ಬಗ್ಗೆ ಆಸ್ಪತ್ರೆ / ವಾಸಸ್ಥಳಕ್ಕೆ ಭೇಟಿ ನೀಡಿ ಖಾಯಿಲೆ, ಖಾಯಿಲೆಯ ಸ್ವರೂಪ ಹಾಗೂ ನೈಜತೆಯ ಬಗ್ಗೆ ವರದಿ ಪಡೆದುಕೊಂಡು ಸರ್ಕಾರದ ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮಗಳನ್ವಯ ಪರಿಶೀಲಿಸಿ ಅರ್ಹ ಮೊತ್ತದ ಬಗ್ಗೆ ವರದಿಯೊಂದಿಗೆ ಪಾವತಿಸಬೇಕಾದ ಮೊತ್ತವನ್ನು ಟಿಪ್ಪಣಿ ಹಾಳೆಯಲ್ಲಿ ಸಮರ್ಪಕವಾಗಿ ದೃಢೀಕರಿಸಿ, ಆರೋಗ್ಯ ಅಧಿಕಾರಿಗಳ ಶಿಫಾರಸ್ಸಿನೊಂದಿಗೆ ಮುಖ್ಯ ಆರೋಗ್ಯ ಅಧಿಕಾರಿಗಳ ಮುಖೇನ ಸಂಬಂಧಪಟ್ಟವರಿಗೆ ಮಂಡಿಸುವುದು. ಇದೇ ರೀತಿ ಪಾಲಿಕೆ ಸದಸ್ಯರ ವಿವೇಚನಾಧೀನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನ ನೀಡುವ ಬಗ್ಗೆ ವಲಯ ಆಯುಕ್ತರುಗಳು ಕ್ರಮವಹಿಸುವುದು.

15. ವೈದ್ಯಕೀಯ ವೆಚ್ಚಗಳಿಗೆ ಪಾಲಿಕೆ ನಿಧಿಯಿಂದ ಅನುದಾನವನ್ನು ನೀಡುವಾಗ ಆಯಾ ಲೆಕ್ಕ ಶೀರ್ಷಿಕೆಗೆ ಮಾತ್ರ ಸೀಮಿತಗೊಳಿಸಬೇಕು ಹಾಗೂ ಈ ವೆಚ್ಚಗಳನ್ನು ಮಾಡಿರುವುದಕ್ಕೆ ಮೂಲ ಬಿಲ್ ಇತ್ಯಾದಿಯನ್ನು ಪಡೆದುಕೊಂಡು ಖಾತ್ರಿಪಡಿಸಿಕೊಂಡು ಸಹಾಯ ನೀಡುವುದು ಹಾಗೂ ಲೆಕ್ಕ ಪರಿಶೋಧನೆಗಾಗಿ ಸಂಬಂಧಪಟ್ಟ ಕಡತವನ್ನು ರಕ್ಷಿಸಿಡುವುದು.

16. ಒಂದು ಆರ್ಥಿಕ ವರ್ಷದಲ್ಲಿ ಒಂದು ಬಾರಿ ಮಾತ್ರ ಒಬ್ಬ ಅರ್ಜಿದಾರರಿಗೆ / ಅವರ ಕುಟುಂಬದವರಿಗೆ ವೈದ್ಯಕೀಯ ಧನ ಸಹಾಯವನ್ನು ಮಂಜೂರು ಮಾಡುವುದು.

17. ಈ ಪರಿಹಾರವನ್ನು ಆರ್ಥಿಕವಾಗಿ ದುರ್ಬಲವಾದ ವ್ಯಕ್ತಿ / ಕುಟುಂಬಗಳಿಗೆ ಮಾತ್ರ ನೀಡಬಹುದ್ದಾಗಿದ್ದು, ಈ ಬಗ್ಗೆ ಬಿ.ಪಿ.ಎಲ್. ಕಾರ್ಡ್‌ದಾರರಿಗೆ ಅಥವಾ ರೂ.20,000/-ಗಳ ವಾರ್ಷಿಕ ಆದಾಯದ ಒಳಗೆ ಇರುವವರಿಗೆ ಮಾತ್ರ ನೀಡುವುದು ಹಾಗೂ ಅವರ ಆದಾಯ ಪ್ರಮಾಣ ಪತ್ರವನ್ನು ಪಡೆದು ನೀಡುವುದು.

18. ಪ್ರಸ್ತಾಪಿತ ಅನುದಾನದಡಿಯ ವೈದ್ಯಕೀಯ ಧನ ಸಹಾಯದ ಕಡತಗಳನ್ನು ಒಂದು (1) ವಾರದ ಒಳಗಾಗಿ ವಿಲೇವಾರಿ ಮಾಡಲು ಸಂಬಂಧಪಟ್ಟವರು ಕ್ರಮವಹಿಸುವುದು.

ಮೇಲ್ಕಂಡ ಮಾರ್ಗಸೂಚಿಗಳನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 20-11-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಕೈ ಬಿಡಲು ಸೂಚಿಸಿದರು.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

........................4

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ."

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 05 (308) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ದಿನಾಂಕ:18-08-2012 ರಂದು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಪತ್ರ ಸಲ್ಲಿಸಿ, ಶ್ರೀ. ಸಿ.ಕೆ.ದಶವಂತ್, ನಿವೃತ್ತ ಉಪ ಆಯುಕ್ತರು (ಕಂದಾಯ) ಇವರನ್ನು ಮಹಾಪೌರರ ವಿಶೇಷ ಕರ್ತವ್ಯಾಧಿಕಾರಿಯನ್ನಾಗಿ ನಿಯೋಜನೆ ಮಾಡಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಕೋರಿರುವ ಸಂಬಂಧ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ:ನಅಇ 438 ಎಂಎನ್‌ಯು 2012, ದಿನಾಂಕ:10-09-2012 ರಲ್ಲಿ ಪೂಜ್ಯ ಮಹಾಪೌರರ ಕೋರಿಕೆಯನ್ನು ನಿಯಮಾನುಸಾರ ಪರಿಶೀಲಿಸಿ, ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ಕೋರಲಾಗಿರುತ್ತದೆ.

ಈ ಸಂಬಂಧ ಪಾಲಿಕೆ ವತಿಯಿಂದ ಸಂಖ್ಯೆ:ಬಿ12(3ಎ)ಸಿಪಿಆರ್/82/12-13 ರಂತೆ ಸರ್ಕಾರಕ್ಕೆ ಪತ್ರ ಬರೆದು, ಶ್ರೀ. ಸಿ.ಕೆ.ದಶವಂತ್, ನಿವೃತ್ತ ಉಪ ಆಯುಕ್ತರು (ಕಂದಾಯ) ರವರನ್ನು ಪೂಜ್ಯ ಮಹಾಪೌರರ ವಿಶೇಷ ಕರ್ತವ್ಯಾಧಿಕಾರಿಯನ್ನಾಗಿ ಸಂಚಿತ ವೇತನದ ಮೇಲೆ ನಿಯೋಜಿಸಬಹುದಾಗಿದೆ ಎಂದು ಸರ್ಕಾರಕ್ಕೆ ಅಭಿಪ್ರಾಯವನ್ನು ತಿಳಿಸಲಾಗಿರುತ್ತದೆ.

ಈ ಬಗ್ಗೆ ಸರ್ಕಾರವು ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ನಅಇ 438 ಎಂಎನ್‌ಯು 2012 ದಿನಾಂಕ:20-10-2012 ರ ಪತ್ರದಲ್ಲಿ ಶ್ರೀ. ಸಿ.ಕೆ. ದಶವಂತ್, ನಿವೃತ್ತ ಉಪ ಆಯುಕ್ತರು (ಕಂದಾಯ) ರವರನ್ನು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಗಳು 1977ರ 20 ರಂತೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು 313ರ ನಿಯಮಗಳಂತೆ ಆರ್ಥಿಕ ಸೌಲಭ್ಯಗಳನ್ನು ನಿಗಧಿಪಡಿಸಿ ಪಾವತಿಸುವ ಷರತ್ತುಗೊಳಪಡಿಸಿ, ನೇಮಿಸಿಕೊಳ್ಳಲು ಅನುಮೋದನೆ ನೀಡಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ನಅಇ 438 ಎಂಎನ್‌ಯು 2012 ದಿನಾಂಕ:20-10-2012ರ ಪತ್ರದಲ್ಲಿ ಅನುಮೋದನೆ ನೀಡಿರುವಂತೆ ಶ್ರೀ. ಸಿ.ಕೆ.ದಶವಂತ್, ನಿವೃತ್ತ ಉಪ ಆಯುಕ್ತರು (ಕಂದಾಯ) ರವರನ್ನು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಗಳು 1977ರ 20 ರಂತೆ ಕರ್ನಾಟಕ ಸೇವಾ ನಿಯಮಗಳು 313ರ ನಿಯಮಗಳಂತೆ ಆರ್ಥಿಕ ಸೌಲಭ್ಯಗಳನ್ನು ನಿಗಧಿಪಡಿಸಿ ಪಾವತಿಸುವ ಷರತ್ತುಗೊಳಪಡಿಸಿ, ಪಾಲಿಕೆಯಲ್ಲಿ ಪೂಜ್ಯ ಮಹಾಪೌರರ ವಿಶೇಷ ಕರ್ತವ್ಯಾಧಿಕಾರಿಯನ್ನಾಗಿ, ಒಂದು ವರ್ಷದ ಅವಧಿಗೆ ನಿಯೋಜಿಸಿಕೊಳ್ಳುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-11-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಪ್ರಸ್ತುತ ಇರುವ ಪೂಜ್ಯ ಮಹಾಪೌರರ ಅವಧಿಯವರೆವಿಗೆ ಅನ್ವಯವಾಗುವಂತೆ ಮಹಾಪೌರರ ವಿಶೇಷ ಕರ್ತವ್ಯಾಧಿಕಾರಿ ಹುದ್ದೆಗೆ ಮಾತ್ರ ನಿಯೋಜಿಸಿಕೊಳ್ಳುವ ಮಾರ್ಪಾಡಿನೊಂದಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.............................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಪ್ರಸ್ತುತ ಇರುವ ಪೂಜ್ಯ ಮಹಾಪೌರರ ಅವಧಿಯವರೆವಿಗೆ ಅನ್ವಯವಾಗುವಂತೆ ಮಹಾಪೌರರ ವಿಶೇಷ ಕರ್ತವ್ಯಾಧಿಕಾರಿ ಹುದ್ದೆಗೆ ಮಾತ್ರ ನಿಯೋಜಿಸಿಕೊಳ್ಳುವ ಮಾರ್ಪಾಡಿನೊಂದಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 06 (300) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯ ಎಲ್ಲಾ 8 ವಲಯಗಳಲ್ಲಿ ಉತ್ಪಾದನೆಯಾಗುವ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ, ವಿಲೇವಾರಿ ಮತ್ತು ಸಂಸ್ಕರಣಾ ಘಟಕಗಳನ್ನು ಸ್ಥಾಪನೆ ಮಾಡಲು ನಗರದ ಹೊರ ವಲಯದಲ್ಲಿ ಸರ್ಕಾರಿ ಜಾಗದ ಅವಶ್ಯಕತೆ ಇದ್ದು, ಅದರಲ್ಲಿ ಬಿಎಂಟಿಸಿ ಸಂಸ್ಥೆಯವರಿಗೆ ಸೇರಿದ ನಗರದ ಹೊರ ವಲಯದ ವಿವಿಧ ಪ್ರದೇಶಗಳಲ್ಲಿರುವ 12 ಜಮೀನುಗಳನ್ನು ಪಾಲಿಕೆಗೆ ಹಸ್ತಾಂತರಿಸಲು ಹಾಗೂ ಬಿಎಂಟಿಸಿ ಸಂಸ್ಥೆಗೆ ಪಾಲಿಕೆಯ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿರುವ 5 ಆಸ್ತಿಗಳನ್ನು ಬಿಎಂಟಿಸಿ ಸಂಸ್ಥೆಗೆ ನೀಡಲು ಕೋರಿ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ರವರ ಪತ್ರ ಸಂಖ್ಯೆ:ಬೆಂಮಸಾಸಂ/ಕೇಕ/ವಾಣಿಜ್ಯ/ಆಸ್ತಿ/51ಬಿ/2531/2012-13, ದಿನಾಂಕ:28-08-2012ರಲ್ಲಿ ಪತ್ರ ಬರೆದಿರುತ್ತಾರೆ ಹಾಗೂ ಈ ಎಲ್ಲಾ ಆಸ್ತಿಗಳ ಪ್ರಸ್ತುತ ಸರ್ಕಾರದ ಮಾರ್ಗಸೂಚಿ ದರಗಳನ್ನು ಲೆಕ್ಕಚಾರ ಮಾಡಿದ್ದು, ಮಂಡಳಿ ಸಭೆ ಹಾಗೂ ಸರ್ಕಾರದ ತೀರ್ಮಾನವನ್ನು ಕಾಯ್ದಿರಿಸಿ ತಾತ್ವಿಕವಾಗಿ ಒಪ್ಪಿರುವ ಅಂಶವನ್ನು ಸಹಾ ಪತ್ರದಲ್ಲಿ ವಿಶ್ಲೇಷಿಸಿರುತ್ತಾರೆ.

ಇದರಂತೆ ಬಿಎಂಟಿಸಿ ಸಂಸ್ಥೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲು ಉದ್ದೇಶಿಸಿರುವ ನಿವೇಶನಗಳು ಈ ಕೆಳಕಂಡಂತೆ ಇವೆ.

| Sl No | Taluk | Hobil | Place | Survey No | Extent (A-G) | Cost of the land as per Present Guidance Value |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | East | Bidarahalli | Kada Agrahara | 34 | 18-04 | 3,62,00,000 |
| 2 | East | Bidarahalli | Kannur | 50 | 50-00 | 17,50,00,000 |
| 3 | East | Bidarahalli | Mittaganahalli | 2 | 10-00 | 2,50,00,000 |
| 4 | East | Bidarahalli | Doddenahalli | 10 | 14-09 | 4,26,75,000 |
| 5 | South | Uttarahalli | Sunkadakatte | 37 | 15-00 | 4,50,00,000 |
| 6 | South | Tavarekere | Sulivara | 60 | 10-00 | 5,00,00,000 |
| 7 | South | Tavarekere | Yelachaguppe | 93 | 10-00 | 3,00,00,000, |
| 8 | North | Yeshwanthpura | Saneguravanahalli | 120 | 03-00 | 28,74,96,000 |
| 9 | North(A) | Jala | Chagalahatti | 102 | 10-00 | 4,00,00,000 |
| 10 | North(A) | Jala | Bagalur | 271 | 13-00 | 7,80,00,000 |
| 11 | Anekal | Anekal Kasaba | Indlawadi | 143 | 11-00 | 2,20,00,000 |
| 12 | Anekal | Jigani | Kallubalu | 90 | 60-37 | 24,37,00,000 |
| | | | Total 50% of the PGV | | 225-10 | 107,50,71,000 |
| | | | | | | 53,75,35,500 |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಾಧೀನದಲ್ಲಿರುವ ಈ ಕೆಳಕಂಡ ಆಸ್ತಿಗಳನ್ನು ಬಿಎಂಟಿಸಿ ಸಂಸ್ಥೆಯವರ ಅವಶ್ಯಕತೆಗೆ ಬೇಕೆಂದು ಬೇಡಿಕೆ ಸಲ್ಲಿಸಿರುತ್ತಾರೆ. ಇವುಗಳಲ್ಲಿ ಕಲಾಸಿಪಾಳ್ಯ ಬಸ್ ನಿಲ್ದಾಣದ ನಿವೇಶನವನ್ನು ಪಾಲಿಕೆಯು ಈಗಾಗಲೇ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಭೌತಿಕವಾಗಿ ಹಸ್ತಾಂತರಿಸಿದ್ದು, ಉಳಿದಂತಹ ಆಸ್ತಿಗಳ ಮಾಹಿತಿ ಈ ಕೆಳಕಂಡಂತೆ ಇರುತ್ತವೆ.

| Sl No | Taluk | Hobil | Place | Survey No | Extent (A-G) | Cost of the land as per Present Guidance Value |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | | | Kalasiplayam | - | 4-13 | 83,27,04,100 |
| 2 | North | Yeshwanthpur | Kamalanagar (Shankaranag Bus Station) | 46 | 0-30 | 1,50,00,000 |

| | | | | | | |
|---|---|---|---|---|---|---|
| 3 | East | K.R.Puram | K.R.Puram Old Market Yard | 48 | 2-00 | 3,20,00,000 |
| 4 | South | Begur | Bilekahalli | 154/1 | 2-32 | 8,40,00,000 |
| 5 | East | K.R.Puram | Hoodi | 29 & 30 | 5-00 | 15,00,00,000 |
| | | | Total 50% of the PGV | | 14-35 | 111,37,04,100 |
| | | | | | | 55,68,52,050 |

ಮಹಾನಗರ ಸಾರಿಗೆ ಸಂಸ್ಥೆಯವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪರಸ್ಪರ ಹಸ್ತಾಂತರಿಸಲು ಒಪ್ಪಿರುವ 12 ಸ್ಥಳಗಳ ಬಗ್ಗೆ ವಿಶೇಷ ಆಯುಕ್ತರು (ಯೋಜನೆ), ಜಂಟಿ ಆಯುಕ್ತರು (ಆಸ್ತಿಗಳು) ಹಾಗೂ ಪರಿಸರ ಕೋಶದ ಅಧಿಕಾರಿಗಳು ಪರಿಶೀಲನೆಯನ್ನು ನಡೆಸಿ ಬಿಎಂಟಿಸಿ ಸಂಸ್ಥೆಯವರು ನೀಡುವ 12 ಸ್ಥಳಗಳ ಪೈಕಿ ತಾವರೆಕೆರೆ ಹೋಬಳಿಯ ಸೂಲಿವಾರ ವ್ಯಾಪ್ತಿಯ ಸರ್ವೆ ನಂ:60 ರಲ್ಲಿರುವ 10-00 ಎಕರೆ ಜಮೀನು ಘನ ತ್ಯಾಜ್ಯ ವಸ್ತು ವಿಲೇವಾರಿ ಉದ್ದೇಶಕ್ಕೆ ಸೂಕ್ತವಾಗಿರುವುದಿಲ್ಲ. ಅಂದರೆ ಕಲ್ಲುಬಂಡೆಗಳಿಂದ ಕೂಡಿರುವ ಪ್ರದೇಶವಾಗಿರುವ ಕಾರಣ ಇದರ ಬದಲಾಗಿ ಮಂಡೂರು ಗ್ರಾಮದ ಬಳಿ ಇರುವ ಬಿದರಹಳ್ಳಿ ಹೋಬಳಿ, ಬೈಯಪ್ಪನಹಳ್ಳಿ ಸರ್ವೆ ನಂ:44, ವ್ಯಾಪ್ತಿಯ 03-10 ಎಕರೆ ಜಮೀನನ್ನು ಹಸ್ತಾಂತರಿಸಲು ಕೋರಲಾದ ಮೇರೆಗೆ ಬಿಎಂಟಿಸಿ ಸಂಸ್ಥೆಯವರು ಸದರಿ ಜಮೀನನ್ನು ಪಾಲಿಕೆಗೆ ನೀಡಲು ಸಹಾ ಒಪ್ಪಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಆಸ್ತಿಗಳ ವಿಲೇವಾರಿ ಬಗ್ಗೆ ಪ್ರಸ್ತುತ 2011-12ರ ಸರ್ಕಾರದ ಮಾರ್ಗಸೂಚಿ ದರಗಳನ್ನು ಲೆಕ್ಕಾಚಾರ ಮಾಡಿ ನಮೂದಿಸಿರುವಂತೆ ಬಿಎಂಟಿಸಿ ಸಂಸ್ಥೆಗೆ ಸಂಬಂಧಪಟ್ಟ 12 ಆಸ್ತಿಗಳ ಒಟ್ಟು ಮೌಲ್ಯ ರೂ.107,50,71,000/-ಗಳೆಂದು ಪಾಲಿಕೆಯ ಸ್ವಾಧೀನದಲ್ಲಿರುವ 5 ಆಸ್ತಿಗಳ ಒಟ್ಟು ಮೌಲ್ಯ ರೂ.111,37,04,100/- ಗಳೆಂದು ದಾಖಲಿಸಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ದಿನಾಂಕ:02-06-2003ರ ಕ್ರಮ ಸಂಖ್ಯೆ:(iii)(E) ರಲ್ಲಿ ನೀಡಿರುವ ಮಂಜೂರಾತಿಯಂತೆ ಮೇಲ್ಕಂಡ ದರಗಳಲ್ಲಿ ಒಟ್ಟು ಶೇ 50% ದರವನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ರಿಯಾಯಿತಿ ದರವನ್ನು ನೀಡಬಹುದಾಗಿರುವ ಅಂಶವನ್ನು ಸಹ ಪ್ರಸ್ತಾಪಿಸಿರುತ್ತಾರೆ. ಅದರಂತೆ ಬಿಎಂಟಿಸಿ ಸಂಸ್ಥೆಯವರ 12 ಆಸ್ತಿಗಳ ಒಟ್ಟು ಮೌಲ್ಯ ರೂ.53,75,35,500/-ಗಳಾಗಿದ್ದು, ಪಾಲಿಕೆಯ 5 ಆಸ್ತಿಗಳ ಒಟ್ಟು ಮೌಲ್ಯ ರೂ.55,68,52,050/-ಗಳು ಲೆಕ್ಕಚಾರ ಮಾಡಿರುತ್ತಾರೆ.

ಬಿಎಂಟಿಸಿ ಸಂಸ್ಥೆಯಿಂದ ಈಗಾಗಲೇ ಸಿದ್ಧಪಡಿಸಿ ಕಳುಹಿಸಿರುವ 12 ಆಸ್ತಿಗಳ ಪಟ್ಟಿಯಲ್ಲಿ ಕ್ರಮ ಸಂಖ್ಯೆ:6ರ ತಾವರೆಕೆರೆ ಹೋಬಳಿ, ಸೂಲಿವಾರ ಗ್ರಾಮದ ಸರ್ವೆ ನಂ:60ರ ಆಸ್ತಿಯ ವಿಸ್ತೀರ್ಣ 10-00 ಎಕರೆ ಮಾರ್ಗಸೂಚಿ ದರ ರೂ.5 ಕೋಟಿ ಇದರ ಬದಲಿಗೆ ಬಿದರಹಳ್ಳಿ ಹೋಬಳಿ, ಬೈಯಪ್ಪನಹಳ್ಳಿ ಸರ್ವೆ ನಂ:44ರ ಜಮೀನಿನ ವಿಸ್ತೀರ್ಣ 03-10 ಎಕರೆ ಪ್ರದೇಶದ ಮಾರ್ಗಸೂಚಿ ಬೆಲೆ ರೂ.97,50,000/-ಗಳನ್ನು ಸೇರ್ಪಡೆ ಮಾಡಬೇಕಾಗಿರುತ್ತದೆ. ಇದರಂತೆ ಈ ಆಸ್ತಿಗಳನ್ನು ಪಾಲಿಕೆಯ ವ್ಯಾಪ್ತಿಯ ತ್ಯಾಜ್ಯ ವಸ್ತುಗಳ ನಿರ್ವಹಣೆ, ವಿಲೇವಾರಿ ಮತ್ತು ಸಂಸ್ಕರಣಾ ಘಟಕಗಳಿಗೆ ಉಪಯೋಗಿಸಬಹುದಾಗಿರುತ್ತದೆ. ಇದರಂತೆ:-

| Sl No | Taluk | Hobil | Place | Survey No | Extent (A-G) | Cost of the land as per Present Guidance Value |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | East | Bidarahalli | Kada Agrahara | 34 | 18-04 | 3,62,00,000 |
| 2 | East | Bidarahalli | Kannur | 50 | 50-00 | 17,50,00,000 |
| 3 | East | Bidarahalli | Mittaganahalli | 2 | 10-00 | 2,50,00,000 |
| 4 | East | Bidarahalli | Doddenahalli | 10 | 14-09 | 4,26,75,000 |
| 5 | South | Uttarahalli | Sunkadakatte | 37 | 15-00 | 4,50,00,000 |
| 6 | East | Bidarahalli | Bayapanahalli | 44 | 03-10 | 97,50,000 |
| 7 | South | Tavarekere | Yelachaguppe | 93 | 10-00 | 3,00,00,000 |
| 8 | North | Yeshwanthpura | Saneguravanahalli | 120 | 03-00 | 28,74,96,000 |

| | | | | | | |
|---|---|---|---|---|---|---|
| 9 | North(A) | Jala | Chagalahatti | 102 | 10-00 | 4,00,00,000 |
| 10 | North(A) | Jala | Bagalur | 271 | 13-00 | 7,80,00,000 |
| 11 | Anekal | Anekal Kasaba | Indlawadi | 143 | 11-00 | 2,20,00,000 |
| 12 | Anekal | Jigani | Kallubalu | 90 | 60-37 | 24,37,00,000 |
| | | | Total 50% of the PGV | | 218-20 | 103,48,21,000 |
| | | | | | | 51,74,10,500 |

ಪಾಲಿಕೆಯ 5 ಆಸ್ತಿಗಳ ಒಟ್ಟು ವಿಸ್ತೀರ್ಣ 14-35 ಎಕರೆಗಳಾಗಿದ್ದು, ಈ ಆಸ್ತಿಗಳ ಮಾರ್ಗಸೂಚಿ ದರ ರೂ.55,68,52,050/-ಗಳಾಗಲಿದ್ದು, ಈ ಜಮೀನನ್ನು ವ್ಯವಸ್ಥಾಪಕ ನಿರ್ದೇಶಕರು, ಬಿಎಂಟಿಸಿ ಸಂಸ್ಥೆಯವರಿಗೆ ಹಸ್ತಾಂತರ ಮಾಡಬೇಕಾಗಿರುತ್ತದೆ. ಇದೇ ರೀತಿ ಬಿಎಂಟಿಸಿ ಸಂಸ್ಥೆಯ 12 ಆಸ್ತಿಗಳ ಒಟ್ಟು ವಿಸ್ತೀರ್ಣ 218-20 ಎಕರೆಗಳಾಗಿದ್ದು, ಈ ಆಸ್ತಿಗಳ ಮಾರ್ಗಸೂಚಿ ದರ ರೂ.51,74,10,500/-ಗಳಾಗಲಿದ್ದು, ಈ ಜಮೀನನ್ನು ಬಿಎಂಟಿಸಿ ಸಂಸ್ಥೆಯಿಂದ ಪಾಲಿಕೆಗೆ ಪಡೆಯಬೇಕಾಗಿರುತ್ತದೆ. ಈ ಆಸ್ತಿಗಳ ಮೌಲ್ಯದಲ್ಲಿ ಹೆಚ್ಚುವರಿಯಾಗಲಿರುವ ರೂ.3,94,41,550/- ಮೊತ್ತವನ್ನು ವ್ಯವಸ್ಥಾಪಕ ನಿರ್ದೇಶಕರು, ಬಿಎಂಟಿಸಿ ಸಂಸ್ಥೆಯವರಿಂದ ಪಾಲಿಕೆಗೆ ಪಡೆಯಬೇಕಾಗಿರುತ್ತದೆ. ಒಟ್ಟಾರೆ ಈ ಆಸ್ತಿಗಳನ್ನು ಎರಡು ಸಂಸ್ಥೆಗಳು ಪರಸ್ಪರ ಹಸ್ತಾಂತರಿಸಲು ಮತ್ತು ಪಡೆಯಲು ಒಮ್ಮತದಿಂದ ಸಮ್ಮತಿಸಿರುವುದರಿಂದ ಈ ಪ್ರಸ್ತಾವನೆಯನ್ನು ಪಾಲಿಕೆಯ ಸ್ಥಾಯಿ ಸಮಿತಿಗಳ ಮುಂದೆ ಮಂಡಿಸಿ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:03-10-2012 ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-11-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 29-11-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:29-11-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:29-11-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 07 (304) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಜಯನಗರ ಉಪ ವಿಭಾಗ ವಾರ್ಡ್ ಸಂಖ್ಯೆ:169 ಬೈರಸಂದ್ರ ವ್ಯಾಪ್ತಿಯ ಜಯನಗರ 3ನೇ ಬಡಾವಣೆಯಲ್ಲಿ ಪಾಲಿಕೆಯ ಈಜುಕೊಳ ಮತ್ತು ಅದಕ್ಕೆ ಹೊಂದಿಕೊಂಡಿರುವ ಆವರಣವನ್ನು 35 ವರ್ಷಗಳ ಅವಧಿಗೆ ದಿನಾಂಕ:07-12-2004 ರಿಂದ ವಾರ್ಷಿಕ ರೂ.60,000/- ಗಳಂತೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದ್ದು ಹಾಗೂ ಸದರಿ ಪ್ರಸ್ತಾವನೆಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 69 ಎಂಎಸ್‌ವೈ 2002 ಬೆಂಗಳೂರು, ದಿನಾಂಕ:26-06-2003ರ ಆದೇಶದನ್ವಯ ಮೆ॥ ಪಿ.ಎಂ.ಸ್ವಿಮ್ಮಿಂಗ್ ಸೆಂಟರ್ ರವರಿಗೆ ಈಜುಕೊಳ ನಡೆಸಲು ಮತ್ತು ವ್ಯವಸ್ಥಿತವಾಗಿ ನಿರ್ವಹಣೆ ಮಾಡಲು ಹಾಗೂ ಗುತ್ತಿಗೆ ಕರಾರಿನಲ್ಲಿ ವಿಧಿಸಿರುವ ನಿಬಂಧನೆಗಳಿಗೆ ಒಳಪಟ್ಟಂತೆ ಹಸ್ತಾಂತರಿಸಲಾಗಿದ್ದು, ಗುತ್ತಿಗೆ ಕರಾರಿನಲ್ಲಿ ಪ್ರಮುಖ ಅಂಶವಾದ ನಿಬಂಧನೆ ಕ್ರಮ ಸಂಖ್ಯೆ.15 ರಲ್ಲಿ **The lessee agrees to implement the infrastructure proposed in tender stage-by-stage and the proposed infrastructure as found in various documents annexed to this agreement and from the date of agreement and will be completed within period of 10 years from the date of agreement** ಎಂಬ ಷರತ್ತಿಗೊಳಪಟ್ಟಿರುತ್ತದೆ.

ಗುತ್ತಿಗೆ ಕರಾರಿನಂತೆ ಮೆ॥ ಮೆ॥ ಪಿ.ಎಂ.ಸ್ವಿಮ್ಮಿಂಗ್ ಸೆಂಟರ್ ರವರು ದಿನಾಂಕ::21-10-2009 ರಂದು ಸದರಿ ಈಜುಕೊಳವನ್ನು ಅಭಿವೃದ್ಧಿಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ. ರವರು ದಿನಾಂಕ:16-07-2011 ರಂದು ಸದರಿ ಈಜುಕೊಳವನ್ನು ಅಭಿವೃದ್ಧಿ ಪಡಿಸಲು ಸಲ್ಲಿಸಿರುವ ಪ್ರಸ್ತಾವನೆಗೆ ಒಪ್ಪಿಗೆ ನೀಡಿರುತ್ತಾರೆ. ಮುಂದುವರೆದಂತೆ, ದಿನಾಂಕ: 03-11-2011 ರಂದು ಮುಖ್ಯ ಅಭಿಯಂತರರು (ದಕ್ಷಿಣ) ರವರು ಈಜುಕೊಳವನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆಗೆ ಸಲ್ಲಿಸಿದ ನಕ್ಷೆಗಳನ್ನು ಕಟ್ಟಡದ ಬೈ-ಲಾಗಳಿಗೆ ಅನುಗುಣವಾಗಿ ಸಲ್ಲಿಸಲಾಗಿರುವ ಬಗ್ಗೆ ವಿವರವಾದ ವರದಿಯನ್ನು ಸಹಾಯಕ ನಿರ್ದೇಶಕರು (ನಗರ ಯೋಜನೆ-ದಕ್ಷಿಣ) ರವರಿಗೆ ದಿನಾಂಕ:03-11-2011 ರಂದು ಸೂಚಿಸಿರುವ ಮೇರೆಗೆ ಸಹಾಯಕ ನಿರ್ದೇಶಕರು (ನಗರ ಯೋಜನೆ-ದಕ್ಷಿಣ) ರವರು ಮೆ॥ ಪಿ.ಎಂ.ಸ್ವಿಮ್ಮಿಂಗ್ ಸೆಂಟರ್ ರವರು ಸಲ್ಲಿಸಿರುವ ಕಟ್ಟಡ ನಕ್ಷೆಯ ಪ್ರಸ್ತಾವನೆಯನ್ನು ಪರಿಶೀಲಿಸಿ, ಪ್ರಸ್ತಾಪಿಸಿರುವ ಕಟ್ಟಡ ನಕ್ಷೆಯಲ್ಲಿ ಉದ್ದೇಶಿಸಿರುವ ಕಟ್ಟಡ ಪ್ರದೇಶದ ಅಳತೆ, ವಿಸ್ತೀರ್ಣ ಮತ್ತು ಚಕ್ಕುಬಂದಿ, ನಡುಜಾಗ, ಆವರಿಸಿರುವಿಕೆ, ವಿಸ್ತೀರ್ಣದ ಅನುಪಾತ, ಹಾಲಿ ಇರುವ ಕಟ್ಟಡ, ಹೊಸದಾಗಿ ಉದ್ದೇಶಿಸಿರುವ ಕಟ್ಟಡ, ಮಳೆನೀರು ಸಂಗ್ರಹಣೆಯ ವಿವರ, ಕಾಂಪೌಂಡ್‌ನ ಎತ್ತರ, ವಾಹನ ನಿಲುಗಡೆ ಪ್ರದೇಶ, ವಾಹನದ ಆಗಮನ, ಸರ್ಫೇಸ್ ವಾಹನ ನಿಲ್ದಾಣ ಮತ್ತು ಇತರೆ ವಿವರಗಳನ್ನು ಒಳಗೊಂಡಂತೆ ವಲಯ ನಿಯಮಾವಳಿ-2007 ಮತ್ತು ಆರ್‌ಎಂಪಿ 2015 ರ ರೀತ್ಯಾ ವಲಯ ನಿಬಂಧನೆಗಳಿಗನುಸಾರವಾಗಿ ಇಲ್ಲದಿರುವುದರಿಂದ ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ನಕ್ಷೆಗಳಲ್ಲಿ ಮೇಲಿನ ಅಂಶಗಳನ್ನು ಸರಿಪಡಿಸಿ ಮಾರ್ಪಾಡು ನಕ್ಷೆ ಸಲ್ಲಿಸಿದ್ದಲ್ಲಿ ಅನುಮೋದನೆಗೆ ಪರಿಗಣಿಸಬಹುದಾಗಿದೆ ಎಂಬ ಹಿಂಬರಹವನ್ನು ನೀಡಲಾಗಿರುತ್ತದೆ.

ಮುಂದುವರೆದು ಸಹಾಯಕ ನಿರ್ದೇಶಕರು (ನಗರ ಯೋಜನೆ-ದಕ್ಷಿಣ) ರವರ ಹಿಂಬರಹಕ್ಕೆ ಮೆ॥ ಪಿ.ಎಂ.ಸ್ವಿಮ್ಮಿಂಗ್ ಸೆಂಟರ್ ಸಂಸ್ಥೆರವರು ಮಾರ್ಪಾಡು ನಕ್ಷೆಯನ್ನು ಮರು ಸಲ್ಲಿಸುವ ಬದಲು, ಈಗಾಗಲೇ ಸಲ್ಲಿಸಿರುವ ನಕ್ಷೆಗಳನ್ನು ಕಟ್ಟಡದ ಬೈಲಾ ಮತ್ತು ವಲಯ ನಿಬಂಧನೆಗಳಂತೆ ತಿದ್ದುಪಡಿ ಮಾಡಿ, ಅನುಮೋದಿಸಿ ಕೊಟ್ಟಲ್ಲಿ ಅದರಂತೆ ಈಜುಕೊಳವನ್ನು ಮೇಲ್ದರ್ಜೆಗೇರಿಸಿ ಅಭಿವೃದ್ಧಿಪಡಿಸುವುದಾಗಿ ಪತ್ರ ಮುಖೇನ ತಿಳಿಸಿರುತ್ತಾರೆ.

..........................2

ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಇತ್ತೀಚೆಗೆ ಉದ್ಭವವಾಗಿರುವ ಘನತ್ಯಾಜ್ಯ ವಿಲೇವಾರಿಯಲ್ಲಿನ ಸಮಸ್ಯೆಯನ್ನು ಸಮರ್ಪಕವಾಗಿ ನಿರ್ವಹಿಸಲು ಪ್ರತಿ ವಾರ್ಡ್‌ಗಳಲ್ಲಿಯೂ ಘನತ್ಯಾಜ್ಯ ವಿಂಗಡಣೆ ಘಟಕವನ್ನು ಸ್ಥಾಪಿಸುವುದು ಅವಶ್ಯಕವಾಗಿದೆ. ಈ ಸಂಬಂಧವಾಗಿ ಶ್ರೀ. ಎನ್.ನಾಗರಾಜ್, ಆಡಳಿತ ಪಕ್ಷದ ನಾಯಕರು ಹಾಗೂ ನಗರ ಪಾಲಿಕೆ ಸದಸ್ಯರು ರವರು ಪತ್ರ ಮುಖೇನ, "ಬೈರಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಮೆ॥ ಪಿ.ಎಂ.ಸ್ವಿಮ್ಮಿಂಗ್ ಸೆಂಟರ್ ಸಂಸ್ಥೆರವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ 2004-05ನೇ ಸಾಲಿನಲ್ಲಿ 35 ವರ್ಷಗಳಿಗೆ ಈಜುಕೊಳ ನಿರ್ವಹಣೆಯನ್ನು ಗುತ್ತಿಗೆ ಆಧಾರದ ಮೇಲೆ ನೀಡಲು ದಿನಾಂಕ:13-02-2012 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ಹಾಗೂ ದಿನಾಂಕ:27-02-2012 ರಂದು ನಡೆದ ಪಾಲಿಕೆ ಸಭೆಯ ವಿಷಯದ ಸಂಖ್ಯೆ:392 ರಲ್ಲಿ ತೀರ್ಮಾನಿಸಲಾಗಿದ್ದು, ದಿನಾಂಕ:07-12-2004 ರಲ್ಲಿ ನೀಡಲಾಗಿರುವ ಪ್ರದೇಶದ ಈಶಾನ್ಯ ಭಾಗದಲ್ಲಿ ಖಾಲಿ ಇರುವ ಪ್ರದೇಶದಲ್ಲಿ ಸುಮಾರು 750 ಚ.ಮೀ. ಜಾಗದಲ್ಲಿ ಘನತ್ಯಾಜ್ಯ ಸಂಗ್ರಹಣ ಘಟಕ ಮತ್ತು ಒಣ ಕಸ ವಿಂಗಡಣಾ ಘಟಕದ ಹಾಗೂ ವಿವಿದ್ಧೋದ್ದೇಶ ಘಟಕದ ಕೇಂದ್ರ ನಿರ್ಮಿಸುವ ಸಲುವಾಗಿ ಮೆ॥ ಪಿ.ಎಂ.ಸ್ವಿಮ್ಮಿಂಗ್ ಸೆಂಟರ್ ಸಂಸ್ಥೆರವರಿಗೆ ನೀಡಿರುವ ಗುತ್ತಿಗೆ ಕರಾರನ್ನು ಹಿಂದಕ್ಕೆ ಪಡೆಯುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30-11-2012 ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನ್ಯಾಯಾಲಯವು ಈ ಪ್ರಕರಣಕ್ಕೆ ಯಥಾ ಸ್ಥಿತಿ ಕಾಪಾಡುವಂತೆ ತಡೆಯಾಜ್ಞೆ ನೀಡಿರುವುದರಿಂದ, ತಡೆಯಾಜ್ಞೆ ತೆರವುಗೊಳಿಸಲು ಕಾನೂನು ಇಲಾಖೆಯು ಕೂಡಲೇ ಕ್ರಮ ಕೈಗೊಂಡು, ತಡೆಯಾಜ್ಞೆ ತೆರವಾದ ನಂತರ ಪ್ರಸ್ತಾಪಿತ ಜಾಗವನ್ನು ಘನತ್ಯಾಜ್ಯ ವಿಂಗಡಣಾ ಘಟಕ ಸ್ಥಾಪಿಸಲು ಹಾಗೂ ವಿವಿದೋದ್ದೇಶ ಕಟ್ಟಡಗಳ ನಿರ್ಮಾಣಕ್ಕಾಗಿ ನಗರ ಪಾಲಿಕೆ ವಶಕ್ಕೆ ಪಡೆದುಕೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನ್ಯಾಯಾಲಯವು ಈ ಪ್ರಕರಣಕ್ಕೆ ಯಥಾ ಸ್ಥಿತಿ ಕಾಪಾಡುವಂತೆ ತಡೆಯಾಜ್ಞೆ ನೀಡಿರುವುದರಿಂದ, ತಡೆಯಾಜ್ಞೆ ತೆರವುಗೊಳಿಸಲು ಕಾನೂನು ಇಲಾಖೆಯು ಕೂಡಲೇ ಕ್ರಮ ಕೈಗೊಂಡು, ತಡೆಯಾಜ್ಞೆ ತೆರವಾದ ನಂತರ ಪ್ರಸ್ತಾಪಿತ ಜಾಗವನ್ನು ಘನತ್ಯಾಜ್ಯ ವಿಂಗಡಣಾ ಘಟಕ ಸ್ಥಾಪಿಸಲು ಹಾಗೂ ವಿವಿದೋದ್ದೇಶ ಕಟ್ಟಡಗಳ ನಿರ್ಮಾಣಕ್ಕಾಗಿ ನಗರ ಪಾಲಿಕೆ ವಶಕ್ಕೆ ಪಡೆದುಕೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 09 (310) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:6, ಮಲ್ಲೇಶ್ವರಂ, 1ನೇ ಮುಖ್ಯರಸ್ತೆಯ ಸ್ವತ್ತಿನ ಸಂಖ್ಯೆ:44ರ ಪಕ್ಕದಲ್ಲಿರುವ ಸ್ವತ್ತಿನ ವಿಸ್ತೀರ್ಣವು 30x13+27/2 ಅಡಿಗಳ ಸ್ವತ್ತನ್ನು ಶ್ರೀ.ಕೆ.ರಾಮರಾಜ್ ರವರು 1968 ರಲ್ಲಿ ಕ್ರಯಕ್ಕೆ ಪಡೆದಿದ್ದು, ಸದರಿಯವರು ನಿಧನ ಹೊಂದಿದ್ದು, ಅವರ ಅವಲಂಬಿತದಾರರು ಸದರಿ ಸ್ವತ್ತಿಗೆ ಕ್ರಯಪತ್ರ ನೀಡಲು ಕೋರಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ದಿನಾಂಕ:26-10-2010ರ ಸಭೆಯಲ್ಲಿ ಅರ್ಜಿದಾರರು ಕೋರಿರುವ ಜಾಗವನ್ನು ಮಾರುಕಟ್ಟೆ ದರವನ್ನು ವಸೂಲಿ ಮಾಡಿಕೊಂಡು ಕ್ರಯಪತ್ರ ನೀಡಲು ನಿರ್ಧರಿಸಿರುತ್ತದೆ. ಇದಕ್ಕೆ ಪೂರಕವಾಗಿ ದಿನಾಂಕ:27-12-2011 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ: ನಅಇ 143 ಎಂಎನ್‌ಜಿ 2012, ದಿನಾಂಕ:23-05-2012ರ ಪತ್ರದಲ್ಲಿ ಶ್ರೀ. ನಾಗರಾಜ್ ರವರಿಗೆ ಕ್ರಯಕ್ಕೆ ನೀಡಬೇಕಾದಲ್ಲಿ ಸರ್ಕಾರದ ಈಗಿನ ದರವನ್ನು ನಿಗಧಿಪಡಿಸಿ, ಪ್ರಸ್ತುತ ಅಸ್ತಿತ್ವದಲ್ಲಿರುವ ಪಾಲಿಕೆಯ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆದು ನಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿವಿಸಿ-19/2010-11, ದಿನಾಂಕ:21-09-2011 ರಂತೆ ಸ್ಥಿರಾಸ್ತಿಗಳ ಮತ್ತು ಕಟ್ಟಡದ ಅಂದಾಜು ಮಾರುಕಟ್ಟೆ ದರದಂತೆ ಪ್ರಸ್ತುತ ಪ್ರದೇಶದಲ್ಲಿ ಚದರ ಅಡಿ ಒಂದಕ್ಕೆ ರೂ.4000/- ಇದ್ದು, ಇದಕ್ಕೆ ಶೇ.20%ರಷ್ಟು (ವಾಣಿಜ್ಯ ಉದ್ದೇಶಕ್ಕೆ) ಹೆಚ್ಚಿಸಿದಾಗ ಒಟ್ಟು ಮೊತ್ತ ಚದರ ಅಡಿ 1ಕ್ಕೆ ರೂ.4000+800=4800/- ಆಗುತ್ತದೆ. ಇದರಂತೆ ಸ್ವತ್ತಿನ ಮೌಲ್ಯ 30x13+27/2=600 ಚದರ ಅಡಿ ರೂ.28,80,000/- ಆಗುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ. ನಾಗರಾಜ್ ರವರಿಗೆ ಕ್ರಯಕ್ಕೆ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:14-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಿ ಶ್ರೀ. ನಾಗರಾಜ್ ರವರಿಂದ ಬರಬೇಕಾದ ಬಾಕಿ ಕಂದಾಯವನ್ನು ಪಾವತಿಸಿಕೊಂಡ ನಂತರ ಸದರಿಯವರಿಗೆ ಸ್ವತ್ತನ್ನು ಕ್ರಯಕ್ಕೆ ನೀಡುವ ಪ್ರಸ್ತಾವನೆಯನ್ನು ಒಪ್ಪುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-09-2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 10 (311) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಸಂತನಗರ ವಾರ್ಡ್-78/93, 4ನೇ ಅಡ್ಡರಸ್ತೆ, ಶಿವಾಜಿನಗರ ಪಾಲಿಕೆ ವಸತಿ ಗೃಹದ ಸಂಖ್ಯೆ:32/1 ಅನ್ನು ಮಾಜಿ ನಗರಸಭಾ ಸದಸ್ಯರಾದ ದಿ॥ ಕೆ.ಚೋಳನ್ ರವರ ಪತ್ನಿ ಶ್ರೀಮತಿ.ರುಕ್ಮಿಣಿ ರವರು ಕ್ರಯಕ್ಕೆ ನೀಡುವ ಬಗ್ಗೆ ಮನವಿಯಲ್ಲಿ ಕೋರಿರುತ್ತಾರೆ. ಇದೇ ರೀತಿ ವಾರ್ಡ್ ಸಂಖ್ಯೆ: 81 ರಲ್ಲಿ ಇದ್ದಂತಹ ವಸತಿ ಗೃಹಗಳನ್ನು ಹಾಲಿ ವಾಸಿಸುತ್ತಿದ್ದವರಿಗೆ ಮಾರಾಟ ಮಾಡುವ ನಿರ್ಣಯ ಕೈಗೊಂಡಿದೆ ಎಂದು, ಅದೇ ರೀತಿ ತನಗೂ ಸಹ ಈ ವಸತಿ ಗೃಹ ಮಾರಾಟ ಮಾಡಲು ಕೋರಿ ಅನೇಕ ಮನವಿಗಳನ್ನು ಹಿಂದಿನಿಂದಲೂ ನೀಡುತ್ತಾ ಬಂದಿರುತ್ತಾರೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಹಿಂದೆ ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಈ ವಿಷಯ ಚರ್ಚಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸರ್ಕಾರವು ತನ್ನ ಆದೇಶದ ಸಂಖ್ಯೆ: ನಅಇ/279/ಎಂಎನ್‌ಜಿ/03, ದಿನಾಂಕ:25-10-2005 ರಂತೆ ಮಹಾನಗರ ಪಾಲಿಕೆಯ ದಿನಾಂಕ: 27-07-2003ರ ವಿಷಯದ ಸಂಖ್ಯೆ 10(284)ರ ನಿರ್ಣಯವನ್ನು ರದ್ದುಪಡಿಸಿದೆ. ಈಗ ಹಾಲಿ ಕೆಳಕಂಡ ಮಹಾನಗರ ಪಾಲಿಕೆ ಸದಸ್ಯರುಗಳು/ಸಚಿವರುಗಳು ಇವರಿಗೆ ವಸತಿ ಗೃಹ ಕ್ರಯಕ್ಕೆ ನೀಡುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ.

1. ಶ್ರೀ. ಎಸ್.ಕೆ.ನಟರಾಜ್, ಹಿಂದಿನ ಮಹಾಪೌರರು
2. ಶ್ರೀ. ಎಂ.ಕೆ.ಗುಣಶೇಖರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 63, ಜಯಮಹಲ್
3. ಶ್ರೀ. ಉದಯಕುಮಾರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 90, ಹಲಸೂರು.
4. ಶ್ರೀ.ಆರ್.ಸಂಪತ್ ರಾಜ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 47, ದೇವರಜೀವನ ಹಳ್ಳಿ
5. ಶ್ರೀ. ಕಟ್ಟಾಸುಬ್ರಮಣ್ಯ ನಾಯ್ಡು, ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಸಚಿವರು.
6. ಶ್ರೀ. ಲಕ್ಷ್ಮೀನಾರಾಯಣ, ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳು.

ಉಪ ಆಯುಕ್ತರು (ಆಸ್ತಿಗಳು) ರವರು ದಿನಾಂಕ:27-12-2011 ರಂದು ಒಂದು ಆಂತರಿಕ ಕಛೇರಿ ಟಿಪ್ಪಣಿ ಕಳುಹಿಸಿ ಶ್ರೀ. ಎಂ. ಉದಯಶಂಕರ್, ವಿರೋಧ ಪಕ್ಷದ ನಾಯಕರು ರವರ ಪತ್ರವನ್ನು ಆಧರಿಸಿ ಇವರಿಗೆ ಅನುಕಂಪದ ಆಧಾರದ ಮೇಲೆ ಕ್ರಯಕ್ಕೆ ಮಂಜೂರು ಮಾಡುವ ಸಂಬಂಧ ಪಾಲಿಕೆ ಸಭೆಯ ಮುಂದೆ ಪ್ರಸ್ತಾವನೆಯನ್ನು ಮರು ಮಂಡಿಸಲು ಕೋರಿರುತ್ತಾರೆ. ಈಗ ಈ ವಸತಿ ಗೃಹವನ್ನು ಕ್ರಯಕ್ಕೆ ನೀಡುವ ಬಗ್ಗೆ ಪರಿಶೀಲಿಸಿ, ಮತ್ತೊಮ್ಮೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು, ಸಮಿತಿಯು ಪ್ರಸ್ತಾವನೆ ಪರಿಶೀಲಿಸಿ ಮಾಜಿ ನಗರಸಭಾ ಸದಸ್ಯರಾದ ದಿ॥ ಕೆ.ಚೋಳನ್ ರವರ ಪತ್ನಿ ಶ್ರೀಮತಿ. ರುಕ್ಮಿಣಿ ರವರಿಗೆ ಸದರಿ ವಸತಿ ಗೃಹವನ್ನು ಕ್ರಯಕ್ಕೆ ನೀಡಲು ಸಮಿತಿಯು ತೀರ್ಮಾನಿಸಿ ಮುಂದಿನ ನಿರ್ಣಯಕ್ಕೆ ಪಾಲಿಕೆ ಸಭೆಯ ಮುಂದೆ ಮಂಡಿಸಲು ತೀಮಾನಿಸಿರುತ್ತದೆ. ದಿನಾಂಕ:29-05-2012 ರಂದು ಪಾಲಿಕೆ ಸಭೆಯಲ್ಲಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಿರುತ್ತದೆ. ಆದರೆ, ವಸತಿ ಗೃಹವನ್ನು ಕ್ರಯಕ್ಕೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವಿರುವುದಿಲ್ಲ. ಈ ಹಿನ್ನಲೆಯಲ್ಲಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ23-08-2012 ರ ಟಿಪ್ಪಣಿ

..........................2

ಹಾಗೂ ಸದರಿ ಟಿಪ್ಪಣಿಯಲ್ಲಿನ ವಿಷಯದ ಬಗ್ಗೆ ಚರ್ಚಿಸಲಾಯಿತು. ಅರ್ಜಿದಾರರು ಹಿಂದಿನಿಂದಲೂ ಅನೇಕ ಮನವಿಗಳನ್ನು ನೀಡುತ್ತಾ ಬಂದಿದ್ದು, ವಾರ್ಡ್ 81 ರಲ್ಲಿ ಇದ್ದಂತಹ ವಸತಿ ಗೃಹಗಳನ್ನು ಹಾಲಿ ವಾಸಿಸುತ್ತಿದ್ದವರಿಗೆ ಕ್ರಯಕ್ಕೆ ನೀಡಿರುವ ರೀತಿಯಲ್ಲಿ ತಮಗೂ ನೀಡಬೇಕೆಂದು ಕೋರಿರುತ್ತಾರೆ. ಅರ್ಜಿದಾರರು 40 ವರ್ಷಗಳಿಂದಲೂ ವಾಸಿಸುತ್ತಾ ಬಂದಿದ್ದು, ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಈ ಹಿಂದೆ ಇದೇ ಪ್ರದೇಶದಲ್ಲಿನ ವಸತಿಗೃಹಗಳನ್ನು ಹಾಲಿ ವಾಸವಿದ್ದವರಿಗೆ ಕ್ರಯಕ್ಕೆ ನೀಡಿರುವ ಮಾದರಿಯಲ್ಲಿಯೇ ಅಥವಾ ಪಂಕ್ತಿ ಸಂಖ್ಯೆ 19 ಮತ್ತು 20 ರಲ್ಲಿ ವಿವರಿಸಿರುವಂತೆ 2001ರ ಮಾರ್ಗಸೂಚಿ ದರದನ್ವಯ ನಿವೇಶನದ ವಿಸ್ತೀರ್ಣಕ್ಕೆ ಚದರಡಿ ಒಂದಕ್ಕೆ ರೂ.400/- ರಂತೆ ಹಾಗೂ ಕಟ್ಟಡಕ್ಕೆ ಚದರ ಒಂದಕ್ಕೆ ರೂ.50,000/- ಗಳಂತೆ ಕ್ರಯಕ್ಕೆ ನೀಡುವ ಬಗ್ಗೆ ಪಾಲಿಕೆ ಸಭೆಯ ಮುಂದೆ ಮಂಡಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 11 (123) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ|| ಬ್ರಿಗೇಡ್ ಶಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಅಸೋಸಿಯೇಷನ್ ರವರಿಗೆ ಬ್ರಿಗೇಡ್ ರಸ್ತೆಯಲ್ಲಿ ಎಂ.ಜಿ. ರಸ್ತೆಯಿಂದ ರೆಕ್ಸ್ ಚಿತ್ರಮಂದಿರದವರೆಗೂ ಪಾವತಿ ಮತ್ತು ನಿಲುಗಡೆ ಸ್ಥಳದಲ್ಲಿ ನಿಲುಗಡೆ ಶುಲ್ಕ ವಸೂಲು ಮಾಡಲು ಟೆಂಡರ್ ಮುಖಾಂತರ ಕರಾರು ಮಾಡಿಕೊಂಡಿದ್ದು, ದಿನಾಂಕ:01-12-2009 ರಿಂದ 30-11-2010 ರವರೆಗೂ ಒಂದು ವರ್ಷ ಪೂರ್ಣಗೊಳಿಸಿದ್ದು, ಮೆ|| ಬ್ರಿಗೇಡ್ ಎಸ್ಟಾಬ್ಲಿಷ್‌ಮೆಂಟ್ ಸಂಸ್ಥೆಯವರು ದಿನಾಂಕ:01-09-2009 ರಿಂದ ಯಶಸ್ವಿ ಬಿಡ್‌ದಾರರಾಗಿ ಪ್ರತಿ ತಿಂಗಳಿಗೆ ರೂ.2,25,000/- ರಂತೆ ಇದುವರೆವಿಗೂ ಮಾನ್ಯ ಆಯುಕ್ತರ ಖಾತೆಗೆ ರೂ.51,75,000/- ಗಳನ್ನು ಜಮಾ ಮಾಡಲಾಗಿದೆ. ಅಂದರೆ, ದಿನಾಂಕ:01-12-2009 ರಿಂದ 30-11-2011 ರವರೆಗೆ ಪಾರ್ಕಿಂಗ್ ಶುಲ್ಕವನ್ನು ಪಾವತಿಸಿರುತ್ತಾರೆ. ದಿನಾಂಕ:30-11-2011ಕ್ಕೆ 2 ವರ್ಷ ಅವಧಿ ಪೂರ್ಣಗೊಂಡಿದ್ದು, ಸದರಿ ಸಂಸ್ಥೆಯವರು ಮುಂದಿನ ಒಂದು ವರ್ಷಕ್ಕೆ ಅಂದರೆ ದಿನಾಂಕ:01-12-2011 ರಿಂದ 30-11-2012 ರವರೆಗೆ ನವೀಕರಿಸಲು ಅನುಮತಿ ಕೋರಿ ದಿನಾಂಕ:10-10-2011 ರಂದು ಅರ್ಜಿ ನೀಡಿರುತ್ತಾರೆ. ಮುಂದುವರೆದಂತೆ, ಸದರಿ ಸಂಸ್ಥೆಯವರ ಸೇವೆಯು ತೃಪ್ತಿಕರವಾಗಿರುವುದರಿಂದ ಟೆಂಡರ್ ಕರಾರು ಪತ್ರದ ದಿನಾಂಕ:01-12-2009ರ ಪ್ರಕಾರ ಮುಂದಿನ ವರ್ಷಕ್ಕೆ ನವೀಕರಿಸಲು ಅಥವಾ ಹೊಸದಾಗಿ ಟೆಂಡರ್ ಕರೆಯುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-12-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಿ, ಮೆ|| ಬ್ರಿಗೇಡ್ ಶಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಅಸೋಸಿಯೇಷನ್‌ರವರಿಗೆ ಬ್ರಿಗೇಡ್ ರಸ್ತೆಯಲ್ಲಿ ಎಂ.ಜಿ. ರಸ್ತೆಯಿಂದ ರೆಕ್ಸ್ ಚಿತ್ರಮಂದಿರದವರೆಗೂ ಪಾವತಿ ಮತ್ತು ನಿಲುಗಡೆ ಸ್ಥಳದಲ್ಲಿ ನಿಲುಗಡೆ ಶುಲ್ಕ ವಸೂಲು ಮಾಡಲು ದಿನಾಂಕ: 01-12-2011 ರಿಂದ 30-11-2012 ರವರೆಗೆ ಟೆಂಡರ್ ಕರಾರು ಪತ್ರದ ದಿನಾಂಕ:01-12-2009ರ ಪ್ರಕಾರ ಮುಂದಿನ ಒಂದು ವರ್ಷಕ್ಕೆ ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:07-02-2012ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:07-02-2012ರ ನಿರ್ಣಯವನ್ನು ಮಾರ್ಪಡಿಸುತ್ತಾ, ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ಹೊಸದಾಗಿ ಟೆಂಡರ್ ಕರೆಯುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-04-2012ರ ನಿರ್ಣಯ ಹಾಗೂ ದಿನಾಂಕ:30-08-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ಪರಿಶೀಲನೆಗಾಗಿ ಕಡತವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ತೀರ್ಮಾನಿಸಿದ್ದು, ಈ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-04-2012ರ ಸಭೆಯ ನಡವಳಿಗಳನ್ನು ಮರುಸ್ಥಿರೀಕರಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:22-11-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 12 (301) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿ ವಿವಿಧ ರಸ್ತೆಗಳು ವಾಹನ ದಟ್ಟಣೆಯಿಂದ ಕೂಡಿದ್ದು, ಇಂತಹ ರಸ್ತೆಗಳಲ್ಲಿ ಹಾಗೂ ಕೂಡು ರಸ್ತೆಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಪಾದಚಾರಿ ಮೇಲುಸೇತುವೆ ನಿರ್ಮಿಸುವುದು ಅವಶ್ಯಕವಾಗಿರುತ್ತದೆ. ಈ ಸಂಬಂಧ ಮಾನ್ಯ ಶಾಸಕರು/ ಪಾಲಿಕೆಯ ಸದಸ್ಯರು ಸೂಚಿಸುವ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಗಳನ್ನು ನಿರ್ಮಿಸಲು ಕ್ರಮ ವಹಿಸುವಂತೆ ದಿನಾಂಕ:01-02-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯ ಸಂಖ್ಯೆ: 13(208)/10-11 ರಲ್ಲಿ ಅನುಮೋದನೆಯಾಗಿರುತ್ತದೆ.

ನಗರದ ವಿವಿಧ ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸುವ ಸಾಧ್ಯ ಸಾಧ್ಯತೆಗಳನ್ನು ಅಧ್ಯಯನ ಮಾಡಿ **Feasibility Report** ನ್ನು ತಯಾರಿಸಲು ಯೋಜನಾ ಸಮಾಲೋಚಕರಾದ ಮೆ॥ ಇನ್‌ಫ್ರ ಸಪೋರ್ಟ್ ಇಂಜಿನಿಯರಿಂಗ್ ಕನ್ಸಲ್‌ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ರವರವನ್ನು ನೇಮಿಸಿಕೊಂಡು ಈ ಕೆಳಕಂಡ 14 ಸ್ಥಳಗಳಲ್ಲಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ವರದಿ ಪಡೆಯಲಾಗಿರುತ್ತದೆ.

1. ಗಾಂಧಿ ಬಜಾರ್ ಮುಖ್ಯ ರಸ್ತೆ, ಡಿ.ವಿ.ಜಿ ರಸ್ತೆ ಜಂಕ್ಷನ್ ಹತ್ತಿರ
2. ಹಳೆ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ ಹತ್ತಿರ
3. ಮಿಲ್ಲರ್ ರಸ್ತೆ ಭಗವಾನ್ ಮಹಾವೀರ್ ಆಸ್ಪತ್ರೆ ಹತ್ತಿರ
4. ಮಡಿವಾಳ ವಾಣಿಜ್ಯ ಸಂಕೀರ್ಣ ಹತ್ತಿರ, ಹೊಸೂರು ರಸ್ತೆ
5. ಹೊರವರ್ತುಲ ರಸ್ತೆ, ಹೊಸಕೆರೆ ಹಳ್ಳಿ ಲಿಟಿಲ್ ಫ್ಲವರ್ ಶಾಲೆ ಹತ್ತಿರ
6. ಸಂಪಿಗೆ ರಸ್ತೆ, ಮಂತ್ರಿ ಮಾಲ್ ಹತ್ತಿರ
7. ಕ್ರೈಸ್ಟ್ ಕಾಲೇಜ್ ಹತ್ತಿರ, ಮರೀಗೌಡ ರಸ್ತೆ
8. ಎನ್.ಆರ್.ಕಾಲೋನಿ ಬಸ್ ನಿಲ್ದಾಣ ಹತ್ತಿರ
9. ಪ್ಯಾಲೇಸ್ ಗುಟ್ಟಹಳ್ಳಿ ಬಸ್ ನಿಲ್ದಾಣ ಹತ್ತಿರ, ಬಳ್ಳಾರಿ ರಸ್ತೆ
10. ಎಸ್.ಜೆ.ಇ.ಎಸ್. ಕಾಲೇಜ್ ಎದುರು, ಕೆ.ಆರ್.ಪುರಂ
11. ಅಂಬಲಿಪುರ ಗೇಟ್ ಹತ್ತಿರ, ಸರ್ಜಾಪುರ ರಸ್ತೆ
12. ಮಯೂರ ಬೇಕರಿ ಹತ್ತಿರ, ವೈಟ್ ಫೀಲ್ಡ್
13. ಎನ್.ಇ.ಎಸ್ ಜಂಕ್ಷನ್ ಹತ್ತಿರ ಯಲಹಂಕ, ದೊಡ್ಡಬಳ್ಳಾಪುರ
14. ಎಂಬೆಸಿ ಗಾಲ್ಫ್ ಲಿಂಕ್ ಹತ್ತಿರ, ದೊಮ್ಮಲೂರು.

ಮೇಲೆ ತಿಳಿಸಿದ ಸ್ಥಳಗಳಲ್ಲಿ ಪಾದಚಾರಿ ಮೇಲು ಸೇತುವೆಯನ್ನು DBOOT ಆಧಾರದ ಮೇಲೆ ನಿರ್ಮಿಸಲು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ದಿನಾಂಕ: 18-02-2012 ರಂದು ಕರೆಯಲಾಗಿರುತ್ತದೆ.

ಈ ಟೆಂಡರ್ ಪ್ರಕ್ರಿಯೆಯಲ್ಲಿ ಎಂ.ಹೆಚ್.ಮರೀಗೌಡರಸ್ತೆ ಕ್ರೈಸ್ಟ್ ಕಾಲೇಜ್ ಹತ್ತಿರ ಉದ್ದೇಶೀಸಿರುವ ಯೋಜನೆಗೆ ಎರಡು ಏಜೆನ್ಸಿಗಳಾದ (1) ಮೇ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ಮತ್ತು (2) ಮೇ॥ ಪ್ರಕಾಶ್ ಆರ್ಟ್ಸ್ ರವರುಗಳು ಭಾಗವಹಿಸಿದ್ದು, ಇಬ್ಬರು ಸಹ ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ. ಇವರುಗಳು ನಮೂದಿಸಿರುವ ಆರ್ಥಿಕ ಬಿಡ್ ಕೆಳಕಂಡಂತೆ ಇರುತ್ತದೆ.

| ಕ್ರಮ. ಸಂಖ್ಯೆ | ಏಜೆನ್ಸಿಗಳ ಹೆಸರು | ಪಾಲಿಕೆಗೆ ನೀಡಲು ಒಪ್ಪಿರುವ ವಾರ್ಷಿಕ್ ಲೈಸನ್ಸ್ ಫೀ (ತೆರಿಗೆ ಸೇರಿ) | ಷರಾ |
|---|---|---|---|
| 1 | ಮೇ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ | 9,73,000/- | H1 |
| 2 | ಮೇ॥ ಪ್ರಕಾಶ್ ಆರ್ಟ್ಸ್ | 7,20,000/ | H2 |

.......................... ..2

ಮೇಲ್ಕಾಣಿಸಿದ ಇಬ್ಬರು ಸಂಸ್ಥೆಯವರ ಪೈಕಿ ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರು ಅತಿ ಹೆಚ್ಚು ಲೈಸನ್ಸ್ ಫೀ ನಮೂದಿಸಿದ ಗುತ್ತಿಗೆದಾರರಾಗಿದ್ದು, ಇವರು ನಮೂದಿಸಿದ ಮೊತ್ತವು ಪ್ರತಿ ವರ್ಷಕ್ಕೆ ರೂ. 9,73,000/–ಗಳಾಗಿದ್ದು, ಈ ಮೊತ್ತವು ಆರ್.ಎಫ್.ಪಿ ಡಾಕ್ಯುಮೆಂಟ್‌ನಲ್ಲಿ ನಿಗಧಿಪಡಿಸಿರುವ ಕನಿಷ್ಠ ಲೈಸನ್ಸ್ ಫೀ ಮೊತ್ತವಾದ ರೂ. 5,00,000/– ಗಳಿಗಿಂತ ಹೆಚ್ಚಾಗಿರುತ್ತದೆ ಹಾಗೂ ಸಮಂಜಸವಾಗಿರುತ್ತದೆ.

ಸದರಿ ಯೋಜನೆಯನ್ನು ಪಿ.ಪಿ.ಪಿ ಮಾದರಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದ್ದು, ಪಾಲಿಕೆಯ ವತಿಯಿಂದ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ. ಸಾರ್ವಜನಿಕರು ರಸ್ತೆಯನ್ನು ಸುರಕ್ಷಿತವಾಗಿ ದಾಟಲು ಈ ಸ್ಕೈವಾಕ್ ಅನ್ನು ಉಪಯೋಗಿಸಬಹುದಾಗಿದ್ದು, ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿರವರು ಈ ಸ್ಕೈವಾಕ್ ಅನ್ನು ತಮ್ಮ ವೆಚ್ಚದಲ್ಲಿಯೇ ನಿರ್ಮಿಸಿ 20 ವರ್ಷಗಳ ಅವಧಿಗೆ ನಿರ್ವಹಣೆ ಮಾಡುತ್ತಾರೆ ಹಾಗೂ ಪಾಲಿಕೆಯು ಈ ಸ್ಕೈವಾಕ್‌ನಲ್ಲಿ ಜಾಹೀರಾತು ಹಕ್ಕನ್ನು ಸದರಿ ಸಂಸ್ಥೆಗೆ ನೀಡಬೇಕಾಗುತ್ತದೆ.

ಈ ಮೇರೆಗೆ ಸದರಿ ಟೆಂಡರ್‌ನಲ್ಲಿ ಅತಿ ಹೆಚ್ಚು ದರ ನಮೂದಿಸಿರುವ ಏಜೆನ್ಸಿಯವರಾದ ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರ ಬಿಡ್‌ನ್ನು ಪರಿಗಣಿಸಬಹುದಾಗಿದೆ.

ಆದುದರಿಂದ ಕ್ರೈಸ್ಟ್ ಕಾಲೇಜ್ ಹತ್ತಿರ DBOOT ಆಧಾರದ ಮೇಲೆ ಸ್ಕೈವಾಕ್ ನಿರ್ಮಿಸಿ ಜಾಹೀರಾತು ಹಕ್ಕನ್ನು ನೀಡಿ 20 ವರ್ಷಗಳ ಕಾಲಾವಧಿ ನಿರ್ವಹಣೆಯನ್ನು ಮಾಡುವ ಷರತ್ತಿಗೆ ಒಳಪಟ್ಟು ಮೆ॥ ರಾಜ್‌ದೀಪ್ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ ರವರ ಟೆಂಡರ್‌ನ್ನು ಅನುಮೋದಿಸುವ ಬಗ್ಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:08–06–2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:21–06–2012ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 06–11–2012 ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:29–11–2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:29–11–2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:29–11–2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 13 (323) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪ್ಲಾಸ್ಟಿಕ್ ತ್ಯಾಜ್ಯದಿಂದ ಪರಿಣಾಮಕಾರಿಯಾಗಿ ಪರಿಸರದ ಅವನತಿಯನ್ನು ತಡೆಯುವ ಉದ್ದೇಶದಿಂದ, ಭಾರತ ಸರಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯವು **(MoEF)** ಪ್ಲಾಸ್ಟಿಕ್ ತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ 2011, ದಿನಾಂಕ:04-02-2011 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯ ಪ್ರಕಾರ ಪಾಲಿಕೆಯು ಈ ಕೆಳಕಂಡಂತೆ ಕೈಗೊಳ್ಳಬೇಕಾಗಿರುತ್ತದೆ.

- ಸಮಗ್ರ ಮತ್ತು ಸಮಂಜಸ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ಕಾರ್ಯಾಚರಣೆ ಚೌಕಟ್ಟನ್ನು ಸ್ಥಾಪಿಸಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಕಾರ್ಯಗಳ ವ್ಯವಸ್ಥಾಪನೆಗೆ ಸೂಕ್ತವಾದ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು. ಮುಖ್ಯವಾಗಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಣೆ, ಬೇರ್ಪಡಿಸುವುದು, ಸಾಗಾಟ, ಸಂಸ್ಕರಣೆ ಮತ್ತು ಅಂತಿಮ ವಿಲೇವಾರಿಗೆ ಅನುಸರಿಸಬೇಕಾದ ಪ್ರಮಾಣಗಳನ್ನು ರೂಪಿಸುವುದು.
- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಕಾರ್ಯಗಳ (ಸಂಗ್ರಹಣೆ, ಬೇರ್ಪಡಿಸುವಿಕೆ, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿ) ನ್ನು ಮಿತವ್ಯಯಕರವಾಗಿ, ಪರಿಸರಕ್ಕೆ ಹಾನಿಯಾಗದಂತೆ ನಿರ್ವಹಿಸುವುದು.
- ಪ್ಲಾಸ್ಟಿಕ್ ಉತ್ಪಾದಕರನ್ನು ತೊಡಗಿಸಿಕೊಂಡು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸುವುದು. ಈ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ತ್ಯಾಜ್ಯ ಪುನರ್ ಬಳಕೆದಾರರೊಂದಿಗೆ ಜೊತೆಗೂಡಿಸಿ ನಿರ್ವಹಿಸುವುದು.
- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯ ಬಗ್ಗೆ ಎಲ್ಲಾ ಹಿತಾಸಕ್ತಿಗಳ **(stake holders)** ಜವಾಬ್ದಾರಿಯ ಬಗ್ಗೆ ಜಾಗೃತಿ ಮೂಡಿಸುವುದು.
- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗಾಗಿ ಅಸಂಪ್ರದಾಯಕ ಘಟಕಗಳು (ಚಿಂದಿ ಆಯುವವರು. ತ್ಯಾಜ್ಯವನ್ನು ಪುನರ್ ಬಳಕೆಗೆ ತರುವವರು ಇತ್ಯಾದಿ) ರವರನ್ನು ತೊಡಗಿಸಿಕೊಳ್ಳುವುದು.
- ತೆರೆದ ಪ್ರದೇಶದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸುಡುವುದನ್ನು ನಿಷೇಧಿಸುವುದು.
- ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಲು, ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದಕರ ಜವಾಬ್ದಾರಿಯ ಅಡಿಯಲ್ಲಿ ಆರ್ಥಿಕ ಸಹಾಯವನ್ನು ಪಡೆಯುವುದು.
- ಪ್ಲಾಸ್ಟಿಕ್ ತ್ಯಾಜ್ಯದಿಂದ ನಿಸ್ಸತ್ವಗೊಂಡ ಮತ್ತು ಇತರೆ ಮರು ಉಪಯೋಗಕ್ಕೆ ಬರದಂತ ತ್ಯಾಜ್ಯಗಳನ್ನು ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮ 2000 ಮತ್ತು **Schedule III (Specifications for Landfill sites)** ಪ್ರಕಾರ ನಿರ್ವಹಿಸುವುದು.
- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮವನ್ನು ಪಾಲಿಕೆಯ ಪುರಸಭಾ ನೀತಿಯಲ್ಲಿ **(Municipal Bye Law)** ಅಳವಡಿಸಿಕೊಳ್ಳುವುದು.
- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗಾಗಿ ಸೂಕ್ತ ತಂತ್ರಜ್ಞಾನವನ್ನು ರಸ್ತೆ ನಿರ್ಮಾಣ, **Co-incineration** ಅಳವಡಿಸಿಕೊಳ್ಳುವುದು ಇತ್ಯಾದಿ, ಈ ತಂತ್ರಜ್ಞಾನದ ಬಳಕೆಯು ಪರಿಸರ ಪ್ರಮಾಣವನ್ನು ಮೀರದಂತೆ ಕ್ರಮವಹಿಸಬೇಕು.
- ಉತ್ಪಾದಕರಿಗೆ ಪ್ಲಾಸ್ಟಿಕ್ ತಯಾರಿಕೆ, ತ್ಯಾಜ್ಯ ನಿರ್ವಹಣೆ, ಪುನರ್ ಬಳಕೆಗೆ ಉತ್ತೇಜಿಸಲು ಹಾಗೂ ಪ್ಲಾಸ್ಟಿಕ್ ತ್ಯಾಜ್ಯದ ಪ್ರಮಾಣವನ್ನು ಕಡಿಮೆ ಮಾಡಲು, ಪ್ಲಾಸ್ಟಿಕ್ ಚೀಲಗಳ ಬಳಕೆದಾರರಿಗೆ ಉಚಿತವಾಗಿ ಲಭ್ಯವಾಗುವಂತೆ ಪಾಲಿಕೆಯು ಕನಿಷ್ಠ ಮೊತ್ತವನ್ನು ಪ್ರಮಾಣ ಮತ್ತು ಅಳತೆಯ ಅನುಗುಣವಾಗಿ ನಿಗಧಿಪಡಿಸುವುದು.

...........................2

ಈ ನಿಟ್ಟಿನಲ್ಲಿ ಮೊದಲ ಹಂತವಾಗಿ, ಮಾನ್ಯ ಆಯುಕ್ತರವರ ಆದೇಶದಂತೆ ದಿನಾಂಕ:15-03-2011 ರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಂಗಡಿಗಳು, ಹೋಟೆಲ್‌ಗಳು, ವಾಣಿಜ್ಯ ಸಂಕೀರ್ಣಗಳು ಮತ್ತು ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರು 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ (ಪ್ಲಾಸ್ಟಿಕ್ ಕೈಚೀಲ, ಪ್ಲಾಸ್ಟಿಕ್ ಶೀಟ್, ತಿಂಡಿ ಊಟದ ಬಳಕೆಯಲ್ಲಿ ಇತ್ಯಾದಿ) ಬಳಕೆ ಮಾಡುವುದನ್ನು ನಿಷೇಧಿಸಲಾಗಿರುತ್ತದೆ ಹಾಗೂ ಪ್ಲಾಸ್ಟಿಕ್ ಕೈಚೀಲಗಳ ಕನಿಷ್ಟ ಮೊತ್ತದ ಪ್ರಮಾಣ ಮತ್ತು ಅಳತೆಯ ಅನುಗುಣವಾಗಿ ನಿಗಧಿಪಡಿಸಲು, ಪ್ಲಾಸ್ಟಿಕ್ ಉತ್ಪಾದಕರನ್ನು ತೊಡಗಿಸಿಕೊಂಡು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಲು ಪುನರ್ ಬಳಕೆದಾರರು ಮತ್ತು ಚಿಂದಿ ಆಯುವವರನ್ನು ಸದರಿ ಕೇಂದ್ರದಲ್ಲಿ ತೊಡಗಿಸಿಕೊಳ್ಳುವ ಬಗ್ಗೆ ತೀರ್ಮಾನ ಕೈಗೊಳ್ಳಲು ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಪರಿಸರ ನಿಯಂತ್ರಣಾ ಮಂಡಳಿಯ ಸಹಯೋಗದೊಂದಿಗೆ ಪ್ಲಾಸ್ಟಿಕ್ ಉದ್ದಿಮೆದಾರರು ಮತ್ತು ಉತ್ಪಾದಕರುಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಭೆಯಲ್ಲಿ ಪ್ಲಾಸ್ಟಿಕ್ ಕೈಚೀಲವನ್ನು ಕನಿಷ್ಟ ಮೊತ್ತವನ್ನು ಪ್ರಮಾಣ ಮತ್ತು ಅಳತೆಯ ಅನುಗುಣವಾಗಿ ನಿಗಧಿಪಡಿಸಲಾಗಿರುತ್ತದೆ ಹಾಗೂ ಪ್ಲಾಸ್ಟಿಕ್ ತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ 2011 ರಂತೆ **Extended Producer Responsibiltiy (EPR)** ಅನ್ವಯ ಪ್ಲಾಸ್ಟಿಕ್ ಉದ್ದಿಮೆದಾರರಿಂದ ವಾರ್ಷಿಕ ತಯಾರಿಸಲ್ಪಟ್ಟ ಪ್ಲಾಸ್ಟಿಕ್ ಆಧಾರದ ಮೇರೆಗೆ ಉದ್ದಿಮೆ ಪರವಾನಗಿ ನೀಡುವಾಗ ವಸೂಲಾತಿ ಮಾಡಿ ಪ್ರತ್ಯೇಕ ಖಾತೆಯಲ್ಲಿ ಜಮಾ ಮಾಡಲು ತೀರ್ಮಾನಿಸಲಾಗಿರುತ್ತದೆ.

ಆದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್‌ನ ಬಳಕೆ ಮಾಡುವುದನ್ನು ನಿಷೇಧಿಸಲಾಗಿದ್ದರೂ ಸಹ, ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿರುವುದಿಲ್ಲ ಹಾಗೂ 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ಎಲ್ಲಾ ಕಡೆ ಕಂಡುಬಂದಿರುತ್ತದೆ. ಸದರಿ ಪ್ಲಾಸ್ಟಿಕ್ ತ್ಯಾಜ್ಯವು ಅಪಾಯಕಾರಿ ಹಾಗೂ ನಗರದ ಸೌಂದರ್ಯವನ್ನು ಹಾಳುಮಾಡುವುದರಿಂದ ಪ್ಲಾಸ್ಟಿಕ್ ಕೈಚೀಲಗಳನ್ನು ಉಪಯೋಗಿಸುವುದನ್ನು ನಿಯಂತ್ರಿಸಬೇಕಾಗಿರುತ್ತದೆ.

ಈ ನಿಟ್ಟಿನಲ್ಲಿ ನವದೆಹಲಿ ರಾಜ್ಯ ಸರ್ಕಾರವು ಪ್ಲಾಸ್ಟಿಕ್ ಕೈಚೀಲವನ್ನು ಸಂಪೂರ್ಣವಾಗಿ ನಿಷೇಧಿಸಿದ್ದು, ಪರಿಸರವನ್ನು ಉಳಿಸುವ ಸಂಬಂಧ ಬಟ್ಟೆ ಮತ್ತು ಕಾಗದದಿಂದ ತಯಾರಿಸಿರುವ ಕೈಚೀಲವನ್ನು ಉಪಯೋಗಿಸಲು ನಾಗರೀಕರನ್ನು ಉತ್ತೇಜಿಸಿರುತ್ತದೆ. ಪ್ಲಾಸ್ಟಿಕ್ ಕೈಚೀಲ ಉಪಯೋಗಿಸುವ / ಮಾರಾಟ ಮಾಡುವ ಪ್ರಕರಣಗಳಲ್ಲಿ ದಂಡಗಳನ್ನು ವಿಧಿಸಲಾಗಿರುವುದು ಕಂಡುಬಂದಿರುತ್ತದೆ.

ಇದೇ ರೀತಿ ತಮಿಳುನಾಡು ಘನ ಉಚ್ಛನ್ಯಾಯಾಲಯದಲ್ಲಿ ಕೆಲವು ಪರಿಸರವಾದಿಗಳು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿರುವ ಪ್ರಕರಣಗಳಲ್ಲಿ ತಮಿಳುನಾಡು ಮುನಿಸಿಪಲ್ ಕಾರ್ಪೋರೇಷನ್ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಕೈಚೀಲವನ್ನು ಉಪಯೋಗಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಿ, ಆದೇಶಿಸಲಾಗಿರುತ್ತದೆ. ಹೈದರಾಬಾದ್ ಮಹಾನಗರ ಪಾಲಿಕೆಯಲ್ಲಿಯೂ ಕೂಡ ಪ್ಲಾಸ್ಟಿಕ್ ಕೈಚೀಲ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದ್ದು, ಇದೇ ರೀತಿಯಲ್ಲಿಯೇ ಮೇಲ್ಕಂಡ ಮೂರು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೊಂಡ ಕ್ರಮದ ಪ್ರತಿಯನ್ನು ಅಂತರ್ಜಾಲದ ಮೂಲಕ ಪ್ರತಿಗಳನ್ನು ಪಡೆಯಲಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೂಡ ಪ್ಲಾಸ್ಟಿಕ್ ಕೈಚೀಲ ಬಳಕೆಯನ್ನು ನಿಷೇಧಿಸಬಹುದಾಗಿರುತ್ತದೆ.

ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 (ಕೆ.ಎಂ.ಸಿ. ಕಾಯಿದೆ) ರ ಅಧ್ಯಾಯ V ನಿಗಮ ಮತ್ತು ಇತರೆ ಪ್ರಾಧಿಕಾರಗಳ ಅಧಿಕಾರಗಳ ಮತ್ತು ಪ್ರಕಾರ್ಯಗಳ ಪ್ರಕರಣ ಸಂಖ್ಯೆ "59 ರಲ್ಲಿ ವಿವೇಚನಾತ್ಮಕ ಪ್ರಕಾರ್ಯಗಳು ಅಡಿಯಲ್ಲಿ **(Discretionary Functions of the Corporation)** ಬರುವ (23) ರಲ್ಲಿ ಸಾರ್ವಜನಿಕ ಸುರಕ್ಷೆ, ಆರೋಗ್ಯ, ಸೌಕರ್ಯ ಮತ್ತು ಶಿಕ್ಷಣ ಇವುಗಳನ್ನು ವೃದ್ಧಿಗೊಳಸಬಹುದಾದ, ಇದರಲ್ಲಿ ಈ ಹಿಂದೆ ನಿರ್ದಿಷ್ಟವಾಗಿ ಹೆಸರಿಸಿಲ್ಲದ, ಯಾವುದೇ ಕ್ರಮಕ್ಕೈಗೊಳ್ಳುವ ಅಧಿಕಾರವು ಪೌರನಿಗಮಕ್ಕೆ ಇರುತ್ತದೆ. ಈ ನಿಯಮದ ಮೇರೆಗೆ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಕೈಚೀಲಗಳ ಮಾರಾಟ / ಉಪಯೋಗವನ್ನು

ನಿಷೇಧಿಸುವ ಬಗ್ಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-09-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 26-10-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:26-10-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:26-10-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 14 (298) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ವಿ.ಎಸ್.ಮಳೀಮಠ, ಅಧ್ಯಕ್ಷರು, ಶ್ರೀ. ಎಸ್.ನಿಜಲಿಂಗಪ್ಪ, ನ್ಯಾಷನಲ್ ಫೌಂಡೇಶನ್ (ರಿ) ರವರ ಕೋರಿಕೆಯ ಮೇರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಳೆ ವಾರ್ಡ್ ಸಂಖ್ಯೆ:78, ಅರಮನೆ ರಸ್ತೆಗೆ ಅಂದರೆ, ಮೈಸೂರು ಬ್ಯಾಂಕ್ ವೃತ್ತದಿಂದ ವಸಂತನಗರ ರೈಲ್ವೇ ಸೇತುವೆವರೆಗಿನ ರಸ್ತೆಗೆ "ಸಿದ್ಧವನಹಳ್ಳಿ ನಿಜಲಿಂಗಪ್ಪ ರಸ್ತೆ" ಎಂದು ಪುನರ್ ನಾಮಕರಣ ಮಾಡುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ವಿಷಯದ ಸಂಖ್ಯೆ:900/2008-09, ದಿನಾಂಕ:07-07-2009 ರಲ್ಲಿ ಅನುಮೋದನೆ ನೀಡಿರುತ್ತಾರೆ.

ದಿನಾಂಕ:07-07-2009ರ ಮಾನ್ಯ ಆಡಳಿತಗಾರರ ನಿರ್ಣಯಕ್ಕೆ ಸರ್ಕಾರದ ಅನುಮೋದನೆ ಪಡೆಯಲು, ದಿನಾಂಕ:27-07-2009 ಹಾಗೂ 26-08-2009 ರಂದು ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ದಿನಾಂಕ:13-08-2012ರ ಸರ್ಕಾರದ ಪತ್ರದ ಸಂಖ್ಯೆ:ನಅಇ 139 ಎಂಎನ್‌ಜಿ 2009 ರಲ್ಲಿ ನಾಮಕರಣ ಮಾಡುವ ಪ್ರಸ್ತಾವನೆಯನ್ನು ದಿನಾಂಕ: 03-07-2009ರ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಕಾರ್ಯವಿಧಾನದ ಅನುಸಾರ ಪ್ರಸ್ತುತ ಅಸ್ತಿತ್ವದಲ್ಲಿರುವ ಪಾಲಿಕೆ ಸಭೆಯ ಮುಂದೆ ಮಂಡಿಸಿ ಅದರ ಅನುಮೋದನೆಯನ್ನು ಪಡೆದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಳೆ ವಾರ್ಡ್ ಸಂಖ್ಯೆ:78, ಅರಮನೆ ರಸ್ತೆಗೆ ಅಂದರೆ, ಮೈಸೂರು ಬ್ಯಾಂಕ್ ವೃತ್ತದಿಂದ ವಸಂತನಗರ ರೈಲ್ವೇ ಸೇತುವೆವರೆಗಿನ ರಸ್ತೆಗೆ "ಸಿದ್ಧವನಹಳ್ಳಿ ನಿಜಲಿಂಗಪ್ಪ ರಸ್ತೆ" ಎಂದು ಪುನರ್ ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 03-11-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಅರಮನೆ ರಸ್ತೆ ಎಂಬುವುದು ಒಂದು ಐತಿಹಾಸಿಕ ಹಿನ್ನಲೆ ಇರುವುದರಿಂದ, ಸದರಿ ರಸ್ತೆಗೆ ಅರಮನೆ ರಸ್ತೆ ಎಂದು ಮುಂದುವರೆಸುವುದು".

ಶ್ರೀ. ಗಂಗಬೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಅರಮನೆ ರಸ್ತೆ ಎಂಬುವುದು ಒಂದು ಐತಿಹಾಸಿಕ ಹಿನ್ನಲೆ ಇರುವುದರಿಂದ, ಸದರಿ ರಸ್ತೆಗೆ ಅರಮನೆ ರಸ್ತೆ ಎಂದು ಮುಂದುವರೆಸುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 15 (302) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಹೆಚ್.ಆರ್.ಕೃಷ್ಣಪ್ಪ, ಅಧ್ಯಕ್ಷರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ರವರು ದಿನಾಂಕ:09-02-2012 ರಂದು ಆಯುಕ್ತರವರಿಗೆ ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ (ರಿ) ರವರ ಮನವಿ ಪತ್ರವನ್ನು ಲಗತ್ತಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:99, ರಾಜಾಜಿನಗರ 2ನೇ ಬ್ಲಾಕ್ ಪಶ್ಚಿಮ ಕಾರ್ಡ್ ರಸ್ತೆಗೆ ಅಭಿಮುಖವಾಗಿರುವ 20ನೇ ಮುಖ್ಯರಸ್ತೆಗೆ (ಸರ್ವೀಸ್ ರಸ್ತೆಗೆ) "ಬಸವ ಮಂಟಪ ರಸ್ತೆ" ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ನಾಮಕರಣ ಮಾಡಲು ಉದ್ದೇಶಿಸಲಾಗಿರುವ ರಸ್ತೆಯಲ್ಲಿ ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ (ರಿ) ಎಂಬ ಸಂಸ್ಥೆಯು 1974ನೇ ಸಾಲಿನಲ್ಲಿ ಸ್ಥಾಪಿಸಲಾಗಿದ್ದು, ಸದರಿ ಟ್ರಸ್ಟ್ ವತಿಯಿಂದ ಧಾರ್ಮಿಕ ಚಟುವಟಿಕೆಗಳು ನಡೆಸಿಕೊಂಡು ಬರುತ್ತಿದ್ದಾರೆ ಎಂದು ತಿಳಿಸಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 10 ಮಂದಿ, ವಿರೋಧವಾಗಿ ಒಬ್ಬರು ಸಹಿ ಮಾಡದೆ ಇರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976ರ 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರ ಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಅನಂತರ ಅದನ್ನು, ಕನಿಷ್ಠ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಸದರಿ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ, ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:99, ರಾಜಾಜಿನಗರ 2ನೇ ಬ್ಲಾಕ್ ಪಶ್ಚಿಮ ಕಾರ್ಡ್ ರಸ್ತೆಗೆ ಅಭಿಮುಖವಾಗಿರುವ 20ನೇ ಮುಖ್ಯರಸ್ತೆಗೆ (ಸರ್ವೀಸ್ ರಸ್ತೆಗೆ) "ಬಸವ ಮಂಟಪ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-10-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-11-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-11-2012ರ ನಿರ್ಣಯವನ್ನು ಒಪ್ಪುವುದು".

..........................2

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 06-11-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 16 (312) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಹೆಚ್.ಸುರೇಶ್, ನಗರ ಪಾಲಿಕೆ ಸದಸ್ಯರು ದಿನಾಂಕ:20-02-2012 ರಂದು ಮಾನ್ಯ ಆಯುಕ್ತರವರಿಗೆ ಮನವಿ ಪತ್ರ ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:181 ರಲ್ಲಿ ಬರುವ ಕದಿರೇನಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಕೆಳ ಸೇತುವೆಗೆ "ರಾಷ್ಟ್ರಪ್ರೇಮಿ ಸಂಗೊಳ್ಳಿರಾಯಣ್ಣ" ರವರ ಹೆಸರನ್ನು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಶ್ರೀ. ಸಂಗೊಳ್ಳಿರಾಯಣ್ಣ ರವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಐತಿಹಾಸಿಕ ಪ್ರಾಮುಖ್ಯತೆಯುಳ್ಳವರಾಗಿದ್ದು, ಸದರಿಯವರು ದಿವಂಗತರಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 10 ಮಂದಿ, ವಿರೋಧವಾಗಿ ಯಾರು ಸಹಿ ಮಾಡದೆ ಇರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರ ಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಅನಂತರ ಅದನ್ನು, ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಸದರಿ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ, ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಹಾಗೂ ಕಲಂ 7 ರಲ್ಲಿ ಸಾಮಾನ್ಯವಾಗಿ ಒಂದು ನಗರ ಪಾಲಿಕೆಯ ಪ್ರದೇಶದೊಳಗಿನ ಯಾವುದೇ ಎರಡು ಬೀದಿಗಳು, ವೃತ್ತಗಳು, ಚೌಕಗಳು, ಪಾರ್ಕ್‌ಗಳು, ಉದ್ಯಾನವನಗಳು, ಯಾವುದೇ ಇತರ ಸಾರ್ವಜನಿಕ ಸ್ಥಳಗಳು ಒಂದೇ ರೀತಿಯ ಹೆಸರನ್ನು ಹೊಂದಿರತಕ್ಕದ್ದಲ್ಲ ಎಂದು ಉಲ್ಲೇಖಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈಗಾಗಲೇ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣಕ್ಕೆ "ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ" ಹೆಸರನ್ನು ನಾಮಕರಣ ಮಾಡುವ ಬಗ್ಗೆ ಕರ್ನಾಟಕ ಸರ್ಕಾರವು ಅನುಮೋದನೆ ನೀಡಿರುತ್ತದೆ. ಮುಂದುವರೆದಂತೆ, ಕರ್ನಾಟಕ ಸರ್ಕಾರದ ಅನುಮೋದನೆ ಮೇರೆಗೆ, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಆದುದರಿಂದ ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:181 ರಲ್ಲಿ ಬರುವ ಕದಿರೇನಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಕೆಳ ಸೇತುವೆಗೆ "ರಾಷ್ಟ್ರಪ್ರೇಮಿ ಸಂಗೊಳ್ಳಿರಾಯಣ್ಣ" ರವರ ಹೆಸರನ್ನು ನಾಮಕರಣ ಮಾಡಲು ಅವಕಾಶ ಇರುವುದಿಲ್ಲ ಎಂಬ ಅಂಶದ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-10-2012ರ ಟಿಪ್ಪಣಿ ಹಾಗೂ ಆಯುಕ್ತರವರ ದಿನಾಂಕ:12-10-2012ರ ಟಿಪ್ಪಣಿಯನ್ನು ಮಾರ್ಪಡಿಸಿ "ರಾಷ್ಟ್ರಪ್ರೇಮಿ ಸಂಗೊಳ್ಳಿರಾಯಣ್ಣ" ರವರ ಹೆಸರನ್ನು ನಾಮಕರಣ ಮಾಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-11-2012ರ ನಿರ್ಣಯ.

...........................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-11-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 06-11-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 19 (315) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 4ರ ವ್ಯಾಪ್ತಿಯಲ್ಲಿ ಬರುವ ಯಲಹಂಕ ಉಪನಗರ 3ನೇ ಎ ಮುಖ್ಯ ರಸ್ತೆ, 11ನೇ ಎ ಅಡ್ಡರಸ್ತೆ ಹಾಗೂ 12ನೇ ಎ ಅಡ್ಡರಸ್ತೆಯ ನಡುವಿನಲ್ಲಿರುವ ಉದ್ಯಾನವನಕ್ಕೆ "ವಿಶ್ವಗುರು ಬಸವಣ್ಣನವರ ಉದ್ಯಾನವನ" ಎಂದು ನಾಮಕರಣ ಮಾಡುವುದೆಂದು ದಿನಾಂಕ:30-08-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:232/2012-13 ರಲ್ಲಿ ತೀರ್ಮಾನಿಸಲಾಗಿದೆ.

ಸದರಿ ವಿಷಯದ ಸಂಬಂಧವಾಗಿ, ಸಾರ್ವಜನಿಕರು ಆಕ್ಷೇಪಣೆಗಳು/ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:26-09-2012 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಶ್ರೀ. ಜಗದೀಶ್‌ಗಿರಿ ಮತ್ತು ಶ್ರೀ. ಸುಂದರ್‌ರಾವ್ ಇವರುಗಳು ಆಕ್ಷೇಪಣೆ ಅರ್ಜಿ ಸಲ್ಲಿಸಿ ಸದರಿ ಉದ್ಯಾನವನಕ್ಕೆ ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಉದ್ಯಾನವನ ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 4ರ ವ್ಯಾಪ್ತಿಯಲ್ಲಿ ಬರುವ ಯಲಹಂಕ ಉಪನಗರ 3ನೇ ಎ ಮುಖ್ಯ ರಸ್ತೆ, 11ನೇ ಎ ಅಡ್ಡರಸ್ತೆ ಹಾಗೂ 12ನೇ ಎ ಅಡ್ಡರಸ್ತೆಯ ನಡುವಿನಲ್ಲಿರುವ ಉದ್ಯಾನವನಕ್ಕೆ "ವಿಶ್ವಗುರು ಬಸವಣ್ಣನವರ ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-12-2012 ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:15-12-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:15-12-2012ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 20 (316) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 181 ರ ವ್ಯಾಪ್ತಿಯಲ್ಲಿ ಬರುವ ಇಸ್ರೋ ಬಡಾವಣೆ, 8ನೇ ಬಿ ಮುಖ್ಯ ರಸ್ತೆ, 17ನೇ ಅಡ್ಡರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಉದ್ಯಾನವನಕ್ಕೆ "ಪ್ರೊ.ಸತೀಶ್ ಧಾವನ್ ಉದ್ಯಾನವನ" ಎಂದು ನಾಮಕರಣ ಮಾಡುವುದೆಂದು ದಿನಾಂಕ:30-07-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:27(172)/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು ಮತ್ತು ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:26-09-2012 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:181 ರ ವ್ಯಾಪ್ತಿಯಲ್ಲಿ ಬರುವ ಇಸ್ರೋ ಬಡಾವಣೆ, 8ನೇ ಬಿ ಮುಖ್ಯ ರಸ್ತೆ, 17ನೇ ಅಡ್ಡರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಉದ್ಯಾನವನಕ್ಕೆ "ಪ್ರೊ.ಸತೀಶ್ ಧಾವನ್ ಉದ್ಯಾನವನ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-11-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:24-11-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:24-11-2012ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 21 (211) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಲ್ಲಘಟ್ಟ ಮುಖ್ಯ ಕಣಿವೆ C-100 ಶಿವಾಜಿನಗರದ ರಸೆಲ್ ಮಾರುಕಟ್ಟೆಯ ಬಳಿ ಹರಿಯುತ್ತಿದ್ದು ಪ್ರತಿ ಮಳೆಗಾಲದಲ್ಲೂ ಸದರಿ ಮಾರುಕಟ್ಟೆ ಪ್ರದೇಶವು ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ಹಾಗೂ ಸ್ಥಳೀಯ ಅಂಗಡಿ ಮಾಲೀಕರಿಗೆ ಕಷ್ಟ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು 2009-10ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಮುಖಾಂತರ ಕಡಿಮೆ ದರ ನಮೂದಿಸಿದ್ದ ಮೆ॥ ಶ್ರೀ ರಾಮ್‌ಸಾಯಿ ಕನ್‌ಸ್ಟ್ರಕ್ಷನ್ಸ್ ರವರಿಗೆ ವಹಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗಿತ್ತು. ಸದರಿ ಗುತ್ತಿಗೆದಾರರು ನಿಗಧಿತ ಕಾಲಾವಧಿಯಲ್ಲಿ ನಿರೀಕ್ಷಿತ ಪ್ರಗತಿ ತೋರಿಸದ ಕಾರಣ ಸದರಿ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಮೇಲೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕ:24-02-2012 ರಂದು 5ನೇ ಬಾರಿ ಟೆಂಡರ್ ಅಧಿಸೂಚನೆಯನ್ನು **e-procurement** ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ ದಿನಾಂಕ: 05-03-2012 ರಂದು ಮೆ॥ಕೆ.ವಿ.ಆರ್.ಕನ್‌ಸ್ಟ್ರಕ್ಷನ್ಸ್ ಟೆಂಡರ್ ಸಲ್ಲಿಸಿರುವ ಏಕೈಕ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ, ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಿಸಿದ್ದ ಆರ್ಥಿಕ ಬಿಡ್ ಅನ್ನು ದಿನಾಂಕ: 09-03-2012 ರಂದು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿವೆ;

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2009-10ನೇ ಸಾಲಿನ ದರಪಟ್ಟಿಯಂತೆ) | ರೂ.2,03,44,982/- |
| 2 | ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ. 2,58,13,384/- |
| 3 | ಬಿಡ್ಡುದಾರರಾದ ಮೆ॥ ಕೆ.ವಿ.ಆರ್ ಕನ್‌ಸ್ಟ್ರಕ್ಷನ್ಸ್‌ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 2,94,84,776/- |
| 4 | ಸಂಧಾನದ ನಂತರ ಮೆ॥ ಕೆ.ವಿ.ಆರ್ ಕನ್‌ಸ್ಟ್ರಕ್ಷನ್ಸ್‌ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.2,93,33,900/- |
| 5 | ಟೆಂಡರ್‌ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ಕಡಿಮೆ | 44.18 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗಿಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ | 13.64 ಹೆಚ್ಚುವರಿ |

ಮೆ॥ ಕೆ.ವಿ.ಆರ್ ಕನ್‌ಸ್ಟ್ರಕ್ಷನ್ಸ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ, ಶೇ.44.18 ರಷ್ಟು ಹೆಚ್ಚುವರಿ ಇದ್ದು, ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇ.13.64 ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬಂದಿರುತ್ತದೆ.

..........................2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಮೆ॥ ಕೆ.ವಿ.ಆರ್ ಕನ್ಸ್‌ಟ್ರಕ್ಷನ್ಸ್‌ರವರು ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾಗಿದ್ದು, ಇವರು ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತ ರೂ.2,93,33,900/- (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.44.18 ರಷ್ಟು ಹೆಚ್ಚುವರಿ ಹಾಗೂ ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಲಾದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.13.64 ರಷ್ಟು ಹೆಚ್ಚುವರಿ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:24-05-2012 ರ ಟಿಪ್ಪಣಿ ಹಾಗೂ ದಿನಾಂಕ:08-06-2012 ರಂದು ಉದ್ದೇಶಿತ ಕಾಮಗಾರಿಯ ಸ್ಥಳ ಪರಿಶೀಲನೆಯನ್ನು ನಡೆಸಲಾಗಿರುತ್ತದೆ. ಇಂತಹ ಕಠಿಣ/ಕ್ಲಿಷ್ಟ ಸ್ವರೂಪದ ಕಾಮಗಾರಿಗಳನ್ನು ನಿರ್ವಹಿಸಲು ಅಗತ್ಯವಿರುವ ಮೂಲ ಸೌಕರ್ಯ/ತಾಂತ್ರಿಕ ಪರಿಣಿತಿಯು ಹಾಲಿ ಗುತ್ತಿಗೆದಾರರಲ್ಲಿ ಇಲ್ಲವೆಂಬುದಾಗಿ ಸಮಿತಿಯು ಅಭಿಪ್ರಾಯಿಸಿರುತ್ತದೆ. ಆದಕಾರಣ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಿ, ಉದ್ದೇಶಿತ ಕಾಮಗಾರಿಯನ್ನು 4G ಅಡಿಯಲ್ಲಿ ಕೈಗೆತ್ತಿಕೊಂಡು ತ್ವರಿತವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮವಹಿಸುವುದೆಂದು ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 19-07-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:24-05-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ:24-05-2012ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 22 (213) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಲ್ಲಘಟ್ಟ ಮುಖ್ಯ ಕಣಿವೆ C-100 ಶಿವಾಜಿನಗರದ ರಸೆಲ್ ಮಾರುಕಟ್ಟೆಯ ಬಳಿ ಹರಿಯುತ್ತಿದ್ದು, ಪ್ರತಿ ಮಳೆಗಾಲದಲ್ಲೂ ಸದರಿ ಮಾರುಕಟ್ಟೆ ಪ್ರದೇಶವು ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ಹಾಗೂ ಸ್ಥಳೀಯ ಅಂಗಡಿ ಮಾಲೀಕರಿಗೆ ಕಷ್ಟ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಲು ಅಂದಾಜನ್ನು 2009-10ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ ಇಲಾಖೆಯ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಮುಖಾಂತರ ಕಡಿಮೆ ದರ ನಮೂದಿಸಿದ್ದ ಮೆ॥ ಶ್ರೀ ರಾಮ್‌ಸಾಯಿ ಕನ್ಸ್‌ಟ್ರಕ್ಷನ್ಸ್, ರವರಿಗೆ ವಹಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗಿತ್ತು. ಸದರಿ ಗುತ್ತಿಗೆದಾರರು ನಿಗಧಿತ ಕಾಲಾವಧಿಯಲ್ಲಿ ನಿರೀಕ್ಷಿತ ಪ್ರಗತಿ ತೋರಿಸದ ಕಾರಣ ಸದರಿ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಮೇಲೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಗಿರುತ್ತದೆ.

ಈ ಸಂಬಂಧ, ಸದರಿ ಕಾಮಗಾರಿಗೆ ದಿನಾಂಕ:24-02-2012 ರಂದು 5ನೇ ಬಾರಿ ಟೆಂಡರ್ ಅಧಿಸೂಚನೆಯನ್ನು **e-procurement** ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 05-03-2012 ರಂದು ಮೆ॥ ಕೆ.ವಿ.ಆರ್ ಕನ್ಸ್‌ಟ್ರಕ್ಷನ್ಸ್ ರವರು ಟೆಂಡರ್ ಸಲ್ಲಿಸಿರುವ ಏಕೈಕ ಬಿಡ್ಡುದಾರರಾಗಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ, ತಾಂತ್ರಿಕವಾಗಿ ಗುತ್ತಿಗೆದಾರರು ಅರ್ಹತೆಯನ್ನು ಹೊಂದಿರುವರೆಂದು ಘೋಷಿಸಿದ ನಂತರ ಇವರು ಸಲ್ಲಿಸಿದ್ದ ಆರ್ಥಿಕ ಬಿಡ್ ಅನ್ನು ದಿನಾಂಕ:09-03-2012 ರಂದು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿದೆ;

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2009-10ನೇ ಸಾಲಿನ ದರಪಟ್ಟಿಯಂತೆ) | ರೂ.2,04,85,070/- |
| 2 | ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ | ರೂ. 2,67,26,516/- |
| 3 | ಬಿಡ್ಡುದಾರರಾದ ಮೆ॥ ಕೆ.ವಿ.ಆರ್ ಕನ್ಸ್‌ಟ್ರಕ್ಷನ್ಸ್‌ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ. 2,96,92,132/- |
| 4 | ಸಂಧಾನದ ನಂತರ ಮೆ॥ ಕೆ.ವಿ.ಆರ್ ಕನ್ಸ್‌ಟ್ರಕ್ಷನ್ಸ್‌ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.2,95,78,740/- |
| 5 | ಟೆಂಡರ್‌ಗಿಟ್ಟ ಮೊತ್ತದ ಮೇಲಿನ ಶೇಕಡವಾರು ಹೆಚ್ಚುವರಿ/ಕಡಿಮೆ | 44.39 ಹೆಚ್ಚುವರಿ |
| 6 | ಪ್ರಸಕ್ತ ಸಾಲಿನ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗಿಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ | 10.67 ಹೆಚ್ಚುವರಿ |

ಮೆ॥ ಕೆ.ವಿ.ಆರ್ ಕನ್ಸ್‌ಟ್ರಕ್ಷನ್ಸ್ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.43.79 ರಷ್ಟು ಹೆಚ್ಚುವರಿ ಇದ್ದು, ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇ.10.67 ರಷ್ಟು ಹೆಚ್ಚುವರಿ ಆಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬಂದಿರುತ್ತದೆ.

..........................2

C

# ದಿನಾಂಕ: 29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 330 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್-106, ರಾಜ್‌ಕುಮಾರ್ ವಾರ್ಡಿನ ವ್ಯಾಪ್ತಿಯಲ್ಲಿ ನಗರ ಪಾಲಿಕೆಯ ವತಿಯಿಂದ ನೂತನವಾಗಿ ನಿರ್ಮಿಸಿರುವ ಗಾಜಿನ ಮನೆಗೆ "ಡಾ॥ ರಾಜ್‌ಕುಮಾರ್ ಗಾಜಿನ ಮನೆ" ಎಂದು ನಾಮಕರಣ ಮಾಡಲು ಆಯುಕ್ತರವರು ಕ್ರಮಕ್ಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ವಾರ್ಡ್-106, ರಾಜ್‌ಕುಮಾರ್ ವಾರ್ಡಿನ ವ್ಯಾಪ್ತಿಯಲ್ಲಿ ನಗರ ಪಾಲಿಕೆಯ ವತಿಯಿಂದ ನೂತನವಾಗಿ ನಿರ್ಮಿಸಿರುವ ಗಾಜಿನ ಮನೆಗೆ "ಡಾ॥ ರಾಜ್‌ಕುಮಾರ್ ಗಾಜಿನ ಮನೆ" ಎಂದು ನಾಮಕರಣ ಮಾಡಲು ಆಯುಕ್ತರವರು ಕ್ರಮಕ್ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ: 29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

### ವಿಷಯದ ಸಂಖ್ಯೆ: 331 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೆಂಗಳೂರು ನಗರದ ಬನಶಂಕರಿ 2ನೇ ಹಂತ, ಚನ್ನಮ್ಮನಕೆರೆ ಅಚ್ಚುಕಟ್ಟು ಬಡಾವಣೆಯಲ್ಲಿನ (ಯಡಿಯೂರು-ನಾಗಸಂದ್ರ ಗ್ರಾಮದ ಸರ್ವೆ ನಂ.26) ಉದ್ಯಾನವನ ಪ್ರದೇಶದಲ್ಲಿ ಘನತ್ಯಾಜ್ಯ ವಿಲೇವಾರಿ ವಿಂಗಡಣಾ ಘಟಕವನ್ನು ಸ್ಥಾಪಿಸುವ ಸಂಬಂಧ ನಾಗರೀಕ ಸೌಲಭ್ಯ ನಿವೇಶನವೆಂದು ಭೂ ಪರಿವರ್ತನೆ ಮಾಡಿಕೊಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಕೋರಲು ಆಯುಕ್ತರವರು ಕೂಡಲೇ ಕ್ರಮಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೆಂಗಳೂರು ನಗರದ ಬನಶಂಕರಿ 2ನೇ ಹಂತ, ಚನ್ನಮ್ಮನಕೆರೆ ಅಚ್ಚುಕಟ್ಟು ಬಡಾವಣೆಯಲ್ಲಿನ (ಯಡಿಯೂರು-ನಾಗಸಂದ್ರ ಗ್ರಾಮದ ಸರ್ವೆ ನಂ.26) ಉದ್ಯಾನವನ ಪ್ರದೇಶದಲ್ಲಿ ಘನತ್ಯಾಜ್ಯ ವಿಲೇವಾರಿ ವಿಂಗಡಣಾ ಘಟಕವನ್ನು ಸ್ಥಾಪಿಸುವ ಸಂಬಂಧ ನಾಗರೀಕ ಸೌಲಭ್ಯ ನಿವೇಶನವೆಂದು ಭೂ ಪರಿವರ್ತನೆ ಮಾಡಿಕೊಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಕೋರಲು ಆಯುಕ್ತರವರು ಕೂಡಲೇ ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ: 29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 332 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕೈಗೊಳ್ಳುವ ಕಾಮಗಾರಿಗಳ ಟೆಂಡರ್‌ಗಳಿಗೆ ಸಂಬಂಧಿಸಿದಂತೆ ರೂ.20.00 ಲಕ್ಷಗಳವರೆವಿಗಿನ ಕಾಮಗಾರಿಗಳನ್ನು ಇ-ಟೆಂಡರ್ ಮುಖಾಂತರ, ರೂ.20.00 ಲಕ್ಷಗಳಿಗೂ ಅಧಿಕ ವೆಚ್ಚದ ಕಾಮಗಾರಿಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಕೈಗೊಳ್ಳಲು ಸರ್ಕಾರದಿಂದ ಈ ಹಿಂದೆ ಆದೇಶ ಪಡೆದು ರಾಜ್ಯ ಪತ್ರದಲ್ಲಿಯೂ ಸಹ ಪ್ರಕಟಿಸಿ, ಇಲ್ಲಿಯವರೆವಿಗೆ ಸದರಿ ಆದೇಶದಂತೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿತ್ತು. ಇತ್ತೀಚಿನ ಸರ್ಕಾರದ ಸುತ್ತೋಲೆಯಂತೆ ಇ-ಟೆಂಡರ್ ಪ್ರಕ್ರಿಯೆಯನ್ನು ರೂ.5.00 ಲಕ್ಷಗಳಿಗೆ ಸೀಮಿತಗೊಳಿಸಿ, ರೂ.5.00 ಲಕ್ಷಗಳಿಗೆ ಮೀರಿದ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ನಿರ್ವಹಿಸುವಂತೆ ಆದೇಶಿಸಿದೆ.

ಈ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅನ್ವಯವಾಗುವಂತೆ ಈ ಹಿಂದೆ ಇದ್ದ ಸರ್ಕಾರದ ಆದೇಶದಂತೆ ರೂ.20.00 ಲಕ್ಷಗಳವರೆವಿಗಿನ ಕಾಮಗಾರಿಗಳನ್ನು ಇ-ಟೆಂಡರ್ ಮುಖಾಂತರ, ರೂ.20.00 ಲಕ್ಷಗಳಿಗೂ ಅಧಿಕ ವೆಚ್ಚದ ಕಾಮಗಾರಿಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಕೈಗೊಳ್ಳುವ ಕುರಿತಂತೆ ಸರ್ಕಾರದ ಅನುಮೋದನೆ ನಿರೀಕ್ಷಿಸಿ, ಸೂಕ್ತ ಆದೇಶ ಹೊರಡಿಸಿ, ಪ್ರಸ್ತಾಪಿತ ವಿಷಯದ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಲು ಆಯುಕ್ತರವರು ಕೂಡಲೇ ಕ್ರಮಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಕೈಗೊಳ್ಳುವ ಕಾಮಗಾರಿಗಳ ಟೆಂಡರ್‌ಗಳಿಗೆ ಸಂಬಂಧಿಸಿದಂತೆ ರೂ.20.00 ಲಕ್ಷಗಳ ವರೆವಿಗಿನ ಕಾಮಗಾರಿಗಳನ್ನು ಇ-ಟೆಂಡರ್ ಮುಖಾಂತರ, ರೂ.20.00 ಲಕ್ಷಗಳಿಗೂ ಅಧಿಕ ವೆಚ್ಚದ ಕಾಮಗಾರಿಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಕೈಗೊಳ್ಳಲು ಸರ್ಕಾರದಿಂದ ಈ ಹಿಂದೆ ಆದೇಶ ಪಡೆದು ರಾಜ್ಯ ಪತ್ರದಲ್ಲಿಯೂ ಸಹ ಪ್ರಕಟಿಸಿ, ಇಲ್ಲಿಯವರೆವಿಗೆ ಸದರಿ ಆದೇಶದಂತೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿತ್ತು. ಇತ್ತೀಚಿನ ಸರ್ಕಾರದ ಸುತ್ತೋಲೆಯಂತೆ ಇ-ಟೆಂಡರ್ ಪ್ರಕ್ರಿಯೆಯನ್ನು ರೂ.5.00 ಲಕ್ಷಗಳಿಗೆ ಸೀಮಿತಗೊಳಿಸಿ, ರೂ.5.00 ಲಕ್ಷಗಳಿಗೆ ಮೀರಿದ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ನಿರ್ವಹಿಸುವಂತೆ ಆದೇಶಿಸಿದೆ.

.........................2

ಈ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅನ್ವಯವಾಗುವಂತೆ ಈ ಹಿಂದೆ ಇದ್ದ ಸರ್ಕಾರದ ಆದೇಶದಂತೆ ರೂ.20.00 ಲಕ್ಷಗಳವರೆವಿಗಿನ ಕಾಮಗಾರಿಗಳನ್ನು ಇ-ಟೆಂಡರ್ ಮುಖಾಂತರ, ರೂ.20.00 ಲಕ್ಷಗಳಿಗೂ ಅಧಿಕ ವೆಚ್ಚದ ಕಾಮಗಾರಿಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಕೈಗೊಳ್ಳುವ ಕುರಿತಂತೆ ಸರ್ಕಾರದ ಅನುಮೋದನೆ ನಿರೀಕ್ಷಿಸಿ, ಸೂಕ್ತ ಆದೇಶ ಹೊರಡಿಸಿ, ಪ್ರಸ್ತಾಪಿತ ವಿಷಯದ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಲು ಆಯುಕ್ತರವರು ಕೂಡಲೇ ಕ್ರಮಕೈಗೊಳ್ಳುವುದೆಂದು ಈ ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ: 29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 333 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ 65, ಕಾಡುಮಲ್ಲೇಶ್ವರದ ಕೋದಂಡರಾಮಪುರ ಹಳೆ ಈಜುಕೊಳದ ರಸ್ತೆಗೆ "ಸಾಹಿತ್ಯ ಬಂಧು ಪ್ರೊ॥ ಜಿ.ಶ್ರೀನಿವಾಸರಾಜು" ರವರ ಹೆಸರನ್ನು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ 65, ಕಾಡುಮಲ್ಲೇಶ್ವರದ ಕೋದಂಡರಾಮಪುರ ಹಳೆ ಈಜುಕೊಳದ ರಸ್ತೆಗೆ "ಸಾಹಿತ್ಯ ಬಂಧು ಪ್ರೊ॥ ಜಿ.ಶ್ರೀನಿವಾಸರಾಜು" ರವರ ಹೆಸರನ್ನು ನಾಮಕರಣ ಮಾಡಲು ಆಯುಕ್ತರವರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ: 29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 334 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:198, ಹೆಮ್ಮಿಗೇಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕನಕಪುರ ಮುಖ್ಯ ರಸ್ತೆಯಿಂದ ಕೆಂಗೇರಿ ಮೈಸೂರು ರಸ್ತೆಗೆ ಸೇರುವ 100 ಅಡಿ ರಸ್ತೆಯ ಚಿಕ್ಕೇಗೌಡನಪಾಳ್ಯದ ನಾಲ್ಕು ರಸ್ತೆ ಸೇರುವ ವೃತ್ತಕ್ಕೆ "ಶ್ರೀ ಕನಕದಾಸ ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಆಯುಕ್ತರವರು ಕ್ರಮಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ವಾರ್ಡ್ ಸಂಖ್ಯೆ:198, ಹೆಮ್ಮಿಗೇಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕನಕಪುರ ಮುಖ್ಯ ರಸ್ತೆಯಿಂದ ಕೆಂಗೇರಿ ಮೈಸೂರು ರಸ್ತೆಗೆ ಸೇರುವ 100 ಅಡಿ ರಸ್ತೆಯ ಚಿಕ್ಕೇಗೌಡನಪಾಳ್ಯದ ನಾಲ್ಕು ರಸ್ತೆ ಸೇರುವ ವೃತ್ತಕ್ಕೆ "ಶ್ರೀ ಕನಕದಾಸ ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಆಯುಕ್ತರವರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ: 29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

### ವಿಷಯದ ಸಂಖ್ಯೆ: 335 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:67ರ ನಾಗಪುರ ವಾರ್ಡಿನ ವ್ಯಾಪ್ತಿಯಲ್ಲಿ ಬರುವ

1. 11ನೇ ಮುಖ್ಯರಸ್ತೆಗೆ ಕೆ.ಬಿ. ವೆಂಕಟೇಶ್ ರಸ್ತೆ
2. 12ನೇ ಮುಖ್ಯರಸ್ತೆಗೆ ಛೇರ್‌ಮನ್ ಎಂ.ಚಿನ್ನಪ್ಪ ರಸ್ತೆ
3. 14ನೇ ಮುಖ್ಯರಸ್ತೆಗೆ ಸಿ ಮುದ್ದಯ್ಯ ರಸ್ತೆ

ಎಂದು ನಾಮಕರಣ ಮಾಡುವ ಬಗ್ಗೆ ಆಯುಕ್ತರವರು ಕ್ರಮಕ್ಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:67ರ ನಾಗಪುರ ವಾರ್ಡಿನ ವ್ಯಾಪ್ತಿಯಲ್ಲಿ ಬರುವ

1. 11ನೇ ಮುಖ್ಯರಸ್ತೆಗೆ ಕೆ.ಬಿ. ವೆಂಕಟೇಶ್ ರಸ್ತೆ
2. 12ನೇ ಮುಖ್ಯರಸ್ತೆಗೆ ಛೇರ್‌ಮನ್ ಎಂ.ಚಿನ್ನಪ್ಪ ರಸ್ತೆ
3. 14ನೇ ಮುಖ್ಯರಸ್ತೆಗೆ ಸಿ ಮುದ್ದಯ್ಯ ರಸ್ತೆ

ಎಂದು ನಾಮಕರಣ ಮಾಡುವ ಬಗ್ಗೆ ಆಯುಕ್ತರವರು ಕ್ರಮಕ್ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ: 29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 336 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ 66, ಸುಬ್ರಮಣ್ಯನಗರ ವ್ಯಾಪ್ತಿಯಲ್ಲಿರುವ ಮಿಲ್ಕ್ ಕಾಲೋನಿ ಆಟದ ಮೈದಾನಕ್ಕೆ "ನಾಡಪ್ರಭು ಶ್ರೀ ಕೆಂಪೇಗೌಡ" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಮಾನ್ಯ ಆಯುಕ್ತರು ಕ್ರಮಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಾರ್ಡ್ 66, ಸುಬ್ರಮಣ್ಯನಗರ ವ್ಯಾಪ್ತಿಯಲ್ಲಿರುವ ಮಿಲ್ಕ್ ಕಾಲೋನಿ ಆಟದ ಮೈದಾನಕ್ಕೆ "ನಾಡಪ್ರಭು ಶ್ರೀ ಕೆಂಪೇಗೌಡ" ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಮಾನ್ಯ ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ: 29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 337 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾರಕ್ಕಿ ಮುಖ್ಯ ರಸ್ತೆಯನ್ನು ಏಕಮುಖ ರಸ್ತೆಯನ್ನಾಗಿ ಮಾಡುವುದಕ್ಕಾಗಿ ವಾರ್ಡ್ 178ರ ವ್ಯಾಪ್ತಿಯ ಉತ್ತರಹಳ್ಳಿ ಹೋಬಳಿ, ಸಾರಕ್ಕಿ ಗ್ರಾಮದ ಸರ್ವೆ ನಂ.60/6 ರಲ್ಲಿ ಒಟ್ಟು 3297.94 ಚದರ ಮೀಟರ್‌ಗಳ ಜಾಗವನ್ನು ಭೂ ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಭೂ ಮಾಲೀಕರು ಭೂ ಸ್ವಾಧೀನದ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಭೂ ಸ್ವಾಧೀನದಿಂದ ನಗರ ಪಾಲಿಕೆಗೆ ಸುಮಾರು ರೂ.2.00 ಕೋಟಿಗೂ ಹೆಚ್ಚು ಹೊರೆಯಾಗುವುದು ಕಂಡು ಬರುತ್ತಿದ್ದು, ಭೂ ಮಾಲೀಕರು ನ್ಯಾಯಾಲಯದ ಮುಂದೆ ಹೋಗಿರುವುದರಿಂದ ಪರಿಹಾರ ಮೊತ್ತ ಇನ್ನೂ ಹೆಚ್ಚಾಗುವ ಸಂಭವವಿರುತ್ತದೆ. ಅಲ್ಲದೆ, ನ್ಯಾಯಾಲಯದಲ್ಲಿ ಪ್ರಕರಣವು ಇತ್ಯರ್ಥವಾಗಲು ವಿಳಂಬವಾಗುವುದರಿಂದ ಬಡ್ಡಿ ಮೂಲಕ ಇನ್ನು ಹೆಚ್ಚಿನ ಹಣ ನೀಡಬೇಕಾಗುತ್ತದೆ. ಈ ಹಿಂದೆ ಈ ಪ್ರಸ್ತಾವನೆ ಮಂಡಿಸುವಾಗ ಇಷ್ಟೊಂದು ಭಾರಿ ಪರಿಹಾರ ನೀಡಬೇಕಾಗುವುದೆಂದು ನಿರೀಕ್ಷಿಸಿರಲಿಲ್ಲ ಹಾಗೂ ಸದರಿ ಭೂ-ಸ್ವಾಧೀನ ಪ್ರಕ್ರಿಯೆಗೆ ಆಡಳಿತಾತ್ಮಕ ಮಂಜೂರಾತಿಯು ಸಹ ದೊರೆತಿರುವುದಿಲ್ಲ. ಹಾಲಿ ನಗರ ಪಾಲಿಕೆಯು ಆರ್ಥಿಕ ಸಂಕಷ್ಟದಲ್ಲಿರುವುದರಿಂದ, ಇತರೆ ಅಭಿವೃದ್ಧಿ ಕಾರ್ಯಗಳಿಗೆ ಕುಂಠಿತವಾಗುವುದರಿಂದ, ಭೂ ಸ್ವಾಧೀನಪಡಿಸಿಕೊಳ್ಳುತ್ತಿರುವುದು ಸಮಂಜಸವಾಗಿರುವುದಿಲ್ಲ. ವಾರ್ಡ್ 178ರ ವ್ಯಾಪ್ತಿಯ ಉತ್ತರಹಳ್ಳಿ ಹೋಬಳಿ, ಸಾರಕ್ಕಿ ಗ್ರಾಮದ ಸರ್ವೆ ನಂ.60/6 ರಲ್ಲಿ ಒಟ್ಟು 3297.94 ಚದರ ಮೀಟರ್‌ಗಳ ಜಾಗವನ್ನು ಭೂ ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆಯನ್ನು ಕೈಬಿಡಲು ಆಯುಕ್ತರು ಕ್ರಮ ಕೈಗೊಳ್ಳುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾರಕ್ಕಿ ಮುಖ್ಯ ರಸ್ತೆಯನ್ನು ಏಕಮುಖ ರಸ್ತೆಯನ್ನಾಗಿ ಮಾಡುವುದಕ್ಕಾಗಿ ವಾರ್ಡ್ 178ರ ವ್ಯಾಪ್ತಿಯ ಉತ್ತರಹಳ್ಳಿ ಹೋಬಳಿ, ಸಾರಕ್ಕಿ ಗ್ರಾಮದ ಸರ್ವೆ ನಂ.60/6 ರಲ್ಲಿ ಒಟ್ಟು 3297.94 ಚದರ ಮೀಟರ್‌ಗಳ ಜಾಗವನ್ನು ಭೂ ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಭೂ ಮಾಲೀಕರು ಭೂ ಸ್ವಾಧೀನದ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಭೂ ಸ್ವಾಧೀನದಿಂದ ನಗರ ಪಾಲಿಕೆಗೆ ಸುಮಾರು ರೂ.2.00 ಕೋಟಿಗೂ ಹೆಚ್ಚು ಹೊರೆಯಾಗುವುದು ಕಂಡು ಬರುತ್ತಿದ್ದು, ಭೂ ಮಾಲೀಕರು

.........................2

ನ್ಯಾಯಾಲಯದ ಮುಂದೆ ಹೋಗಿರುವುದರಿಂದ ಪರಿಹಾರ ಮೊತ್ತ ಇನ್ನೂ ಹೆಚ್ಚಾಗುವ ಸಂಭವವಿರುತ್ತದೆ. ಅಲ್ಲದೆ, ನ್ಯಾಯಾಲಯದಲ್ಲಿ ಪ್ರಕರಣವು ಇತ್ಯರ್ಥವಾಗಲು ವಿಳಂಬವಾಗುವುದರಿಂದ ಬಡ್ಡಿ ಮೂಲಕ ಇನ್ನು ಹೆಚ್ಚಿನ ಹಣ ನೀಡಬೇಕಾಗುತ್ತದೆ. ಈ ಹಿಂದೆ ಈ ಪ್ರಸ್ತಾವನೆ ಮಂಡಿಸುವಾಗ ಇಷ್ಟೊಂದು ಭಾರಿ ಪರಿಹಾರ ನೀಡಬೇಕಾಗುವುದೆಂದು ನಿರೀಕ್ಷಿಸಿರಲಿಲ್ಲ ಹಾಗೂ ಸದರಿ ಭೂ-ಸ್ವಾಧೀನ ಪ್ರಕ್ರಿಯೆಗೆ ಆಡಳಿತಾತ್ಮಕ ಮಂಜೂರಾತಿಯು ಸಹ ದೊರೆತಿರುವುದಿಲ್ಲ. ಹಾಲಿ ನಗರ ಪಾಲಿಕೆಯು ಆರ್ಥಿಕ ಸಂಕಷ್ಟದಲ್ಲಿರುವುದರಿಂದ, ಇತರೆ ಅಭಿವೃದ್ಧಿ ಕಾರ್ಯಗಳಿಗೆ ಕುಂಠಿತವಾಗುವುದರಿಂದ, ಭೂ ಸ್ವಾಧೀನಪಡಿಸಿಕೊಳ್ಳುತ್ತಿರುವುದು ಸಮಂಜಸವಾಗಿರುವುದಿಲ್ಲ. ವಾರ್ಡ್ 178ರ ವ್ಯಾಪ್ತಿಯ ಉತ್ತರಹಳ್ಳಿ ಹೋಬಳಿ, ಸಾರಕ್ಕಿ ಗ್ರಾಮದ ಸರ್ವೆ ನಂ.60/6 ರಲ್ಲಿ ಒಟ್ಟು 3297.94 ಚದರ ಮೀಟರ್‌ಗಳ ಜಾಗವನ್ನು ಭೂ ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆಯನ್ನು ಕೈಬಿಡಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

## ವಿಷಯದ ಸಂಖ್ಯೆ : 339 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನವದೆಹಲಿಯಲ್ಲಿ ಅತ್ಯಾಚಾರದಿಂದಾಗಿ ನಿರ್ಭಯ ಎಂಬ ಮಹಿಳೆ ಇಂದು ನಿಧನ ಹೊಂದಿರುತ್ತಾರೆ. ಈ ವಿಷಯವನ್ನು ಈ ಸಭೆಗೆ ತಿಳಿಸಲು ವಿಷಾದವಾಗುತ್ತದೆ. ದಿವಂಗತರ ಆತ್ಮಕ್ಕೆ ಚಿರಶಾಂತಿಯು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನವದೆಹಲಿಯಲ್ಲಿ ಅತ್ಯಾಚಾರದಿಂದಾಗಿ ನಿರ್ಭಯ ಎಂಬ ಮಹಿಳೆ ಇಂದು ನಿಧನ ಹೊಂದಿರುತ್ತಾರೆ. ಈ ವಿಷಯವನ್ನು ಈ ಸಭೆಗೆ ತಿಳಿಸಲು ವಿಷಾದವಾಗುತ್ತದೆ. ದಿವಂಗತರ ಆತ್ಮಕ್ಕೆ ಚಿರಶಾಂತಿಯು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಈ ಸಭೆಯು ಪ್ರಾರ್ಥಿಸುತ್ತದೆ".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಖಂಡನಾ ನಿರ್ಣಯ

## ವಿಷಯದ ಸಂಖ್ಯೆ : 340 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಿರ್ಭಯ ಎಂಬ ಮಹಿಳೆಯ ಮೇಲೆ ನವದೆಹಲಿಯಲ್ಲಿ ಅತ್ಯಾಚಾರವಾಗಿ, ಆಕೆ ಇಂದು ನಿಧನ ಹೊಂದಿರುತ್ತಾರೆ. ಈ ಘಟನೆಯನ್ನು ಸಭೆಯು ಖಂಡಿಸುತ್ತದೆ. ಈ ಕೃತ್ಯದಲ್ಲಿ ಭಾಗಿಯಾದ ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಬೇಕೆಂದು ಈ ಸಭೆಯು ಆಗ್ರಹಪಡಿಸುತ್ತದೆ.

ಭಾರತ ದೇಶದ ಹಲವಾರು ಭಾಗಗಳಲ್ಲಿ ಈ ರೀತಿ ದೌರ್ಜನ್ಯಗಳು ಮಹಿಳೆಯ ಮೇಲೆ ಆಗುತ್ತಿದ್ದು, ಇಂತಹ ಕೃತ್ಯ ಎಸಗಿದವರ ಮೇಲೆ ಕಾನೂನಿನಲ್ಲಿ ತಿದ್ದುಪಡಿ ತಂದು ಕಠಿಣ ಶಿಕ್ಷೆಯನ್ನು ನೀಡುವ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಿರ್ಭಯ ಎಂಬ ಮಹಿಳೆಯ ಮೇಲೆ ನವದೆಹಲಿಯಲ್ಲಿ ಅತ್ಯಾಚಾರವಾಗಿ, ಆಕೆ ಇಂದು ನಿಧನ ಹೊಂದಿರುತ್ತಾರೆ. ಈ ಘಟನೆಯನ್ನು ಸಭೆಯು ಖಂಡಿಸುತ್ತದೆ. ಈ ಕೃತ್ಯದಲ್ಲಿ ಭಾಗಿಯಾದ ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಬೇಕೆಂದು ಈ ಸಭೆಯು ಆಗ್ರಹಪಡಿಸುತ್ತದೆ.

ಭಾರತ ದೇಶದ ಹಲವಾರು ಭಾಗಗಳಲ್ಲಿ ಈ ರೀತಿ ದೌರ್ಜನ್ಯಗಳು ಮಹಿಳೆಯ ಮೇಲೆ ಆಗುತ್ತಿದ್ದು, ಇಂತಹ ಕೃತ್ಯ ಎಸಗಿದವರ ಮೇಲೆ ಕಾನೂನಿನಲ್ಲಿ ತಿದ್ದುಪಡಿ ತಂದು ಕಠಿಣ ಶಿಕ್ಷೆಯನ್ನು ನೀಡುವ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಬೇಕೆಂದು ಈ ಸಭೆಯು ಆಗ್ರಹಪಡಿಸುತ್ತದೆ".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:28-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಶೇಷ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

## ವಿಷಯದ ಸಂಖ್ಯೆ : 338 / 2012-13

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಭಾರತದ ಮಾಜಿ ಪ್ರಧಾನಿಗಳಾದ ಶ್ರೀ. ಇಂದ್ರಕುಮಾರ್ ಗುಜ್ರಾಲ್ ರವರು ದಿನಾಂಕ:30-11-2012 ರಂದು ನಿಧನ ಹೊಂದಿರುತ್ತಾರೆ. ಈ ವಿಷಯವನ್ನು ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

ಶ್ರೀ. ಐ.ಕೆ.ಗುಜ್ರಾಲ್‌ರವರು 1919 ರಲ್ಲಿ ಪಂಜಾಬ್‌ನಲ್ಲಿ ಜನಿಸಿದ್ದರು. ಭಾರತದ 12ನೇ ಪ್ರಧಾನಿಯಾಗಿ ಅಧಿಕಾರ ನಿರ್ವಹಿಸಿದ್ದರು. ಇವರ ನಿಧನದಿಂದ ದೇಶಕ್ಕೆ ಅಪಾರ ನಷ್ಟವಾಗಿದೆ.

ದಿವಂಗತರು ಸಲ್ಲಿಸಿರುವ ಸೇವೆಯನ್ನು ಇಂದು ನಾವೆಲ್ಲರೂ ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿಯು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಭಾರತದ ಮಾಜಿ ಪ್ರಧಾನಿಗಳಾದ ಶ್ರೀ. ಇಂದ್ರಕುಮಾರ್ ಗುಜ್ರಾಲ್ ರವರು ದಿನಾಂಕ:30-11-2012 ರಂದು ನಿಧನ ಹೊಂದಿರುತ್ತಾರೆ. ಈ ವಿಷಯವನ್ನು ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

ಶ್ರೀ. ಐ.ಕೆ.ಗುಜ್ರಾಲ್‌ರವರು 1919 ರಲ್ಲಿ ಪಂಜಾಬ್‌ನಲ್ಲಿ ಜನಿಸಿದ್ದರು. ಭಾರತದ 12ನೇ ಪ್ರಧಾನಿಯಾಗಿ ಅಧಿಕಾರ ನಿರ್ವಹಿಸಿದ್ದರು. ಇವರ ನಿಧನದಿಂದ ದೇಶಕ್ಕೆ ಅಪಾರ ನಷ್ಟವಾಗಿದೆ.

ದಿವಂಗತರು ಸಲ್ಲಿಸಿರುವ ಸೇವೆಯನ್ನು ಇಂದು ನಾವೆಲ್ಲರೂ ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿಯು ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದು:ಖವನ್ನು ಭರಿಸುವ ಶಕ್ತಿ ದೊರೆಯಲೆಂದು ಭಗವಂತನಲ್ಲಿ ಈ ಸಭೆಯು ಪ್ರಾರ್ಥಿಸುತ್ತದೆ".

(ಡಿ.ವೆಂಕಟೇಶ್ ಮೂರ್ತಿ)
ಮಹಾಪೌರರು

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಕಾಮಗಾರಿಗೆ ಮೆ॥ ಕೆ.ವಿ.ಆರ್ ಕನ್ಸ್ಟ್ರಕ್ಷನ್ಸ್ ರವರು ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾಗಿದ್ದು, ಇವರು ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತ ರೂ.2,95,78,740/- (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.44.39 ರಷ್ಟು ಹೆಚ್ಚುವರಿ ಹಾಗೂ ಪ್ರಸಕ್ತ ಸಾಲಿನ ಅಂದರೆ 2011-12ನೇ ಸಾಲಿನ ದರಪಟ್ಟಿಯ ದರಗಳಂತೆ ಪರಿಷ್ಕರಿಸಲಾದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.10.67 ರಷ್ಟು ಹೆಚ್ಚುವರಿ) ಗಳಿಗೆ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:11-05-2012 ರ ಟಿಪ್ಪಣಿ ಹಾಗೂ ದಿನಾಂಕ:08-06-2012 ರಂದು ಉದ್ದೇಶಿತ ಕಾಮಗಾರಿಯ ಸ್ಥಳ ಪರಿಶೀಲನೆಯನ್ನು ನಡೆಸಲಾಗಿರುತ್ತದೆ. ಇಂತಹ ಕಠಿಣ/ಕ್ಲಿಷ್ಟ ಸ್ವರೂಪದ ಕಾಮಗಾರಿಗಳನ್ನು ನಿರ್ವಹಿಸಲು ಅಗತ್ಯವಿರುವ ಮೂಲ ಸೌಕರ್ಯ/ತಾಂತ್ರಿಕ ಪರಿಣಿತಿಯು ಹಾಲಿ ಗುತ್ತಿಗೆದಾರರಲ್ಲಿ ಇಲ್ಲವೆಂಬುದಾಗಿ ಸಮಿತಿಯು ಅಭಿಪ್ರಾಯಿಸಿರುತ್ತದೆ. ಆದಕಾರಣ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಿ, ಉದ್ದೇಶಿತ ಕಾಮಗಾರಿಯನ್ನು 4G ಅಡಿಯಲ್ಲಿ ಕೈಗೆತ್ತಿಕೊಂಡು ತ್ವರಿತವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮವಹಿಸುವುದೆಂದು ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-07-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:11-05-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ:11-05-2012ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

**(ಡಿ. ವೆಂಕಟೇಶ್ ಮೂರ್ತಿ)**
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 23 (257) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಹೆಬ್ಬಾಳ ಮುಖ್ಯ ಕಣಿವೆ H-306 ಅಂಬೇಡ್ಕರ್ ಮೆಡಿಕಲ್ ಕಾಲೇಜ್ ಹತ್ತಿರ ಹರಿಯುತ್ತಿದ್ದು, ಪ್ರತಿ ಮಳೆಗಾಲದಲ್ಲೂ ಸದರಿ ಪ್ರದೇಶದಲ್ಲಿ ನೀರು ತುಂಬಿ ಹರಿದು ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಕಣಿವೆಯನ್ನು ಅಗಲ ಹಾಗೂ ಆಳಗೊಳಿಸಿ **RCC 'U' shape drain and culvert** ನಿರ್ಮಿಸಲು ಅಂದಾಜನ್ನು 2011-12ನೇ ಸಾಲಿನ ಲೋಕೋಪಯೋಗಿ ಮತ್ತು ಒಳನಾಡು ಸಾರಿಗೆ, ಬೆಂಗಳೂರು ವೃತ್ತದ ದರಪಟ್ಟಿಯ ದರಗಳನ್ನು ಪರಿಗಣಿಸಿ ರೂ.260.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಕರೆಯಲಾಯಿತು.

ಈ ಕಾಮಗಾರಿಗೆ ದಿನಾಂಕ:12-04-2012 ರಂದು ಕರ್ನಾಟಕ ಸರ್ಕಾರದ **E-Procurement portal** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ್‌ಗೆ ಒಬ್ಬರೇ ಬಿಡ್ಡುದಾರರು ಭಾಗವಹಿಸಿದ್ದರಿಂದ ಇವರ ಬಿಡ್ಡನ್ನು ತಿರಸ್ಕರಿಸಿ ದಿನಾಂಕ:21-05-2012 ರಂದು 2ನೇ ಬಾರಿ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 01-06-2012 ರಂದು ಏಕೈಕ ಗುತ್ತಿಗೆದಾರರಾದ ಶ್ರೀ. ಕೊಂಡಲು ಸುಬ್ರಮಣ್ಯ ರಾಜು ಮೆ॥ ಡೆಕನ್ ಇಂಜಿನಿಯರ್ಸ್ ರವರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕ ಬಿಡ್ ಪುರಸ್ಕರಿಸಲ್ಪಟ್ಟಿದೆ.

ಇವರು ಸಲ್ಲಿಸಿದ್ದ ಆರ್ಥಿಕ ಬಿಡ್ ಅನ್ನು ದಿನಾಂಕ:21-06-2012 ರಂದು ತೆರೆಯಲಾಗಿದ್ದು, ಕೆಳಕಂಡಂತೆ ಒಟ್ಟಾರೆ ಮೊತ್ತವನ್ನು ನಮೂದಿಸಿರುತ್ತಾರೆ.

| ಕ್ರ ಸಂ. | ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ವಿವರ | ನಮೂದಿಸಿರುವ ಒಟ್ಟಾರೆ ಮೊತ್ತ ರೂ.ಗಳಲ್ಲಿ | ಷರಾ |
|---|---|---|---|
| 1 | ಶ್ರೀ. ಕೊಂಡಲು ಸುಬ್ರಮಣ್ಯ ರಾಜು ಮೆ॥ ಡೆಕನ್ ಇಂಜಿನಿಯರ್ಸ್ | ರೂ.2,59,68,861/- | ಕಡಿಮೆ ಬಿಡ್ಡುದಾರರು |

ಏಕೈಕ ಬಿಡ್ಡುದಾರರು ನಮೂದಿಸಿರುವ ಟೆಂಡರ್ ದರಗಳನ್ನು ಅಂದಾಜು ಪಟ್ಟಿಯ ದರಗಳೊಂದಿಗೆ ಹೋಲಿಸಿದಾಗ ವಿವರಗಳು ಕೆಳಕಂಡಂತೆ ಇರುತ್ತದೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2011-12ನೇ ಸಾಲಿನ ದರಪಟ್ಟಿಯಂತೆ) | ರೂ.2,38,86,123.5/- |
| 2 | ಪ್ರಸಕ್ತ ಸಾಲಿನ ಅಂದರೆ ಟೆಂಡರ್ ಸಲ್ಲಿಸಿದ ದಿನಾಂಕ:18-04-2012 ರಂದು ಚಾಲ್ತಿಯಲ್ಲಿದ್ದ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿನ ಮೊತ್ತ | ರೂ.2,65,89,961/- |
| 3 | ಏಕೈಕ ಬಿಡ್ಡುದಾರರಾದ ಶ್ರೀ. ಕೊಂಡಲು ಸುಬ್ರಮಣ್ಯ ರಾಜು ಮೆ॥ ಡೆಕನ್ ಇಂಜಿನಿಯರ್ಸ್ ನಮೂದಿಸಿರುವ ಮೊತ್ತ | ರೂ.2,59,68,861/- |
| 4 | ಟೆಂಡರಿಗಿಟ್ಟ ವೆಚ್ಚದ ಮೇಲೆ ಶೇಕಡಾವಾರು ಹೆಚ್ಚುವರಿ / ಕಡಿಮೆ | 8.72 ಹೆಚ್ಚುವರಿ |
| 5 | ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತ ಶೇಕಡಾವಾರು ಹೆಚ್ಚುವರಿ / ಕಡಿಮೆ | 2.34 ಕಡಿಮೆ |

..........................2

ಶ್ರೀ. ಕೊಂಡಲು ಸುಬ್ರಮಣ್ಯ ರಾಜು ಮೆ॥ ಡೆಕನ್ ಇಂಜಿನಿಯರ್ಸ್‌ರವರು ಟೆಂಡರ್‌ನಲ್ಲಿ ನಮೂದಿಸಿರುವ ಒಟ್ಟಾರೆ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.8.72 ರಷ್ಟು ಹೆಚ್ಚುವರಿ ಇದ್ದು, ಪ್ರಸಕ್ತ ಸಾಲಿನ ಅಂದರೆ ಸಿಮೆಂಟ್ ಮತ್ತು ಉಕ್ಕಿನ ಪ್ರಸಕ್ತ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.2.34 ಕಡಿಮೆ ಆಗಿರುವುದು ಕಂಡುಬಂದಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ. ಕೊಂಡಲು ಸುಬ್ರಮಣ್ಯ ರಾಜು ಮೆ॥ ಡೆಕನ್ ಇಂಜಿನಿಯರ್ಸ್ ರವರು ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ದುದಾರರಾಗಿದ್ದು, ಇವರು ನಮೂದಿಸಿರುವ ಟೆಂಡರ್ ಮೊತ್ತ ರೂ.2,59,68,861/- (ಪ್ರಸಕ್ತ ಸಾಲಿನ ದರಗಳಿಗೆ ಹೋಲಿಸಿದಾಗ ಶೇ.2.34 ರಷ್ಟು ಕಡಿಮೆ) ಗಳ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:20-07-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:16-08-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:16-08-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 16-08-2012ರ ನಿರ್ಣಯವನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 24 (299) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಲ್ಲೇಶ್ವರಂ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ:45ರ ವ್ಯಾಪ್ತಿಯಲ್ಲಿ ಬರುವ ಮಲ್ಲೇಶ್ವರಂ ಆಟದ ಮೈದಾನದ ಅಭಿವೃದ್ಧಿ ಕಾಮಗಾರಿಗಾಗಿ ರೂ.261.00 ಲಕ್ಷಗಳಿಗೆ ಷೆಡ್ಯೂಲ್ ದರ 2010-11ರ ಆಧಾರದ ಮೇರೆಗೆ ಮಂಜೂರಾಗಿರುತ್ತದೆ. ಈ ಅಂದಾಜು ಪಟ್ಟಿಯು 2010-11ನೇ ಸಾಲಿನ ಆಯವ್ಯಯ ಪುಟ ಸಂಖ್ಯೆ:110 ಪಿ 2141ರ ಅಡಿಯಲ್ಲಿ ಮೀಸಲಿಟ್ಟಿರುವ 489.044 ಲಕ್ಷ ಮೊತ್ತದಲ್ಲಿ ಭರಿಸಲು ಆದೇಶಿಸಲಾಗಿದ್ದು, ಸದರಿ ಕಾಮಗಾರಿಗೆ ಜಾಬ್ ಕೋಡ್ ಪಡೆಯಲಾಗಿರುತ್ತದೆ. ಜಂಟಿ ಆಯುಕ್ತರು (ಪಶ್ಚಿಮ) ರವರು ದಿನಾಂಕ:28-05-2011 ರಂದು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಮುಖ್ಯ ಅಭಿಯಂತರರು (ಪಶ್ಚಿಮ) ರವರು ದಿನಾಂಕ:10-06-2011 ರಂದು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಅಪರ ಆಯುಕ್ತರು (ಪಶ್ಚಿಮ) ರವರ ಆದೇಶದ ಅನ್ವಯ ಕಾರ್ಯಪಾಲಕ ಅಭಿಯಂತರರು (ಯೋಜನೆ-ಪಶ್ಚಿಮ) ರವರು ದಿನಾಂಕ:24-07-2012 ರಂದು ಇ-ಪ್ರೊಕ್ಯೂರ್‌ಮೆಂಟ್ (ಪೋರ್ಟಲ್) ಅಡಿಯಲ್ಲಿ ಟೆಂಡರ್ ಅನ್ನು (2ನೇ ಕರೆ) ಕರೆದಿರುತ್ತಾರೆ. ಈ ಹಿಂದೆ ದಿನಾಂಕ:20-04-2012 ರಂದು ಮೊದಲನೇ ಕರೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆದಿದ್ದು, ಟೆಂಡರ್ ತಿರಸ್ಕೃತಗೊಂಡಿರುತ್ತದೆ. ಟೆಂಡರ್ ಪ್ರಕಟಣೆಯನ್ನು ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಟೆಂಡರ್ ಬುಲೆಟಿನ್‌ನ ಅಧಿಕಾರಿಗಳಿಗೆ ಪತ್ರವನ್ನು ಬರೆಯಲಾಗಿದ್ದು, 2 ಪ್ರಮುಖ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲು ಸಾರ್ವಜನಿಕ ಸಂಪರ್ಕಾಧಿಕಾರಿಗಳಿಗೆ ಪತ್ರವನ್ನು ಬರೆಯಲಾಗಿದೆ. ಟೆಂಡರ್ ದಾಖಲಾತಿಗಳನ್ನು ಸ್ವೀಕರಿಸಲು ದಿನಾಂಕ:20-08-2012 ರಂದು ಸಂಜೆ 4 ಘಂಟೆಯವರೆಗೆ ಕಡೆಯ ದಿನಾಂಕಗಳೆಂದು ನಿಗಧಿಪಡಿಸಲಾಗಿರುತ್ತದೆ.

ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ದಿನಾಂಕ:24-08-2012 ರಂದು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ 3 ಜನ ಬಿಡ್‌ದಾರರು ಪಾಲ್ಗೊಂಡಿದ್ದು, ಅದರಲ್ಲಿ ಶ್ರೀ. ದಿಲೇರ್ ಸಿಂಗ್ ರವರು ಇಎಂಡಿ ತಿರಸ್ಕೃತಗೊಂಡಿರುತ್ತದೆ. ಉಳಿದಂತೆ ಇಬ್ಬರು ಬಿಡ್‌ದಾರರಾದ ಶ್ರೀ. ಭಾರತ್ ರಾಮ್ನಿಕ್ ಮಸಾಮ್ ಆರ್ಕಿಟೆಕ್ಚರರ್ ಸಿಸ್ಟಮ್ ಪ್ರೈವೇಟ್ ಲಿಮಿಟೆಡ್ ರವರ ಹಾಗೂ ಶ್ರೀ. ವಿಜಯ್‌ಕುಮಾರ್ ಟಿ. ರವರ ಇಎಂಡಿಗಳ ಸ್ವೀಕೃತಗೊಂಡಿದ್ದು, ತಾಂತ್ರಿಕ ಬಿಡ್‌ನಲ್ಲಿ ಕೇವಲ ಶ್ರೀ. ವಿಜಯ್‌ಕುಮಾರ್.ಟಿ. ರವರು ಅರ್ಹಗೊಂಡಿರುತ್ತಾರೆ. ದಿನಾಂಕ:30-08-2012 ರಂದು ಸಂಜೆ 5:55ಕ್ಕೆ ಆರ್ಥಿಕ ಬಿಡ್ ಅನ್ನು ತೆರೆಯಲಾಗಿ, ಗುತ್ತಿಗೆದಾರರಾದ ಮೆ॥ ಹೊಂಬಾಳೆ ಇನ್‌ಫ್ರಾಸ್ಟ್ರಕ್ಚರ್ ಪ್ರಾಜೆಕ್ಟ್ ಎಲ್.ಎಲ್.ಪಿ (ಶ್ರೀ. ವಿಜಯಕುಮಾರ್.ಟಿ) ರವರು ನಮೂದಿಸಿರುವ ಮೊತ್ತವು ರೂ.2,82,24,160.44 ಗಳಾಗಿದ್ದು, ದಿನಾಂಕ:31-08-2012 ರಂದು ಬಿಡ್‌ದಾರರ ಜೊತೆ ಸಂಧಾನ ಮಾಡಲಾಗಿ, ನಂತರ ಬಿಡ್‌ದಾರರು ರೂ.2,79,79,443.73 ಗಳನ್ನು ನಮೂದಿಸಿದ್ದು, ಇದನ್ನು 2010-11ನೇ ಸಾಲಿನ ಅನುಮೋದಿತ ದರ ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 10.26% ರಷ್ಟು ಹಾಗೂ 2012-13ನೇ ಸಾಲಿನ ಪ್ರಸ್ತುತ ದರ ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 4.75% ರಷ್ಟು ಹೆಚ್ಚಾಗಿದ್ದು, ವಿವರಗಳು ಈ ಕೆಳಕಂಡಂತಿವೆ;

| Sl. No. | Name of Agency | Tender Cost in Rs. as per 2010-11 SR | Quoted rates in Rs. | Tender premium % compared with the SR 2010-11 | Tender premium % compared with the SR 2012-13 | Sta-tus |
|---|---|---|---|---|---|---|
| 1 | M/s. Hombale Infrastructure Project LLP (Mr. Vijaykumar.T) | 2,53,76,471.12 | 2,79,79,443.73 | 10.26% above | 4.75% above | |

..........................2

ಈ ಕಾಮಗಾರಿಗೆ ದರಗಳನ್ನು ನಮೂದಿಸಿರುವ ಮೆ॥ ಹೊಂಬಾಳೆ ಇನ್‌ಫ್ರಾಸ್ಟ್ರಕ್ಚರ್ ಪ್ರಾಜೆಕ್ಟ್ ಎಲ್.ಎಲ್.ಪಿ. ಶ್ರೀ. ವಿಜಯಕುಮಾರ್.ಟಿ. ರವರು ರೂ.2,79,79,443.73 **(4.75% above the SR of 2012-13)** ಗಳಿಗೆ ಕಾಮಗಾರಿಯನ್ನು ನಿರ್ವಹಿಸಲು ಕೋರಿರುತ್ತಾರೆ.

ಇದು ಟೆನ್ಸೈಲ್ ಸಪೋರ್ಟಿಂಗ್ ಸ್ಟ್ರಕ್ಚರ್ ಕ್ಯಾನೋಪಿ ಕಾಮಗಾರಿಯಾದ್ದರಿಂದ ಸಾಮಾನ್ಯ ಗುತ್ತಿಗೆದಾರರು ಕೆಲಸ ನಿರ್ವಹಿಸಲು ಆಗುವುದಿಲ್ಲ. ಇದನ್ನು ವಿಶಿಷ್ಟ ಗುತ್ತಿಗೆದಾರರೆ ಕೆಲಸ ನಿರ್ವಹಿಸಬೇಕಾಗುತ್ತದೆ. ಅದಕ್ಕೆ ತಕ್ಕಂತಯೇ ಮೆ॥ ಹೊಂಬಾಳೆ ಇನ್‌ಫ್ರಾಸ್ಟ್ರಕ್ಚರ್ ಪ್ರಾಜೆಕ್ಟ್ ಎಲ್.ಎಲ್.ಪಿ. ಶ್ರೀ. ವಿಜಯಕುಮಾರ್.ಟಿ. ರವರು ಟೆಂಡರ್‌ನಲ್ಲಿ ಅರ್ಹಗೊಂಡಿರುತ್ತಾರೆ ಹಾಗೂ ಕೆ.ಟಿ.ಪಿ.ಪಿ. ಕಾಯ್ದೆಯ ಅನುಸಾರ ಟೆಂಡರ್ ಪರಿಶೀಲನಾ ಸಮಿತಿಯು ಪರಿಶೀಲಿಸಿ ಟೆಂಡರ್ ಅನ್ನು ಅನುಮೋದಿಸಿದೆ.

ಆದ್ದರಿಂದ ಮೆ॥ ಹೊಂಬಾಳೆ ಇನ್‌ಫ್ರಾಸ್ಟ್ರಕ್ಚರ್ ಪ್ರಾಜೆಕ್ಟ್ ಎಲ್.ಎಲ್.ಪಿ. ಶ್ರೀ. ವಿಜಯಕುಮಾರ್.ಟಿ. ರವರಿಗೆ ಗುತ್ತಿಗೆ ಮೊತ್ತವಾದ ರೂ.2,79,79,443.73 ಗಳಿಗೆ ಈ ಕಾಮಗಾರಿಯನ್ನು ವಹಿಸಲು ಟೆಂಡರ್ ಅನುಮೋದಿಸಲಾಗಿದೆ.

ಪ್ರಸ್ತಾಪಿಸಿರುವ ಕಾಮಗಾರಿಗೆ ಸಂಬಂಧಿಸಿದಂತೆ, ಆರ್ಥಿಕ ಸಂಪನ್ಮೂಲಗಳ ಲಭ್ಯತೆಯ ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ;

| | | |
|---|---|---|
| 2010-11 ಪುಟ 110 ಮತ್ತು 2141 **Spill over works FBAS** ನಂತೆ ಖರ್ಚು | = | ರೂ.489.44 ಲಕ್ಷ |
| ಪ್ರಸ್ತಾಪಿಸಿರುವ ಕಾಮಗಾರಿಗಳಿಗೆ 2009-10ನೇ ಸಾಲಿನಲ್ಲಿ ನೀಡಲಾದ **Work code amount** | = | ರೂ.150.00 ಲಕ್ಷ |
| **ಬಾಕಿ** | = | **ರೂ.339.44 ಲಕ್ಷ** |

ಈ ಅನುದಾನದಲ್ಲಿ (2) ಕಾಮಗಾರಿಗಳ ಮೊತ್ತ ರೂ.43.00 ಲಕ್ಷ ಹಾಗೂ ರೂ.261.00 ಲಕ್ಷಗಳ ಒಟ್ಟು ಮೊತ್ತ ರೂ.304.00 ಲಕ್ಷಗಳಿಗೆ ಜಾಬ್ ಕೋಡ್ ಪಡೆಯಲಾಗಿರುತ್ತದೆ. ಈ ಕಾಮಗಾರಿಯನ್ನು ಸ್ಪಿಲ್ ಓವರ್ ವರ್ಕ್ಸ್ 2012-13 ರಲ್ಲಿ ಸಹ ಸೇರಿಸಿದ್ದು, ಅನುದಾನ ಲಭ್ಯವಿರುತ್ತದೆ. ಆಡಳಿತಾತ್ಮಕ ಅನುಮೋದನೆ ಸ್ಥಿರೀಕರಣವನ್ನು ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ ದಿನಾಂಕ:22-08-2011 ರಂದು ಅನುಮೋದಿಸಿರುತ್ತಾರೆ. ಆದುದರಿಂದ ಕನಿಷ್ಠ ಟೆಂಡರ್‌ದಾರರಾದ ಮೆ॥ ಹೊಂಬಾಳೆ ಇನ್‌ಫ್ರಾಸ್ಟ್ರಕ್ಚರ್ ಪ್ರಾಜೆಕ್ಟ್ ಎಲ್.ಎಲ್.ಪಿ. ಶ್ರೀ. ವಿಜಯಕುಮಾರ್.ಟಿ. ರವರಿಗೆ ಗುತ್ತಿಗೆ ಮೊತ್ತವಾದ ರೂ.2,79,79,443.73 **(4.75% above the SR 2012-13)** ಗಳ ಟೆಂಡರ್ ಬಗ್ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:22-09-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-10-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:11-10-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 11–10–2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 25 (303) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರಿಂದ 2010-11ನೇ ಸಾಲಿನಲ್ಲಿ ಅನುದಾನದಲ್ಲಿ ಅನುಮೋದನೆಗೊಂಡ **Widening of Road from Bhadrappa Layout Signal to Kodigehalli Circle, Chainge 0.00 Mtr to 1500.00 Mtr, in Ward No.08** ಕಾಮಗಾರಿಯನ್ನು ರೂ.300.00 ಲಕ್ಷದೊಳಗಾಗಿ ಕೈಗೊಳ್ಳಲು ಕಾಮಗಾರಿಗೆ ಮಾನ್ಯ ಆಯುಕ್ತರು ಒಪ್ಪಿಗೆ ಸೂಚಿಸಿರುತ್ತಾರೆ.

ಸದರಿ ಕಾಮಗಾರಿಗೆ, ಕಾಮಗಾರಿ ಸಂಕೇತ ನೀಡಲಾಗಿದ್ದು, ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ:23-05-2012 ರಂದು ಹಾಗೂ ತಾಂತ್ರಿಕ ಅನುಮೋದನೆಯನ್ನು ದಿನಾಂಕ:28-05-2012 ರಂದು ನೀಡಲಾಗಿರುತ್ತದೆ.

ದಿನಾಂಕ:07-06-2012 ರಂದು ಇ-ಪ್ರಕ್ಯೂರ್‌ಮೆಂಟ್ ಕರೆಯಲಾಗಿದ್ದು, ಸದರಿ ಕಾಮಗಾರಿಗೆ 2011-12ರ ಎಸ್.ಆರ್ ದರ ಸೂಚಿಯಂತೆ ಅನುಮೋದನೆಗೊಂಡ ಮೊತ್ತ ರೂ.2,90,47,690.06/- ಗಳಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ 3 ಜನ ಗುತ್ತಿಗೆದಾರರಾದ (1) ಶ್ರೀ. ಸಿ.ಜಿ.ಚಂದ್ರಪ್ಪ (2) ಶ್ರೀ. ಎಂ.ಎಸ್.ವೆಂಕಟೇಶ್ (3) ಶ್ರೀ. ಬೇಬಿ ಜೋಸೆಫ್ (ಪಿ.ಜೆ.ಬಿ ಇಂಜಿನಿಯರ್ಸ್ ಪ್ರೈ.ಲಿ.,) ರವರು ಭಾಗವಹಿಸಿದ್ದು, ಇದರಲ್ಲಿ ಶ್ರೀ ಬೇಬಿ ಜೋಸೆಫ್ (ಪಿ.ಜೆ.ಬಿ. ಇಂಜಿನಿಯರ್ಸ್ ಪ್ರೈ.ಲಿ.,) ರವರು ರೂ.2,89,99,919.88/- ಗಳನ್ನು ನಮೂದಿಸಿದ್ದು, ಇದು ಶೇಕಡ. -0.16% ರಷ್ಟು (ಕಡಿಮೆ) ಮೊತ್ತವಾಗಿದ್ದು, ಕಾಮಗಾರಿಯನ್ನು ನಿರ್ವಹಿಸಲು ಯಶಸ್ವಿ ಬಿಡ್‌ದಾರರಾಗಿರುತ್ತಾರೆ.

ಈ ಕೆಳಕಂಡಂತೆ ಅನುಮೋದನೆ ಅಗತ್ಯವಾಗಿರುತ್ತದೆ.

1. ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಮೊತ್ತ ರೂ.300.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರೀಕರಿಸಲು ಅನುಮೋದನೆ.
3. ಸದರಿ ಕಾಮಗಾರಿಗೆ ಕನಿಷ್ಠ ದರ ನಮೂದಿಸಿದ ಗುತ್ತಿಗೆದಾರರಾದ ಶ್ರೀ. ಬೇಬಿ ಜೋಸೆಫ್ (ಪಿ.ಜೆ.ಬಿ ಇಂಜಿನಿಯರ್ಸ್ ಪ್ರೈ. ಲಿ.,) ರವರು ನಮೂದಿಸಿರುವ ರೂ.2,89,99,919.88/-ಗಳಾಗಿದ್ದು, ಈ ಮೊತ್ತವು ಟೆಂಡರ್ ದರಗಳಿಗಿಂತ ಶೇಕಡ -0.16% ರಷ್ಟು ಕಡಿಮೆ ನಮೂದಿಸಿದ್ದು, ಇವರಿಗೆ ಕಾರ್ಯಾದೇಶ ನೀಡಲು ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:08-11-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-11-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:24-11-2012ರ ನಿರ್ಣಯವನ್ನು ಒಪ್ಪುವುದು".

..........................2

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 24–11–2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 28 (319) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಜರಾಜೇಶ್ವರಿ ನಗರ ವಲಯದ ರಾಜರಾಜೇಶ್ವರಿ ನಗರ ವಾರ್ಡಿನ (ವಾರ್ಡ್ ನಂ.160) ಜನಪ್ರಿಯ ಅಬೋರ್ಡ್ ಹತ್ತಿರ ದಿನಾಂಕ:15-08-2011 ರಂದು ರಾತ್ರಿ ಬಿದ್ದ ಭಾರೀ ಮಳೆಗೆ ಮೇಲ್ಕಂಡ ಪ್ರದೇಶದಲ್ಲಿ ತಡೆಗೋಡೆ ಇಲ್ಲದ ಕಾರಣ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ. ದಿನಾಂಕ:16-08-2011 ರಂದು ಪೂಜ್ಯ ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಸ್ಥಳೀಯ ಪಾಲಿಕೆಯ ಸದಸ್ಯರೊಂದಿಗೆ ಸ್ಥಳ ಪರಿಶೀಲನೆ ಮಾಡಿ ತಡೆಗೋಡೆ ನಿರ್ಮಿಸಲು ಆದೇಶಿಸಿರುತ್ತಾರೆ. ಅದರಂತೆ, ಈ ಮಳೆನೀರು ಕಾಲುವೆಯನ್ನು ವೈಜ್ಞಾನಿಕವಾಗಿ ನಿರ್ಮಿಸಲು ಉದ್ದೇಶಿಸಿದ್ದು, ಈ ರಾಜಕಾಲುವೆಯನ್ನು ರಾಜರಾಜೇಶ್ವರಿ ನಗರ ವಲಯದ ಮಳೆನೀರು ಕಾಲುವೆಗಳ ಡಿ.ಪಿ.ಆರ್.ನಂತೆ ವಿನ್ಯಾಸಕ್ಕನುಗುಣವಾಗಿ ಅಭಿವೃದ್ಧಿಪಡಿಸಲು ಅಂದಾಜು ಪಟ್ಟಿಯನ್ನು 2010-11ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ರೂ.280.00 ಲಕ್ಷಗಳಿಗೆ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ.

ಸದರಿ ಕಾಮಗಾರಿಗೆ ದಿನಾಂಕ:29-03-2012 ರಂದು **E-Procurement** ಅಡಿಯಲ್ಲಿ, Two Cover System ನಲ್ಲಿ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಸದರಿ ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹರಾದ ಹಿನ್ನಲೆಯಲ್ಲಿ, ಬಿಡ್ ಅನ್ನು ದಿನಾಂಕ:23-05-2012 ರಂದು ತೆರೆಯಲಾಗಿದ್ದು, ಶ್ರೀ. ನಂಜಯ್ಯ ಮಹದೇವಸ್ವಾಮಿ ರವರು ಕಡಿಮೆ ಮೊತ್ತವನ್ನು ನಮೂದಿಸಿ L1 ಆಗಿರುತ್ತಾರೆ. ಮುಖ್ಯ ಅಭಿಯಂತರರು ದಿನಾಂಕ:31-05-2012 ರಂದು ನೀಡಿದ ಆದೇಶದಂತೆ ಗುತ್ತಿಗೆದಾರರೊಡನೆ ಸಂಧಾನ ನಡೆಸಿದ್ದು, (ಶೇ.12.45) ದಿನಾಂಕ:04-07-2012 ರಂದು ಆಯುಕ್ತರ ಅನುಮೋದನೆ ಪಡೆಯಲಾಗಿದೆ. ಗುತ್ತಿಗೆದಾರರು ಕಾಲಾವಧಿಯನ್ನು ವಿಸ್ತರಿಸಲು ಪತ್ರವನ್ನು ನೀಡಿರುತ್ತಾರೆ. ಉಳಿದ ವಿವರಗಳು ಕೆಳಕಂಡಂತಿವೆ.

| | | |
|---|---|---|
| 1 | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2010-11ನೇ ಸಾಲಿನ ದರಪಟ್ಟಿಯಂತೆ) | ರೂ.2,45,53,889.48 ಲಕ್ಷಗಳು |
| 2 | ಬಿಡ್ಡುದಾರರಾದ ಶ್ರೀ. ನಂಜಯ್ಯ ಮಹದೇವಸ್ವಾಮಿ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.3,18,95,029.96 ಲಕ್ಷಗಳು |
| 3 | 2010-11ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ | ಶೇ. 29.9 ಹೆಚ್ಚುವರಿ |
| 4 | 2011-12ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಾಗ ಟೆಂಡರಿಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ **(KPWD Order No.8772, Dated:29-02-2012, KPWD Order No.225, Dated:18-04-2012)** | ಶೇ. 15.34 ಹೆಚ್ಚುವರಿ |
| 5 | ಬಿಡ್ಡುದಾರರಾದ ಶ್ರೀ. ನಂಜಯ್ಯ ಮಹದೇವಸ್ವಾಮಿ ರವರು ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತ **(First quarter issue rate of steel and cement (KPWD Order No.8772, Dated:29-02-2012, KPWD Order No.225, Dated:18-04-2012)** | ರೂ.3,16,06,631.00 ಲಕ್ಷಗಳು (ಶೇ.12.45) ಹೆಚ್ಚುವರಿ |

ಶ್ರೀ. ನಂಜಯ್ಯ ಮಹದೇವಸ್ವಾಮಿ ರವರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.29.9 ರಷ್ಟು (2010-11ನೇ ಸಾಲಿನ ದರಪಟ್ಟಿ) ಹೆಚ್ಚುವರಿ ಇದ್ದು, ಈ ವರ್ಷದ ಮೊದಲನೇ ಭಾಗದ **(First Quarter)** ಉಕ್ಕು ಮತ್ತು ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇ.12.45 ಹೆಚ್ಚುವರಿಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ. ನಂಜಯ್ಯ ಮಹದೇವಸ್ವಾಮಿ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.3,16,06,631.00 ಗಳ (ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.29.9 (2010-11ನೇ ಸಾಲಿನ ದರಪಟ್ಟಿ) ರಷ್ಟು ಹೆಚ್ಚುವರಿ ದರ ಹಾಗೂ ಈ ವರ್ಷದ ಮೊದಲ ಭಾಗದ **(First Quarter)** ಉಕ್ಕು ಮತ್ತು ಸೀಮೆಂಟ್ ದರಗಳಿಗೆ ಹೋಲಿಸಿದಾಗ ಬಂದಂತಹ ಶೇ.12.45 ಹೆಚ್ಚುವರಿ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ 06-12-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:14-12-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:14-12-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 14-12-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 31 (322) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, **JNNURM** ಯೋಜನೆ ಅಡಿಯಲ್ಲಿ ಬಿ.ಎಸ್.ಯು.ಪಿ. ವತಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಗುರುತಿಸಿರುವ 13 ಕೊಳಚೆ ಪ್ರದೇಶಗಳಿಗೆ ಮೂಲಭೂತ ಸೌಕರ್ಯದೊಂದಿಗೆ ಒಟ್ಟು 1524 ವಸತಿ ಗೃಹಗಳನ್ನು ನಿರ್ಮಿಸಲು ಈಗಾಗಲೇ ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ಸಂಸ್ಥೆಯವರೊಂದಿಗೆ ದಿನಾಂಕ:27-03-2008 ರಂದು ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ. ತದನಂತರ, ದಿನಾಂಕ:01-03-2010 ರಂದು ನಡೆದ 15ನೇ SLEC ಸಭೆಯ ನಿರ್ಣಯದಂತೆ, ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ಮಂಡಳಿ ರವರೊಂದಿಗೆ ನಿರ್ಮಿಸಲು ಉದ್ದೇಶಿಸಿದ್ದ ಒಟ್ಟು 1524 ವಸತಿಗಳಲ್ಲಿ 124 ವಸತಿಗಳನ್ನು ಹೊರತುಪಡಿಸಿ ಬಾಕಿ ಉಳಿದ 1400 ವಸತಿ ಗೃಹಗಳ ನಿರ್ಮಾಣ ಕಾಮಗಾರಿಯನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರಿಗೆ ಹಸ್ತಾಂತರಿಸಲಾಗಿರುತ್ತದೆ. ಸದರಿ ತೀರ್ಮಾನದಂತೆ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ದಿನಾಂಕ:27-07-2012ರಂದು ಪತ್ರ ಬರೆದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಕರಡು ಒಡಂಬಡಿಕೆ ಪತ್ರವನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಕರಡು ಒಡಂಬಡಿಕೆಯಲ್ಲಿ 9 ಕೊಳಚೆ ಪ್ರದೇಶಗಳ ಒಟ್ಟು 1400 ಮನೆಗಳು ಹಾಗೂ ನೇತಾಜಿ ಸುಭಾಷ್‌ಚಂದ್ರ ಬೋಸ್ ಕೊಳಚೆ ಪ್ರದೇಶದ 48 ವಸತಿಗಳ ಟೆಂಡರ್ ಪ್ರೀಮಿಯಂ ಮತ್ತು ಹೆಚ್ಚುವರಿ ಮೊತ್ತ ಸೇರಿ ಒಟ್ಟು ರೂ.17.19 ಕೋಟಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಭರಿಸಬೇಕೆಂದು ಷರತ್ತುಗಳನ್ನು ಅಳವಡಿಸಲಾಗಿರುತ್ತದೆ.

ಅಲ್ಲದೇ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC) ರವರ ದಿನಾಂಕ:12-07-2012ರ ಪತ್ರದಲ್ಲಿ JNNURM ಯೋಜನೆಯ ನಿಯಮಾವಳಿಗಳಂತೆ ಟೆಂಡರ್ ಪ್ರೀಮಿಯಂ ಮತ್ತು ಹೆಚ್ಚುವರಿ ಮೊತ್ತವನ್ನು ಭರಿಸಲು ಯೋಜನೆಯಲ್ಲಿ ಅವಕಾಶವಿರುವುದಿಲ್ಲವೆಂದು, ಈ ಹೆಚ್ಚುವರಿ ಮೊತ್ತವನ್ನು ಸಂಬಂಧಪಟ್ಟ ಮೇಲ್ವಿಚಾರಣ ಸಂಸ್ಥೆಯಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೇ ಭರಿಸಬೇಕೆಂದು ತಿಳಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಕೊಳಚೆ ಅಭಿವೃದ್ಧಿ ಪ್ರದೇಶವು ಸೇರಿದಂತೆ 12 ಕೊಳಚೆ ಪ್ರದೇಶಗಳಲ್ಲಿ ಒಟ್ಟು 1448 ವಸತಿಗಳ ನಿರ್ಮಾಣವನ್ನು ಈ ಕೆಳಕಂಡ ಪ್ರದೇಶಗಳಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ. ಕೊಳಚೆ ಪ್ರದೇಶಗಳ ಮತ್ತು ಗುತ್ತಿಗೆದಾರರ ಹೆಸರು ಮತ್ತು ನಮೂದಿಸಿರುವ ಮೊತ್ತದ ವಿವರಗಳು ಈ ಕೆಳಕಂಡಂತಿರುತ್ತದೆ.

I. **BBMP Phase-I (1400 Du's)**

**(Rs.in lakhs)**

| Sl. No. | Name of the Works | No. Of Houses | Name of the Agency | Amount put to tender based on SR of 2006-07 | Contract Cost |
|---|---|---|---|---|---|
| 1 | Construction of 288 houses (G+3) including infrastructure works at Arasu Colony Slum in Bangalore City. | 288 | Sri.G.Chandre Gowda | 832.19 | 1151.31 |
| 2 | Construction of 120 houses (G+3) including infrastructure works at RK Mutt Slum in Bangalore City. | 120 | Sri.B.Nagaraj | 360.14 | 491.48 |

..........................2

| | | | | | |
|---|---|---|---|---|---|
| 3 | Construction of 48 houses (G+3) including infrastructure works at Mariyamma Slum in Bangalore City. | 48 | Sri.Sridharbabu | 148.20 | 191.19 |
| 4 | Construction of 84 houses (GF) including infrastructure works at Indiragandhi Slum in Bangalore City. | 84 | Sri.Prasanna N. Rajpurohith | 272.63 | 371.59 |
| 5 | Construction of 176 houses (G+3) including infrastructure works at Vyalikaval-Dobighat Slum in Bangalore City. | 176 | M/s Balaji & Co. | 524.85 | 627.28 |
| 6 | Construction of 44 houses (G+3) including infrastructure works at Tungabhadra Slum in Bangalore City. | 44 | Sri.K.Rajareddy | 140.56 | 166.82 |
| 7 | Construction of 112 houses (G+3) including infrastructure works at Brundavan Nagar Dobighat Slum in Bangalore City. | 112 | Sri.Prasanna N. Rajpurohith | 343.29 | 484.41 |
| 8 | Construction of 144 houses (G+3) including infrastructure works at AD Halli Slum in Bangalore City. | 144 | M/s Yankee Builders | 446.40 | 620.54 |
| 9 | Construction of 128 houses (G+3) including infrastructure works at Kavika Slum in Bangalore City. | 128 | Sri.Venkatesh Reddy | 389.69 | 542.75 |
| 10 | Construction of 96 houses (G+3) including infrastructure works at Gangondanahalli Slum in Bangalore City. | 96 | M/sYankee Builders | 295.75 | 409.68 |
| 11 | Construction of 160 houses (G+3) including infrastructure works at Seegehalli, K.R.Puram in Bangalore City under JNNURM-BSUP Scheme (BBMP) by adopting Fast Track Technology (DBT) | 160 | M/sMaverick Holdings and investment Private Limited | 496.72 | 664.00 |
| | Grand Total | 1400 | | 4250.42 | 5721.05 |

II. Netaji Slum (48 Du's)

| Sl. No. | Name of the Works | No. of Houses | Name of Agency | Project Cost | Contract Cost |
|---|---|---|---|---|---|
| 1 | Construction of 48 houses (G+3) including infrastructure works at Netaji Slum in Bangalore City. | 48 | M/s DEC Infrastructure | 183.00 | 181.92 |

ಮೇಲ್ಕಂಡ ಕೊಳಚೆ ಪ್ರದೇಶಗಳ ಅಂದಾಜು ಮೊತ್ತ 2006-07 ರ ಸಾಲಿನ ಲೋಕೋಪಯೋಗಿ ಇಲಾಖೆಯ ದರ ಸೂಚಿ ಪಟ್ಟಿಯಂತೆ 37 ಕೋಟಿ 53 ಲಕ್ಷಗಳಾಗಿರುತ್ತದೆ. 15ನೇ **SLEC** ಸಭೆಯ ತೀರ್ಮಾನದಂತೆ, ಸದರಿ ಮನೆಗಳ ನಿರ್ಮಾಣ ಕಾಮಗಾರಿಯನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರಿಗೆ ಹಸ್ತಾಂತರಿಸಿದ್ದು, ಸದರಿ ಸಂಸ್ಥೆ ಈಗಾಗಲೇ ಟೆಂಡರ್‌ಗಳನ್ನು ಕರೆದು ಗುತ್ತಿಗೆದಾರರ ಹೆಸರುಗಳನ್ನು ನಿರ್ಣಯಿಸಲಾಗಿರುತ್ತದೆ. ವಿವಿಧ ಗುತ್ತಿಗೆದಾರರ ಹೆಸರು ಮತ್ತು ಅವರು ನಮೂದಿಸಿರುವ ಟೆಂಡರ್ ಮೊತ್ತಗಳನ್ನು ಮೇಲಿನ ಪಟ್ಟಿಯಲ್ಲಿ ವಿವರಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ ಮತ್ತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರ ಕೋರಿಕೆಯಂತೆ ಕಾಮಗಾರಿಗೆ ತಗಲುವ ಟೆಂಡರ್ ಪ್ರೀಮಿಯಂ ಹಾಗೂ ಹೆಚ್ಚುವರಿ ಮೊತ್ತ ರೂ.17.19 ಕೋಟಿಗಳನ್ನು ಪಾಲಿಕೆಯ ವತಿಯಿಂದ ಭರಿಸಲು ಅನುಮೋದನೆ ಕೋರಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01-08-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:07-12-2012 ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:07-12-2012ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ:07-12-2012ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 01 (325) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ವಸ್ತುಗಳ ಸಂಸ್ಕರಣೆ ಮತ್ತು ವಿಲೇವಾರಿಗೆ ಸಂಬಂಧಿಸಿದಂತೆ ಘನ ಉಚ್ಛ ನ್ಯಾಯಾಲಯವು ಮೂಲ ದಾವೆ ಸಂಖ್ಯೆ:24739-49/2012 ಮತ್ತು 30450/2012, ದಿನಾಂಕ:22-11-2012 ರಂದು ನೀಡಿರುವ ಆದೇಶದಂತೆ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ **(KCDC)** ರವರಿಗೆ, ಸುಮಾರು ಪ್ರತಿದಿನ 75 ರಿಂದ 100 ಟನ್ ಬೇರ್ಪಡಿಸಿದ ಹಸಿ ಕಸವನ್ನು ಸ್ವೀಕರಿಸುವ ಮತ್ತು ಇತರೆ ನಿಬಂಧನೆಗಳನ್ನು ಪಾಲನೆ ಮಾಡುವ ಬಗ್ಗೆ ಸೂಚಿಸಲಾಗಿರುತ್ತದೆ.

ಘನತ್ಯಾಜ್ಯ ನಿರ್ವಹಣೆಗೆ ಗೌರವಾನ್ವಿತ ಉಚ್ಛ ನ್ಯಾಯಾಲಯವು ಮೂಲ ದಾವೆ ಸಂಖ್ಯೆ: 24739-49/2012ರ ಮೊಕದ್ದಮೆ ದಿನಾಂಕ:22-11-2012ರಲ್ಲಿ ನೀಡಿರುವ ನಿರ್ದೇಶನದಂತೆ ಪಾಲಿಕೆಯ ದಕ್ಷಿಣ ವಲಯ ಮತ್ತು ಬೊಮ್ಮನಹಳ್ಳಿ ವಲಯಗಳಿಂದ ಪ್ರತಿದಿನ ಉತ್ಪತ್ತಿಯಾಗುವ ಸುಮಾರು 75 ರಿಂದ 100 ಮೆಟ್ರಿಕ್ ಟನ್ ಹಸಿ ತ್ಯಾಜ್ಯವನ್ನು ಕೆ.ಸಿ.ಡಿ.ಸಿ. ರವರಿಗೆ ಕ್ರಮ ತೆಗೆದುಕೊಳ್ಳಲು ವಹಿಸಬಹುದಾಗಿದ್ದು, ದಿನಾಂಕ:26-12-2012 ರ ಪತ್ರದಲ್ಲಿ ಕೆ.ಸಿ.ಡಿ.ಸಿ ರವರು ತಮ್ಮ ಘಟಕದಲ್ಲಿ ಹಾಲಿ ಶೇಖರಣೆಯಾಗಿರುವ ಹಳೆಯ ಘನತ್ಯಾಜ್ಯವನ್ನು ನಿರ್ವಹಣೆ ಮಾಡಲು ಸುಮಾರು ರೂ.65 ಲಕ್ಷಗಳ ಮೊತ್ತದ ಒಂದು **Screening machine** ಮತ್ತು ರೂ.35 ಲಕ್ಷಗಳ **Front End Loader (432 ZX) JCB** ವಾಹನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನೀಡಲು ಕೋರಿರುತ್ತಾರೆ.

ಕೆ.ಸಿ.ಡಿ.ಸಿ. ಸಂಸ್ಥೆಯವರು ತಮ್ಮ ಘಟಕದಲ್ಲಿ ಶೇಖರಣೆಯಾಗಿರುವ ಹಳೆಯ ಘನತ್ಯಾಜ್ಯವನ್ನು ಬೇರ್ಪಡಿಸಲು ಹಾಗೂ ಹೊಸ ಘನತ್ಯಾಜ್ಯವನ್ನು ತಾವು ವಹಿಸಿಕೊಳ್ಳಲು ಮೇಲೆ ತಿಳಿಸಿರುವಂತೆ ಒಟ್ಟಾರೆ ರೂ.1.00 ಕೋಟಿಗಳ ಮೊತ್ತದ ಪ್ರಸ್ತಾವನೆಯ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ರವರ ದಿನಾಂಕ: 27-12-2012ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಅಪರ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ರವರ ದಿನಾಂಕ:27-12-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಅಪರ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ರವರ ದಿನಾಂಕ: 27-12-2012ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ ವಿಷಯದ ಸಂಖ್ಯೆ : 03 (327) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರಿಂದ 2010-11ನೇ ಸಾಲಿನಲ್ಲಿ ಏಕಗಂಟು ಅನುದಾನದಲ್ಲಿ ಅನುಮೋದನೆಗೊಂಡ **Widening of Ayyappa Swamy Temple Road from to Gangamma circle to Jalahalli circle 0.00 Mtr to 1000.00 Mtr. by Utilization of Airforce Defence Land to connect BIA** ಕಾಮಗಾರಿಗೆ ರೂ.250.00 ಲಕ್ಷಗಳು ಲಭ್ಯವಾಗಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸುವಷ್ಟರಲ್ಲಿ ಶ್ರೀ. ಎಸ್.ಆರ್.ವಿಶ್ವನಾಥ್ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕರು ಮಾನ್ಯ ಆಯುಕ್ತರವರಿಗೆ ಪತ್ರ ಬರೆದಿದ್ದು, ಪ್ರಸ್ತಾಪಿಸಲಾದ ಸದರಿ ಕಾಮಗಾರಿಯ ಸ್ಥಳ ಬದಲಾವಣೆ ಮಾಡಲು ಅಂದರೆ **Strengthening and Asphalting to Yelahanka - Yeshwanthapura Road from Zum Zum gate Airforce station near M.S.Palya to Attur cross to Yelahanka** ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕೋರಿರುತ್ತಾರೆ. ಅದರಂತೆ, ಸ್ಥಳ ಬದಲಾವಣೆ ಕಾಮಗಾರಿಗೆ ಮಾನ್ಯ ಆಯುಕ್ತರು ರವರು ಒಪ್ಪಿಗೆ ಸೂಚಿಸಿರುತ್ತಾರೆ.

ಮುಂದುವರೆದಂತೆ, ಕಾಮಗಾರಿಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ತಾಂತ್ರಿಕ ಮಂಜೂರಾತಿಯನ್ನು ನೀಡಿ ದಿನಾಂಕ:25-07-2012 ರಂದು ಇ-ಪ್ರಕ್ಯೂರ್‌ಮೆಂಟ್ ಕರೆಯಲಾಗಿದ್ದು, ಸದರಿ ಕಾಮಗಾರಿಗೆ 2011-12ರ ಎಸ್.ಆರ್ ದರ ಸೂಚಿಯಂತೆ ಅನುಮೋದನೆಗೊಂಡ ಮೊತ್ತ ರೂ.2,49,46,579.10/- ಆಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ 3 ಜನ ಗುತ್ತಿಗೆದಾರರಾದ (1) ಶ್ರೀ. ಸಿ.ಜಿ.ಚಂದ್ರಪ್ಪ (2) ಶ್ರೀ. ಎಂ.ಎಸ್.ವೆಂಕಟೇಶ್ (3) ಮೆ॥ ಎಸ್.ಎಲ್.ಪಿ. ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ., ರವರು ಭಾಗವಹಿಸಿದ್ದು, ಇದರಲ್ಲಿ ಶ್ರೀ. ಸಿ.ಜಿ.ಚಂದ್ರಪ್ಪ ರವರು ರೂ.2,33,46,247/- ಗಳ ಶೇ. -6.42% (ಕಡಿಮೆ) ನಮೂದಿಸಿ ಕಾಮಗಾರಿಯನ್ನು ನಿರ್ವಹಿಸಲು ಯಶಸ್ವಿ ಬಿಡ್‌ದಾರರಾಗಿರುತ್ತಾರೆ.

ಸದರಿ ಕಾಮಗಾರಿಯ ಅಂದಾಜು ಪಟ್ಟಿ ಮೊತ್ತ ರೂ.250.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರೀಕರಿಸಲು ಅನುಮೋದನೆ ಮತ್ತು ಯಶಸ್ವಿ ಗುತ್ತಿಗೆದಾರರಾದ ಶ್ರೀ. ಸಿ.ಜಿ.ಚಂದ್ರಪ್ಪ ರವರು ನಮೂದಿಸಿರುವ ರೂ.2,33,46,247/- ಗಳಿಗೆ ಶೇ. -6.42% (ಕಡಿಮೆ) ಗುತ್ತಿಗೆ ಮೊತ್ತಕ್ಕೆ ಅನುಮೋದನೆ ನೀಡಿ ಕಾರ್ಯಾದೇಶವನ್ನು ನೀಡಲು ದಿನಾಂಕ:24-11-2012 ರಂದು ನಡೆದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಸಭೆಯ ವಿಷಯದ ಸಂಖ್ಯೆ:117/2012-13 ರಲ್ಲಿ ಒಪ್ಪಿಗೆ ನೀಡಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕೆಳಕಂಡ ಪ್ರಸ್ತಾವನೆಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-12-2012ರ ಟಿಪ್ಪಣಿ.

1) ಸದರಿ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತ ರೂ.250.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿದೆ.
2) ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರೀಕರಿಸಲು ಅನುಮೋದನೆ ಕೋರಿದೆ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:26-12-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ಆಯುಕ್ತರವರ ದಿನಾಂಕ:26-12-2012ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 04 (328) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರಿಂದ 2010-11ನೇ ಸಾಲಿನಲ್ಲಿ ಏಕಗಂಟು ಅನುದಾನದಲ್ಲಿ ಅನುಮೋದನೆಗೊಂಡ **Widening of BEL Road from BEL Circle to Gangamma Circle Chainage 1000.00 Mtr to 2000.00 Mtrs. by Utilization of Central Government and HMT factory to connect BIA** ಕಾಮಗಾರಿಗೆ ರೂ.250.00 ಲಕ್ಷಗಳು ಲಭ್ಯವಾಗಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸುವಷ್ಟರಲ್ಲಿ ಶ್ರೀ. ಎಸ್.ಆರ್.ವಿಶ್ವನಾಥ್ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕರು ಮಾನ್ಯ ಆಯುಕ್ತರವರಿಗೆ ಪತ್ರ ಬರೆದಿದ್ದು, ಪ್ರಸ್ತಾಪಿಸಲಾದ ಸದರಿ ಕಾಮಗಾರಿಯ ಸ್ಥಳ ಬದಲಾವಣೆ ಮಾಡಲು ಅಂದರೆ **Strengthening and Asphalting to Doddaballapura Main road from Puttenahalli village to BMS College at Yelahanka** ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕೋರಿರುತ್ತಾರೆ. ಅದರಂತೆ, ಸ್ಥಳ ಬದಲಾವಣೆ ಕಾಮಗಾರಿಗೆ ಮಾನ್ಯ ಆಯುಕ್ತರು ರವರು ಒಪ್ಪಿಗೆ ಸೂಚಿಸಿರುತ್ತಾರೆ.

ಮುಂದುವರೆದಂತೆ, ಕಾಮಗಾರಿಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ತಾಂತ್ರಿಕ ಮಂಜೂರಾತಿಯನ್ನು ನೀಡಿ ದಿನಾಂಕ:25-07-2012 ರಂದು ಇ-ಪ್ರಕ್ಯೂರ್‌ಮೆಂಟ್ ಕರೆಯಲಾಗಿದ್ದು, ಸದರಿ ಕಾಮಗಾರಿಗೆ 2011-12ರ ಎಸ್.ಆರ್ ದರ ಸೂಚಿಯಂತೆ ಅನುಮೋದನೆಗೊಂಡ ಮೊತ್ತ ರೂ.2,48,95,341.03/- ಆಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ 3 ಜನ ಗುತ್ತಿಗೆದಾರರಾದ (1) ಶ್ರೀ. ಸಿ.ಚಂದ್ರಪ್ಪ (2) ಶ್ರೀ. ಎಂ.ಎಸ್.ವೆಂಕಟೇಶ್ (3) ಮೆ|| ಎಸ್.ಎಲ್.ಪಿ. ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ., ರವರು ಭಾಗವಹಿಸಿದ್ದು, ಇದರಲ್ಲಿ ಶ್ರೀ. ಸಿ.ಜಿ.ಚಂದ್ರಪ್ಪ ರವರು ರೂ.2,27,68,479/- ಗಳ ಶೇ. -8.54% (ಕಡಿಮೆ) ನಮೂದಿಸಿ ಕಾಮಗಾರಿಯನ್ನು ನಿರ್ವಹಿಸಲು ಯಶಸ್ವಿ ಬಿಡ್‌ದಾರರಾಗಿರುತ್ತಾರೆ.

ಸದರಿ ಕಾಮಗಾರಿಯ ಅಂದಾಜು ಪಟ್ಟಿ ಮೊತ್ತ ರೂ.250.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರೀಕರಿಸಲು ಅನುಮೋದನೆ ಮತ್ತು ಯಶಸ್ವಿ ಗುತ್ತಿಗೆದಾರರಾದ ಶ್ರೀ. ಸಿ.ಜಿ.ಚಂದ್ರಪ್ಪ ರವರು ನಮೂದಿಸಿರುವ ರೂ.2,27,68,479/- ಗಳಿಗೆ ಶೇ. -8.54% (ಕಡಿಮೆ) ಗುತ್ತಿಗೆ ಮೊತ್ತಕ್ಕೆ ಅನುಮೋದನೆ ನೀಡಿ ಕಾರ್ಯಾದೇಶವನ್ನು ನೀಡಲು ದಿನಾಂಕ:24-11-2012 ರಂದು ನಡೆದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಸಭೆಯ ವಿಷಯದ ಸಂಖ್ಯೆ:116/2012-13 ರಲ್ಲಿ ಒಪ್ಪಿಗೆ ನೀಡಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕೆಳಕಂಡ ಪ್ರಸ್ತಾವನೆಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-12-2012ರ ಟಿಪ್ಪಣಿ.

1) ಸದರಿ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತ ರೂ.250.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿದೆ.
2) ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರೀಕರಿಸಲು ಅನುಮೋದನೆ ಕೋರಿದೆ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:27-12-2012ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ಆಯುಕ್ತರವರ ದಿನಾಂಕ:27-12-2012ರ ಟಿಪ್ಪಣಿಯನ್ನು ಒಪ್ಪುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 05 (329) / 2012-13

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬಳ್ಳಾರಿ ರಸ್ತೆಯನ್ನು ವಿಂಡ್ಸರ್ ಮ್ಯಾನರ್ ಸೇತುವೆಯಿಂದ ಹೆಬ್ಬಾಳ ಮೇಲು ಸೇತುವೆವರೆಗೆ (ಸರಪಳಿ 5.35 ರಿಂದ ಕಿ.ಮೀ. 7.33 ಕಿ.ಮೀ. ವರೆಗೆ) ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಪ್ರಕಟಣೆ ಸಂಖ್ಯೆ:UDD/154/BEM RUPRA/2004, ದಿನಾಂಕ:18-01-2005ರ ಆಧಾರದ ಮೇಲೆ ಸದರಿ ರಸ್ತೆಯನ್ನು 30.00 ಮೀ. ಗೆ ಅಗಲೀಕರಣಗೊಳಿಸಲು ತೀರ್ಮಾನಿಸಿ ಅದರಂತೆ ರಸ್ತೆ ಅಗಲೀಕರಣಕ್ಕೆ ಬೇಕಾದಂತಹ ಖಾಸಗಿ ಜಮೀನನ್ನು ಟಿ.ಡಿ.ಆರ್. ಯೋಜನೆ ಅಡಿಯಲ್ಲಿ ಕೈಗೆತ್ತಿಕೊಳ್ಳಲು ಪಾಲಿಕೆಯಿಂದ ಪ್ರಕಟಣೆ ಸಂಖ್ಯೆ:JDTP/RW/Phase-1/ಸೆಕ್ಟರ್-2/ಸಿ2/ಪಿಆರ್-2/2004-05, ದಿನಾಂಕ:02-03-2005ರಲ್ಲಿ ಸಾರ್ವಜನಿಕ ತಿಳುವಳಿಕೆಗಾಗಿ ಹೊರಡಿಸಿ ಯೋಜನೆಯನ್ನು ಕೈಗೊಳ್ಳಲಾಗಿತ್ತು.

ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ರೂ.1272.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ದಿನಾಂಕ:08-06-2007 ರಂದು ಟೆಂಡರ್ ಆಹ್ವಾನಿಸಿ ಟೆಂಡರ್ ಮೂಲಕ ಕನಿಷ್ಠ ದರದ ಗುತ್ತಿಗೆದಾರರಾದ ಶ್ರೀ. ಮುನಿರತ್ನ ಎಂಬ ಗುತ್ತಿಗೆದಾರರಿಗೆ ಟೆಂಡರ್ ಮೊತ್ತ ರೂ.17,03,23,393.00 ಗಳಿಗೆ ವಹಿಸಿ ಸರ್ಕಾರದ ಅನುಮೋದನೆ ಸಂಖ್ಯೆ: UDD/587/MNY/2007, dated:14-11-2007 ರಂತೆ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು LOI ಸಂಖ್ಯೆ:EE/RW/TEND/37/07-08, dated:07-12-2007 ರಂತೆ ನೀಡಲಾಗಿರುತ್ತದೆ. ತದನಂತರ ಕಾಮಗಾರಿಗೆ ಕಾರ್ಯದೇಶವನ್ನು ಸಂಖ್ಯೆ: EE/RW/TEND/34/07-08, dated:27-09-2008 ರಲ್ಲಿ ನೀಡಲಾಗಿರುತ್ತದೆ.

ಇದೇ ಸಮಯದಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ದೇವನಹಳ್ಳಿಯಲ್ಲಿ ಕಾರ್ಯಾರಂಭವಾಗಿ ಸದರಿ ವಿಮಾನ ನಿಲ್ದಾಣಕ್ಕೆ ಬೆಂಗಳೂರು ನಗರದಿಂದ ಅತ್ಯುತ್ತಮ ಸಂಪರ್ಕ ರಸ್ತೆಯನ್ನು ಕಲ್ಪಿಸಲು ಈ ಬಳ್ಳಾರಿ ರಸ್ತೆಯನ್ನು, ಹೆಬ್ಬಾಳ ಮೇಲು ಸೇತುವೆಯಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕಡೆಗೆ ಇರುವ ರಸ್ತೆ ವಿನ್ಯಾಸವನ್ನೇ ಹಾಲಿ ಈ ಯೋಜನೆಯಲ್ಲೂ ಅಳವಡಿಸಿಕೊಳ್ಳಲು ತೀರ್ಮಾನಿಸಲಾಗಿರುತ್ತದೆ. ಈ ಮಧ್ಯೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯು ಬೆಂಗಳೂರು ಉಚ್ಚ ನ್ಯಾಯಾಲಯದಲ್ಲಿ WP ಸಂಖ್ಯೆ:2263, 2296, 3000, 3613/2008 ರ ಅನ್ವಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮಗ್ರ ರಸ್ತೆಗಳ ಸಂಪರ್ಕ ಕಲ್ಪಿಸುವ ಬಗ್ಗೆ ಫಿರ್ಯಾದುದಾರರು ದೂರಿದ್ದರು. ಅದರಲ್ಲೂ ವಿಶೇಷವಾಗಿ ಬಳ್ಳಾರಿ ರಸ್ತೆಯ ಅಗಲೀಕರಣದ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ನಿರಂತರವಾಗಿ ಪ್ರಗತಿಯ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು ಹಾಗೂ ಸರ್ಕಾರದ ಮಟ್ಟದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಬಗ್ಗೆ ಸಲಹೆ ಸೂಚನೆ ನೀಡಲು ಸರ್ಕಾರದ ಮಟ್ಟದ ಉನ್ನತ ಅಧಿಕಾರಸ್ಥರ ಸಮಿತಿಯನ್ನು ಸಹ ಮಾನ್ಯ ಅಪರ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ನೇತೃತ್ವದಲ್ಲಿ ರೂಪಿಸಲಾಗಿರುತ್ತದೆ. ಸದರಿ ಸಮಿತಿಯ ಸಭೆಯಲ್ಲಿ ವ್ಯಕ್ತವಾಗಿರುವ ಅಭಿಪ್ರಾಯದಂತೆ ಬಳ್ಳಾರಿ ರಸ್ತೆಯ ಅಗಲೀಕರಣವನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಿ ಅನುಮೋದನೆಗೊಂಡ 30.00 ಮೀಟರ್ ರಸ್ತೆಗೆ (6 lane) ಬದಲಾಗಿ 45.00 ಮೀಟರ್‌ಗಳ ಬೃಹತ್ ರಸ್ತೆಯನ್ನಾಗಿ ಮಾಡಿ (6 lane + 2 lane + 2 lane service road) ನಿರ್ಮಿಸುವುದು ಮತ್ತು 6 ಸಂಖ್ಯೆ ಬೃಹತ್ **Bus bay** ನಿರ್ಮಿಸುವುದಾಗಿರುತ್ತದೆ. ಸದರಿ ರಸ್ತೆ ಅಗಲೀಕರಣಕ್ಕೆ ರಸ್ತೆಯ ಎರಡು ಬದಿಯಲ್ಲಿ ಇರುವ ಸರ್ಕಾರಿ ಸಂಸ್ಥೆಗಳಾದ UAS Campus, UVS Hospital, IVRI, KAIC Ltd., KACP limited IAH & VB etc., ಗಳಿಂದ ಜಮೀನನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶಕ್ಕೆ ತೆಗೆದುಕೊಳ್ಳುವುದೆಂದು

...............................2

ಉದ್ದೇಶಿಸಲಾಗಿರುತ್ತದೆ. ಸದರಿ ರಸ್ತೆ ವಿನ್ಯಾಸವನ್ನು ಮುಂಬರುವ ದಿನಗಳಲ್ಲಿ ರಸ್ತೆ ಅಗಲೀಕರಣ ಮಾಡಲು ಕಷ್ಟಸಾಧ್ಯವಾಗುತ್ತದೆ ಎಂಬ ಕಾರಣದಿಂದ ಕಾಮಗಾರಿ ಯೋಜನೆಯ ಅನುಮೋದಿತ ಅಂದಾಜು ಪಟ್ಟಿ ಮೊತ್ತದಲ್ಲಿ ಹೆಚ್ಚುವರಿ ಮೊತ್ತವನ್ನು ವೆಚ್ಚ ಮಾಡಲು ತೀರ್ಮಾನಿಸಲಾಗಿರುತ್ತದೆ ಹಾಗೂ ಸದರಿ ಉದ್ದೇಶಿಸಿದ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಹಾಗೂ ಕಾಲ ವಿಳಂಬವನ್ನು ತಪ್ಪಿಸಲು ಹಾಲಿ ಟೆಂಡರ್ ಗುತ್ತಿಗೆದಾರರಾದ ಶ್ರೀ. ಮುನಿರತ್ನ ರವರಿಂದಲೇ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಸದರಿ ರಸ್ತೆಯನ್ನು ಅಗಲೀಕರಣ ಮಾಡುವ ಸಂದರ್ಭದಲ್ಲಿ ಕೃಷಿ ಇಲಾಖೆಯ ಜಮೀನಿನಲ್ಲಿ ರಸ್ತೆ ನಿರ್ಮಾಣಕ್ಕೆ ಯೋಗ್ಯವಲ್ಲದ ಮಣ್ಣು ದೊರೆತು ಈ ಜಾಗಗಳಲ್ಲಿ ಹೊಸದಾಗಿ ಮಣ್ಣನ್ನು ಶೇಖರಿಸಿಕೊಂಡು ಹಾಗೂ ಸರಪಳಿ ಸಂಖ್ಯೆ:6.80 ಕಿ.ಮೀ. ನಿಂದ 7.28 ಕಿ.ಮೀ ವರೆಗೂ ಪೂರ್ವದಲ್ಲಿ ಹಾಗೂ 6.95 ಕಿ.ಮೀ 7.10 ಕಿ.ಮೀ. ಪಶ್ಚಿಮದಲ್ಲಿ ಮಳೆ ನೀರಿನ ಹಳ್ಳ ದೊರೆತ ಕಾರಣ ಹೆಚ್ಚುವರಿಯಾಗಿ ಮಣ್ಣನ್ನು ಶೇಖರಿಸಿಕೊಂಡು ರಸ್ತೆ ನಿರ್ಮಾಣ ಮಾಡಲಾಗಿರುತ್ತದೆ. ಮುಂದುವರೆದಂತೆ ಸದರಿ ರಸ್ತೆ ಅಗಲೀಕರಣದಿಂದ ರಸ್ತೆಯ ಮಧ್ಯ ಭಾಗವು ಸ್ಥಳಾಂತರಗೊಂಡ ಕಾರಣ Profile corrective course ಗಳನ್ನು ನಿರ್ಮಿಸಲಾಗಿರುತ್ತದೆ. ಇದರಿಂದ ಮೂಲ ಅಂದಾಜು ಪಟ್ಟಿಯ ರೂ.17,03,23,393.00 ಮೊತ್ತವನ್ನು ಪರಿಷ್ಕರಿಸಬೇಕಾಗಿರುತ್ತದೆ. ಸದರಿ ಪರಿಷ್ಕರಣೆಯ ಅಂಶಗಳು ಕೆಳಕಂಡಂತೆ ಇರುತ್ತದೆ.

1. ಅಗಲೀಕರಣಕ್ಕೆ ಒಳಗಾದ ಹೆಚ್ಚುವರಿ ಜಾಗದಲ್ಲಿ ಸಡಿಲ ಮಣ್ಣು (Loose soil) ಮತ್ತು ತ್ಯಾಜ್ಯ ವಸ್ತುಗಳನ್ನೊಳಗೊಂಡ ಮಿಶ್ರಿತ ಮಣ್ಣು ದೊರೆತ ಕಾರಣ ಅಗೆತದ ಪರಿಮಾಣ ಹೆಚ್ಚಾಗಿದ್ದು, Embankment (Test result enclosed) ಕಾಮಗಾರಿಯ ಪರಿಮಾಣವು ಹೆಚ್ಚಾಗಿರುತ್ತದೆ.
2. ಹೆಚ್ಚುವರಿ ಅಗಲೀಕರಣದಿಂದಾಗಿ ಹಾಗೂ ರಸ್ತೆಯ Centre line ಸ್ಥಳಾಂತರವಾಗಿರುವುದರಿಂದ GSB, WMM, PCC, DBM & BC ಗಳ ಪರಿಮಾಣದಲ್ಲಿ ಹೆಚ್ಚುವರಿಗಳಾಗಿರುತ್ತದೆ.
3. ಸದರಿ ರಸ್ತೆಯಲ್ಲಿ 4 ಬಸ್ ಬೇ, ಎರಡು ಹಳ್ಳಗಳನ್ನು ದಾಟುವ ಸಲುವಾಗಿ **RCC Deck slab** ಅಳವಡಿಸಲಾಗಿದ್ದು, ಈ Bus bay ಗಳಿಗೆ RCC Pavement ಮಾಡಲಾಗಿರುತ್ತದೆ. ಇದರಿಂದ RCC & Steel ಪರಿಮಾಣಗಳು ಹೆಚ್ಚಾಗಿರುತ್ತದೆ.
4. ಸರ್ವೀಸ್ ರಸ್ತೆ ಮತ್ತು ಮುಖ್ಯ ರಸ್ತೆಯ ಮಧ್ಯೆ 1.00 ಮೀ ಅಗಲದ Buffer zone ಮಾಡಲಾಗಿದ್ದು, ಇದರಿಂದಾಗಿ Kerb stone ಪರಿಮಾಣ ಹೆಚ್ಚಾಗಿರುತ್ತದೆ.
5. ಸರ್ವೀಸ್ ರಸ್ತೆ ಸಂಪರ್ಕಿಸುವ ಅಡ್ಡ ರಸ್ತೆಗಳಿಗೆ RCC Deck slab ಹಾಕಿದ ಕಾರಣ RCC & Steel ಪರಿಮಾಣಗಳು ಹೆಚ್ಚಾಗಿರುತ್ತದೆ.
6. ಹೆಚ್ಚುವರಿ ಅಗಲೀಕರಣದಿಂದಾಗಿ ಕೆಲವು ಆಸ್ತಿಗಳನ್ನು ತೆರವುಗೊಳಿಸಲಾಗಿದ್ದು, ಇದರಿಂದ debries ಪ್ರಮಾಣದಲ್ಲಿ ಹೆಚ್ಚುವರಿಯಾಗಿದ್ದು ಒಡೆಯುವ ಮತ್ತು ಹೊರ ಸಾಗಿಸುವ ಪರಿಮಾಣಗಳು ಹೆಚ್ಚುವರಿಯಾಗಿರುತ್ತದೆ.
7. Diversion ರಸ್ತೆಗಳ ನಿರ್ಮಾಣದಿಂದ ತಾತ್ಕಾಲಿಕವಾಗಿ ಸುಗಮ ಸಂಚಾರಕ್ಕಾಗಿ SDBC ಯನ್ನು ಅಳವಡಿಸಲಾಗಿರುತ್ತದೆ.
8. ಸದರಿ ರಸ್ತೆಯ ಎರಡು ಬದಿಯಲ್ಲಿ Drain & Duct ಗಳನ್ನು ನಿರ್ಮಿಸಲಾಗಿದ್ದು ಪರಿಮಾಣಗಳು ಹೆಚ್ಚುವರಿಯಾಗಿರುತ್ತದೆ.
9. ಬಳ್ಳಾರಿ ರಸ್ತೆಯ ಸರಪಳಿ 6.3 ಕಿ.ಮೀ. ನಲ್ಲಿ ಸದರಿ ರಸ್ತೆಗೆ ಅಡ್ಡಲಾಗಿ ನೈಸರ್ಗಿಕ ಹಳ್ಳವಿದ್ದು, ನೀರು ಸರಾಗವಾಗಿ ಹರಿದು ಹೋಗಲು ಹಳ್ಳಕ್ಕೆ 900.00 ಮಿ.ಮೀ. ವ್ಯಾಸದ ಸಿಮೆಂಟ್ ಪೈಪ್‌ಗಳನ್ನು ಅಳವಡಿಸಲಾಗಿದ್ದು, ಪರಿಮಾಣಗಳು ಹೆಚ್ಚುವರಿಯಾಗಿರುತ್ತದೆ.

.................................3

ಈ ಮೇಲೆ ತಿಳಿಸಿದ ಕಾರಣಗಳ ಹಿನ್ನಲೆಯಲ್ಲಿ ಅನುಮೋದಿತ ರೂ.1272.00 ಲಕ್ಷಗಳ ಅಂದಾಜು ಪಟ್ಟಿ ಮೊತ್ತ ಹಾಗೂ ಅನುಮೋದಿತ ಟೆಂಡರ್ ಮೊತ್ತ ರೂ.17,03,23,393.00ಗಳ ಮೊತ್ತವನ್ನು ಪರಿಷ್ಕೃತಗೊಳಿಸಲಾಗಿದ್ದು, ಅದರಲ್ಲಿ work slip ಮೊತ್ತ ರೂ.9,61,41,667 ಗಳು ಹಾಗೂ EIRL ಮೊತ್ತ ರೂ.1,20,34,401 ಗಳಿಗೆ ತಯಾರಿಸಲಾಗಿದ್ದು, ಪರಿಷ್ಕೃತ ಅಂದಾಜು ಪಟ್ಟಿಯ ಒಟ್ಟು ಮೊತ್ತವು ರೂ.27,84,99,944.00 ಗಳಾಗಿರುತ್ತದೆ. ಹಾಲಿ ಕಾಮಗಾರಿಯು ದಿನಾಂಕ:31-01-2009 ರಲ್ಲಿ ಪೂರ್ಣಗೊಂಡಿದ್ದು, ಸಂಬಂಧಪಟ್ಟ ಅಧಿಕಾರಿಗಳು Work Completion Report ನೀಡಿದ್ದು, ಗುತ್ತಿಗೆದಾರರ ಅಂತಿಮ ಬಿಲ್ಲು ಪಾವತಿಯು ಬಾಕಿ ಇರುತ್ತದೆ.

ಸದರಿ ಪರಿಷ್ಕೃತ ಅಂದಾಜು ಪಟ್ಟಿಯನ್ನು ಮುಖ್ಯ ಲೆಕ್ಕಪರಿಶೋಧಕರು ಪರಿಶೀಲಿಸಿ ಸದರಿ ರೂ.27,84,99,944.00 ರಲ್ಲಿ ಮಣ್ಣಿನ ಹೆಚ್ಚುವರಿ ಬಾಬ್ತು (Soil classification) ಆಧಾರದಲ್ಲಿ ರೂ.32,96,305.00 ಕಡಿತಗೊಳಿಸಲು ಸೂಚಿಸಿದ್ದು, ಅದರಂತೆ ಸದರಿ ಪರಿಷ್ಕೃತ ಅಂದಾಜು ಪಟ್ಟಿಯನ್ನು ರೂ.27,84,99,944.00 ಗಳಿಂದ ರೂ.27,52,03,639.00 ಗಳಿಗೆ ಇಳಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ;

1. ಬಳ್ಳಾರಿ ರಸ್ತೆಯನ್ನು ವಿಂಡ್ಸರ್ ಮ್ಯಾನರ್ ಸೇತುವೆಯಿಂದ ಹೆಬ್ಬಾಳ ಮೇಲು ಸೇತುವೆವರೆಗೆ (ಸರಪಳಿ 5.35 ಕಿ.ಮೀ. ರಿಂದ 7.33 ಕಿ.ಮೀ. ವರೆಗೆ) ಕೈಗೊಂಡ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಯ **work slip** ಮೊತ್ತ ರೂ.9,28,45,362.00 ಹಾಗೂ **EIRL** ಮೊತ್ತ ರೂ.1,20,34,401.00 ಹಾಗೂ ಒಟ್ಟಾರೆ ಪರಿಷ್ಕೃತ ಅಂದಾಜು ಪಟ್ಟಿಯ ಮೊತ್ತ ರೂ.27,52,03,639.00 ಗಳಿಗೆ ಅನುಮೋದನೆ.

2. ಸದರಿ ಕಾಮಗಾರಿಯನ್ನು ನಿರ್ವಹಿಸಿ ಈಗಾಗಲೇ ಪೂರ್ಣಗೊಳಿಸಿರುವುದರಿಂದ ಹೆಚ್ಚುವರಿ ಅಂಶಗಳಿಗೆ ಸ್ಥಿರೀಕರಣ ಮತ್ತು ಪರಿಷ್ಕೃತ ಅಂದಾಜು ಪಟ್ಟಿಗೆ ಅನುಮೋದನೆ ಕೋರಿ ಘನ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-12-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:14-12-2012ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:14-12-2012ರ ನಿರ್ಣಯವನ್ನು ಒಪ್ಪುತ್ತಾ, ಈಗಾಗಲೇ ಕಾಮಗಾರಿ ಪೂರ್ಣಗೊಂಡಿರುವುದರಿಂದ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಈ.ಐ.ಆರ್.ಎಲ್. ವರ್ಕ್ ಸ್ಲಿಪ್ ಮೊತ್ತದಲ್ಲಿ ಶೇಕಡ 80 ರಷ್ಟು ಹಣವನ್ನು ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು".

................................4

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 14-12-2012ರ ನಿರ್ಣಯವನ್ನು ಒಪ್ಪುತ್ತಾ, ಈಗಾಗಲೇ ಕಾಮಗಾರಿ ಪೂರ್ಣಗೊಂಡಿರುವುದರಿಂದ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಈ.ಐ.ಆರ್.ಎಲ್. ವರ್ಕ್ ಸ್ಲಿಪ್ ಮೊತ್ತದಲ್ಲಿ ಶೇಕಡ 80 ರಷ್ಟು ಹಣವನ್ನು ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು